Re. No. D. 221

सत्यमेव जयते

# भारत का राजपत्र
# The Gazette of India
# ಭಾರತ ರಾಜಪತ್ರ

**( EXTRAORDINARY )**
( ವಿಶೇಷ ಸಂಚಿಕೆ )

| | |
|---|---|
| भाग IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | | |
|---|---|---|---|
| सं. १ | नई दिल्ली, गुरुवार, जून ४, २०२० | ज्येष्ठ २२, १९४२ (शका) | खंड ४९ |
| No. 1 | New Delhi, Thursday, June 4, 2020 | Jyeshta 22, 1942 (Saka) | Vol. 49 |
| ನಂ. ೧ | ನವ ದೆಹಲಿ, ಗುರುವಾರ, ಜೂನ್ ೪, ೨೦೨೦ | ಜ್ಯೇಷ್ಠ ೨೨, ೧೯೪೨ (ಶಕ) | ಸಂಪುಟ ೪೯ |

**Ministry of Law and Justice**
Legislative Department
New Delhi, 04th June, 2020

ಕಾನೂನು ಮತ್ತು ನ್ಯಾಯ ಮಂತ್ರಾಲಯ
ವಿಧಾಯೀ ಇಲಾಖೆ
**ನವದೆಹಲಿ, 04ನೇ ಜೂನ್ 2020**

The Translation in Kannada of the following Acts, namely:- (1) The Public Debt Act, 1944 (18 of 1944) (2) The Dock Workers (Safety, Health and Welfare) Act, 1986 (54 of 1986) (3) The Building and Other Construction Workers' (Regulation of Employment and Conditions of Service) Act, 1996 (27 of 1996) (4) The Building and Other Construction Worker's Welfare Cess Act, 1996 (28 of 1996) (5) The Petroleum and Natural Gas Regulatory Board Act, 2006 (19 of 2006) (6) The Warehousing (Development and Regulation Act), 2007 (37 of 2007) (7) The Carriage by Road Act, 2007 (41 of 2007) (8) The Collection of Statistics Act, 2008 (7 of 2009) (9) The Protection of Children from Sexual Offences Act, 2012 (32 of 2012) (10) The Prohibition of Employment as Manual Scavengers and their Rehabilitation Act, 2013 - are hereby published under the authority of the President and shall be deemed to be authoritative text thereof in Kannada under clause (a) of Section 2 of the Authoritative Texts (Central Laws) Act, 1973 (50 of 1973)

# ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ವಿನಿಯಾಮಕ ಮಂಡಳಿ ಅಧಿನಿಯಮ, 2006

## (2006ರ ಅಧಿನಿಯಮ ಸಂಖ್ಯೆ 19)

[31ನೇ ಮಾರ್ಚ್, 2006]

ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಮತ್ತು ನೈಸರ್ಗಿಕ ಅನಿಲದ ಗ್ರಾಹಕರ ಹಾಗೂ ಅವುಗಳಿಗೆ ಸಂಬಂಧಪಟ್ಟ ನಿರ್ದಿಷ್ಟ ಕಾರ್ಯಚಟುವಟಿಕೆಗಳಲ್ಲಿ ತೊಡಗಿರುವ ಸಂಸ್ಥೆಗಳ ಹಿತಾಸಕ್ತಿಗಳನ್ನು ಕಾಪಾಡುವ ಸಲುವಾಗಿ ಮತ್ತು ದೇಶದ ಎಲ್ಲ ಭಾಗಗಳಲ್ಲಿ ಪೆಟ್ರೋಲಿಯಂ, ಪೆಟ್ರೋಲಿಯಂ ಉತ್ಪನ್ನಗಳು ಮತ್ತು ನೈಸರ್ಗಿಕ ಅನಿಲವು ಅಡೆತಡೆಯಿಲ್ಲದೆ ಹಾಗೂ ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಆಗುವುದನ್ನು ಸುನಿಶ್ಚಿತಪಡಿಸಿಕೊಳ್ಳುವ ಸಲುವಾಗಿ ಮತ್ತು ಸ್ಪರ್ಧಾತ್ಮಕ ಮಾರುಕಟ್ಟೆಗಳಿಗೆ ಉತ್ತೇಜನ ನೀಡುವ ಸಲುವಾಗಿ, ಕಚ್ಚಾ ತೈಲದ ಮತ್ತು ನೈಸರ್ಗಿಕ ಅನಿಲದ ಉತ್ಪಾದನೆಯನ್ನು ಹೊರತುಪಡಿಸಿ, ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಮತ್ತು ನೈಸರ್ಗಿಕ ಅನಿಲದ ಶುದ್ಧೀಕರಣವನ್ನು, ಸಂಸ್ಕರಣೆಯನ್ನು, ಸಂಗ್ರಹಣೆಯನ್ನು, ಸಾಗಣೆಯನ್ನು, ವಿತರಣೆಯನ್ನು, ಕ್ರಯವಿಕ್ರಯವನ್ನು ಮತ್ತು ಮಾರಾಟವನ್ನು ನಿಯಂತ್ರಿಸುವುದಕ್ಕಾಗಿ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ವಿನಿಯಾಮಕ ಮಂಡಳಿಯನ್ನು ಸ್ಥಾಪಿಸುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ಐವತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

### ಅಧ್ಯಾಯ – I

### ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ.**– (1) ಈ ಅಧಿನಿಯಮವನ್ನು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ವಿನಿಯಾಮಕ ಮಂಡಳಿ ಅಧಿನಿಯಮ, 2006 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ * ದಿನಾಂಕದಂದು ಜಾರಿಗೆ ಬರತಕ್ಕದ್ದು:

ಪರಂತು, ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಹಾಗೂ ಅಂಥ ಯಾವುದೇ ಉಪಬಂಧದಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಮಾಡಿರುವ ಯಾವುದೇ ಉಲ್ಲೇಖವನ್ನು ಆ ಉಪಬಂಧವು ಜಾರಿಗೆ ಬರುವ ದಿನಾಂಕಕ್ಕೆ ಮಾಡಲಾದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

(4) ಇದು ಕಚ್ಚಾ ತೈಲದ ಮತ್ತು ನೈಸರ್ಗಿಕ ಅನಿಲದ ಉತ್ಪಾದನೆಯನ್ನು ಹೊರತುಪಡಿಸಿ, ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಮತ್ತು ನೈಸರ್ಗಿಕ ಅನಿಲದ ಶುದ್ಧಿಕರಣಕ್ಕೆ, ಸಂಸ್ಕರಣೆಗೆ, ಸಂಗ್ರಹಣೆಗೆ, ಸಾಗಣೆಗೆ, ವಿತರಣೆಗೆ, ಕ್ರಯವಿಕ್ರಯಕ್ಕೆ ಮತ್ತು ಮಾರಾಟಕ್ಕೆ ಅನ್ವಯವಾಗುತ್ತದೆ.

2. **ಪರಿಭಾಷೆಗಳು.**– ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,

(ಎ) "ಅಂಗಸಂಸ್ಥೆ ನೀತಿ ಸಂಹಿತೆ" ಎಂದರೆ 21ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ನೈಸರ್ಗಿಕ ಅನಿಲದ ಸಂಗ್ರಹಣೆಯಲ್ಲಿ, ಸಾಗಣೆಯಲ್ಲಿ, ವಿತರಣೆಯಲ್ಲಿ, ಕ್ರಯ ವಿಕ್ರಯದಲ್ಲಿ ಮತ್ತು ಮಾರಾಟದಲ್ಲಿ ತೊಡಗಿರುವ ಸಂಸ್ಥೆಗಳನ್ನು ನಿಯಂತ್ರಿಸುವ ನೀತಿ ಸಂಹಿತೆ;

(ಬಿ) "ಅಪೀಲು ನ್ಯಾಯಾಧಿಕರಣ" ಎಂದರೆ 30ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಅಪೀಲು ನ್ಯಾಯಾಧಿಕರಣ;

(ಸಿ) "ಗೊತ್ತುಪಡಿಸಿದ ದಿನ" ಎಂದರೆ, 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಮಂಡಳಿಯನ್ನು ಯಾವ ದಿನಾಂಕದಂದು ಸ್ಥಾಪಿಸಲಾಯಿತೋ ಆ ದಿನಾಂಕ;

(ಡಿ) "ಅಧಿಕೃತ ಸಂಸ್ಥೆ" ಎಂದರೆ:-

(ಎ) 15ನೇ ಪ್ರಕರಣದ ಮೇರೆಗೆ ಮಂಡಳಿಯಿಂದ,-

(i) ಯಾವುದೇ ಅಧಿಸೂಚಿತ ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಅಥವಾ ನೈಸರ್ಗಿಕ ಅನಿಲದ ಕ್ರಯ-ವಿಕ್ರಯ ಮಾಡಲು; ಅಥವಾ

(ii) ದ್ರವೀಕೃತ ನೈಸರ್ಗಿಕ ಅನಿಲ ತೈಲಾಗಾರಗಳನ್ನು ಸ್ಥಾಪಿಸಲು ಮತ್ತು ನಿರ್ವಹಿಸಲು – ನೋಂದಾಯಿತವಾದ ಸಂಸ್ಥೆ; ಅಥವಾ

(ಬಿ) 16ನೇ ಪ್ರಕರಣದ ಮೇರೆಗೆ ಮಂಡಳಿಯಿಂದ,-

(i) ಸಾಮಾನ್ಯ ವಾಹಕ ಅಥವಾ ಕರಾರು ವಾಹಕವನ್ನು ವಿನ್ಯಾಸಗೊಳಿಸಲು, ನಿರ್ಮಿಸಲು, ನಿರ್ವಹಿಸಲು ಅಥವಾ ವಿಸ್ತರಿಸಲು; ಅಥವಾ

---

* ದಿನಾಂಕ: 01-10-2007 ರಿಂದ ಜಾರಿಗೆ ಬಂದಿದೆ, ನೋಡಿ, ಜಿಎಸ್‌ಆರ್ 637(ಎ) ದಿನಾಂಕ:01-10-2007 (16ನೇ ಪ್ರಕರಣದ ಹೊರತು)

(ii) ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣೆ ಜಾಲವನ್ನು ವಿನ್ಯಾಸಗೊಳಿಸಲು, ನಿರ್ಮಿಸಲು, ನಿರ್ವಹಿಸಲು ಅಥವಾ ವಿಸ್ತರಿಸಲು

–ಅಧಿಕೃತಗೊಂಡ ಸಂಸ್ಥೆ.

(ಇ) "ಸ್ವಯಂ ದ್ರವೀಕೃತ ಪೆಟ್ರೋಲಿಯಂ ಅನಿಲ" ಎಂದರೆ ಸಾಮಾನ್ಯ ವಾತಾವರಣದ ಉಷ್ಣತೆಯಲ್ಲಿ ಮತ್ತು ವಾಯುಂಡಲದ ಒತ್ತಡದಲ್ಲಿ ಅನಿಲ ಸ್ಥಿತಿಯಲ್ಲಿರುವ, ಆದರೆ ಸಾಧಾರಣ ಒತ್ತಡವನ್ನು ಹಾಕುವ ಮೂಲಕ ಸಾಮಾನ್ಯ ವಾತಾವರಣದ ಉಷ್ಣತೆಯಲ್ಲಿ ದ್ರವ ಸ್ಥಿತಿಗೆ ಸಾಂದ್ರೀಕರಿಸಬಹುದಾದ ಹಾಗೂ ಕೇಂದ್ರ ಸರ್ಕಾರವು ಭಾರತೀಯ ಮಾನಕಗಳ ಬ್ಯೂರೋದೊಂದಿಗೆ ಸಮಾಲೋಚಿಸಿ ವಾಹನಗಳಲ್ಲಿ ಇಂಧನವಾಗಿ ಬಳಸುವುದಕ್ಕಾಗಿ ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ ತಪಶೀಲುಗಳಿಗೆ ಅನುಗುಣವಾಗಿರುವ, ಪೆಟ್ರೋಲಿಯಂನಿಂದ ನಿಷ್ಪನ್ನವಾದ ಕೆಲವು ಹಗುರ ಹೈಡ್ರೋಕಾರ್ಬನ್‌ಗಳ ಮಿಶ್ರಣ;

(ಎಫ್) "ಮಂಡಳಿ" ಎಂದರೆ 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಸ್ಥಾಪಿಸಿದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ವಿನಿಯಾಮಕ ಮಂಡಳಿ;

(ಜಿ) "ಭಾರತೀಯ ಮಾನಕಗಳ ಬ್ಯೂರೋ" ಎಂದರೆ ಭಾರತೀಯ ಮಾನಕಗಳ ಬ್ಯೂರೋ ಅಧಿನಿಯಮ, 1986 (1986ರ ಅಧಿನಿಯಮ ಸಂಖ್ಯೆ 63)ರ ಮೇರೆಗೆ ಸ್ಥಾಪಿಸಿದ ಭಾರತೀಯ ಮಾನಕಗಳ ಬ್ಯೂರೋ;

(ಎಚ್) "ಅಧ್ಯಕ್ಷ" ಎಂದರೆ 4ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ಮಂಡಳಿಯ ಅಧ್ಯಕ್ಷ;

(ಐ) "ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲ" ಎಂದರೆ ಬೃಹತ್ ಪೂರೈಕೆಯ ಅಧಿಕ ಒತ್ತಡದ ಸಾಗಣೆಯ ಮುಖ್ಯ ಕೊಳವೆ ಮಾರ್ಗದಿಂದ ಮಧ್ಯಮ ಒತ್ತಡದ ವಿತರಣಾ ಗ್ರಿಡ್‌ಗೆ ನೈಸರ್ಗಿಕ ಅನಿಲವನ್ನು ಸಾಗಿಸುವುದಕ್ಕಾಗಿ ಮತ್ತು ಆ ತರುವಾಯ ಮನೆ ಬಳಕೆಗೆ, ಕೈಗಾರಿಕೆ ಅಥವಾ ವಾಣಿಜ್ಯ ಆವರಣಗಳಿಗೆ ಹಾಗೂ ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ಇರುವ ಸಿಎನ್‌ಜಿ ಕೇಂದ್ರಗಳಿಗೆ ನೈಸರ್ಗಿಕ ಅನಿಲವನ್ನು ಸಾಗಿಸುವುದಕ್ಕಾಗಿ ಬಳಸುವ ಅನಿಲ ಕೊಳವೆ ಮಾರ್ಗಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಸಾಧನ ಸಲಕರಣೆಗಳನ್ನು ಪರಸ್ಪರ ಸಂಪರ್ಕಿಸುವ ಜಾಲ;

**ವಿವರಣೆ.**– ಈ ಖಂಡದ ಉದ್ದೇಶಗಳಿಗಾಗಿ, "ಅಧಿಕ ಒತ್ತಡ" ಮತ್ತು "ಮಧ್ಯಮ ಒತ್ತಡ" ಎಂದರೆ ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಅಧಿಕ ಒತ್ತಡ ಎಂದು ಅಥವಾ ಸಂದರ್ಭಾನುಸಾರ ಮಧ್ಯಮ ಒತ್ತಡ ಎಂದು ನಿರ್ದಿಷ್ಟಪಡಿಸಬಹುದಾದಂಥ ಒತ್ತಡ;

(ಜೆ) "ಸಾಮಾನ್ಯ ವಾಹಕ" ಎಂದರೆ 20ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ತಾರತಮ್ಯ ರಹಿತ ಮುಕ್ತ ಅವಕಾಶದ ಆಧಾರದ ಮೇಲೆ ಕಾಲಕಾಲಕ್ಕೆ ಮಂಡಳಿಯು ಘೋಷಿಸಬಹುದಾದಂಥ ಅಥವಾ ಅಧಿಕೃತಗೊಳಿಸಬಹುದಾದಂಥ, ಒಂದಕ್ಕಿಂತ ಹೆಚ್ಚು ಸಂಸ್ಥೆಗಳ ಮೂಲಕ ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಮತ್ತು ನೈಸರ್ಗಿಕ ಅನಿಲದ ಸಾಗಣೆಗಾಗಿ ಹಾಕಿರುವ ಕೊಳವೆ ಮಾರ್ಗಗಳು, ಆದರೆ,–

(i) ನಿರ್ದಿಷ್ಟ ಗ್ರಾಹಕನಿಗೆ ಪೆಟ್ರೋಲಿಯಂ ಉತ್ಪನ್ನಗಳನ್ನು ಅಥವಾ ನೈಸರ್ಗಿಕ ಅನಿಲವನ್ನು; ಅಥವಾ

(ii) ಕಚ್ಚಾ ತೈಲವನ್ನು

– ಪೂರೈಸುವುದಕ್ಕಾಗಿ ಹಾಕಿದ ಕೊಳವೆ ಮಾರ್ಗಗಳನ್ನು ಒಳಗೊಳ್ಳುವುದಿಲ್ಲ.

**ವಿವರಣೆ.**– ಈ ಖಂಡದ ಉದ್ದೇಶಕ್ಕಾಗಿ, ಕರಾರು ವಾಹಕವನ್ನು:–

(i) ಅಂಥ ಕರಾರು ವಾಹಕವು, ಫರ್ಮು ಮಾಡಿಕೊಂಡ ಕರಾರುಗಳಿಗಿಂತ ಹೆಚ್ಚಿನ ಹಾಗೂ ಅಧಿಕ ಸಾಮರ್ಥ್ಯವನ್ನು ಹೊಂದಿದ್ದರೆ; ಅಥವಾ

(ii) ಫರ್ಮಿನ ಕರಾರು ಅವಧಿಯು ಮುಕ್ತಾಯವಾಗಿದ್ದರೆ

– ಸಾಮಾನ್ಯ ವಾಹಕವನ್ನಾಗಿ ಪರಿಗಣಿಸತಕ್ಕದ್ದು;

(ಕೆ) "ಸಿಎನ್‌ಜಿ ಕೇಂದ್ರ" ಎಂದರೆ ಯಾವ ಅನಿಲ ತುಂಬುವ ಕೇಂದ್ರಗಳಲ್ಲಿ ಸಾಂದ್ರೀಕೃತ ನೈಸರ್ಗಿಕ ಅನಿಲದ ಮಾರಾಟಕ್ಕಾಗಿ ಒದಗಿಸಿರುವ ಒಂದು ಅಥವಾ ಹೆಚ್ಚು ವಿತರಣಾ ಘಟಕಗಳು ಇವೆಯೋ ಆ ಅನಿಲ ತುಂಬುವ ಕೇಂದ್ರ;

(ಎಲ್) "ಸಾಂದ್ರೀಕೃತ ನೈಸರ್ಗಿಕ ಅನಿಲ ಅಥವಾ ಸಿಎನ್‌ಜಿ" ಎಂದರೆ ಅನಿಲ ರೂಪದಲ್ಲಿರುವ, ನೈಸರ್ಗಿಕ ಅನಿಲವನ್ನು 200ರಿಂದ 250ರವರೆಗೆ ಬಾರ್‌ಗಳಷ್ಟು ಒತ್ತಡ ಹಾಕಿ ವಿಶಿಷ್ಟವಾಗಿ ಸಾಂದ್ರೀಕರಿಸಿದ, ವಾಹನಗಳಿಗೆ ಇಂಧನವಾಗಿ ಬಳಸುವ ನೈಸರ್ಗಿಕ ಅನಿಲ;

(ಎಂ) "ಕರಾರು ವಾಹಕ" ಎಂದರೆ 20ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಕಾಲಕಾಲಕ್ಕೆ ಮಂಡಳಿಯು ಘೋಷಿಸಬಹುದಾದಂತೆ ಅಥವಾ ಅಧಿಕೃತಗೊಳಿಸಬಹುದಾದಂತೆ ಕನಿಷ್ಠ ಒಂದು ವರ್ಷಕ್ಕಾಗಿ ಫರ್ಮಿನ ಕರಾರುಗಳಿಗೆ ಅನುಸಾರವಾಗಿ ಒಂದಕ್ಕಿಂತ ಹೆಚ್ಚು ಸಂಸ್ಥೆಗಳ ಮೂಲಕ ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಮತ್ತು ನೈಸರ್ಗಿಕ ಅನಿಲದ ಸಾಗಣೆಗಾಗಿ ಹಾಕಿರುವ ಕೊಳವೆ ಮಾರ್ಗಗಳು;

(ಎನ್) "ವ್ಯಾಪಾರಿ" ಎಂದರೆ ಯಾವುದೇ ಹೆಸರಿನಿಂದ ಕರೆಯಲಾಗುವ ಅಥವಾ ಉಲ್ಲೇಖಿಸಿರುವ ಮತ್ತು ಮೋಟಾರು ಸ್ಪಿರಿಟ್‌ಅನ್ನು, ಹೈ ಸ್ಪೀಡ್ ಡೀಸೆಲ್‌ಅನ್ನು, ಉತ್ತಮ ದರ್ಜೆ ಸೀಮೆ ಎಣ್ಣೆಯನ್ನು, ಸ್ವಯಂ ದ್ರವೀಕೃತ ಪೆಟ್ರೋಲಿಯಂ ಅನಿಲವನ್ನು ಅಥವಾ ನೈಸರ್ಗಿಕ ಅನಿಲವನ್ನು ಖರೀದಿಸಲು, ಸ್ವೀಕರಿಸಲು, ಸಂಗ್ರಹಿಸಿಡಲು ಮತ್ತು ಮಾರಾಟ ಮಾಡಲು ತೈಲ ಕಂಪನಿಯು ನೇಮಕ ಮಾಡಿದ ವ್ಯಕ್ತಿ, ವ್ಯಕ್ತಿಗಳ ಸಂಘ, ಫರ್ಮ್, ಕಂಪನಿ ಅಥವಾ ಸಹಕಾರ ಸಂಘ;

(ಒ) "ವಿತರಕ" ಎಂದರೆ ಯಾವುದೇ ಹೆಸರಿನಿಂದ ಕರೆಯಲಾಗುವ ಅಥವಾ ಉಲ್ಲೇಖಿಸಿರುವ ಮತ್ತು ಸಿಲಿಂಡರುಗಳಲ್ಲಿ ದ್ರವೀಕೃತ ಪೆಟ್ರೋಲಿಯಂ ಅನಿಲವನ್ನು ಖರೀದಿಸಲು, ಸ್ವೀಕರಿಸಲು, ಸಂಗ್ರಹಿಸಿಡಲು ಮತ್ತು ಗ್ರಾಹಕರಿಗೆ ಮಾರಾಟ ಮಾಡಲು, ಒಂದು ತೈಲ ಕಂಪನಿಯು ನೇಮಕ ಮಾಡಿದ ವ್ಯಕ್ತಿ, ವ್ಯಕ್ತಿಗಳ ಸಂಘ, ಫರ್ಮ್, ಕಂಪನಿ ಅಥವಾ ಸಹಕಾರ ಸಂಘ;

(ಪಿ) "ಸಂಸ್ಥೆ" ಎಂದರೆ, ವ್ಯಾಪಾರಿ ಅಥವಾ ವಿತರಕರನ್ನು ಹೊರತುಪಡಿಸಿ ಯಾವುದೇ ಹೆಸರಿನಿಂದ ಕರೆಯಲಾಗುವ ಅಥವಾ ಉಲ್ಲೇಖಿಸಿರುವ, ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಮತ್ತು ನೈಸರ್ಗಿಕ ಅನಿಲದ ಸಾಗಣೆಗಾಗಿ ಕೊಳವೆ ಮಾರ್ಗಗಳನ್ನು ವಿನ್ಯಾಸಗೊಳಿಸುವುದು ಅಥವಾ ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲವನ್ನು ವಿನ್ಯಾಸಗೊಳಿಸುವುದನ್ನು, ನಿರ್ಮಿಸುವುದನ್ನು, ನಿರ್ವಹಿಸುವುದನ್ನು ಅಥವಾ ವಿಸ್ತರಿಸುವುದನ್ನು ಅಥವಾ ದ್ರವೀಕೃತ ನೈಸರ್ಗಿಕ ಅನಿಲ ತೈಲಾಗಾರವನ್ನು ಸ್ಥಾಪಿಸುವುದನ್ನು ಮತ್ತು ನಿರ್ವಹಿಸುವುದನ್ನೂ ಒಳಗೊಂಡಂತೆ, ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಮತ್ತು ನೈಸರ್ಗಿಕ ಅನಿಲದ ಶುದ್ಧೀಕರಣದಲ್ಲಿ, ಸಂಸ್ಕರಣೆಯಲ್ಲಿ, ಸಂಗ್ರಹಣೆಯಲ್ಲಿ, ಸಾಗಣೆಯಲ್ಲಿ, ವಿತರಣೆಯಲ್ಲಿ, ಕ್ರಯವಿಕ್ರಯದಲ್ಲಿ, ಆಮದು ಮತ್ತು ರಫ್ತಿನಲ್ಲಿ ತೊಡಗಿರುವ ಅಥವಾ ತೊಡಗಲು ಉದ್ದೇಶಿಸಿರುವ ವ್ಯಕ್ತಿ, ವ್ಯಕ್ತಿಗಳ ಸಂಘ, ಫರ್ಮ್, ಕಂಪನಿ ಅಥವಾ ಸಹಕಾರ ಸಂಘ;

(ಕ್ಯೂ) "ಉತ್ಪನ್ನಗಳ ವಿನಿಮಯ" ಎಂದರೆ ಸಂಬಂಧಪಟ್ಟ ಸಂಸ್ಥೆಗಳು ಮಾಡಿಕೊಂಡ ಒಪ್ಪಂದಕ್ಕನುಸಾರವಾಗಿ ಪೆಟ್ರೋಲಿಯಂ ಉತ್ಪನ್ನವನ್ನು ನೀಡುವುದು ಮತ್ತು ಸ್ವೀಕರಿಸುವುದು;

(ಆರ್) "ಹೈ ಸ್ಪೀಡ್ ಡೀಸೆಲ್" ಎಂದರೆ ಕೇಂದ್ರ ಸರ್ಕಾರವು ಭಾರತೀಯ ಮಾನಕಗಳ ಬ್ಯೂರೋದೊಂದಿಗೆ ಸಮಾಲೋಚಿಸಿ ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ ಕಂಪ್ರೆಷನ್ ಇಗ್ನೀಷನ್ ಇಂಜಿನ್‌ಗಳಲ್ಲಿ ಇಂಧನವಾಗಿ ಬಳಸುವುದಕ್ಕೆ ಸಂಬಂಧಿಸಿದ ತಪಶೀಲುಗಳಿಗೆ ಅನುಗುಣವಾಗಿರುವ (ಕಲ್ಲ ತೈಲ ಖನಿಜ ಮತ್ತು ಬದಲಿ ಟರ್ಪಂಟೈನ್ ಹೊರತುಪಡಿಸಿ) ಯಾವುದೇ ಹೈಡ್ರೋಕಾರ್ಬನ್ ತೈಲ;

(ಎಸ್) "ಸೀಮೆ ಎಣ್ಣೆ ಅಥವಾ ಉತ್ತಮ ದರ್ಜೆ ಸೀಮೆ ಎಣ್ಣೆ" ಎಂದರೆ ಕೇಂದ್ರ ಸರ್ಕಾರವು ಭಾರತೀಯ ಮಾನಕಗಳ ಬ್ಯೂರೋದೊಂದಿಗೆ ಸಮಾಲೋಚಿಸಿ ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ ತಪಶೀಲುಗಳಿಗೆ ಅನುಗುಣವಾಗಿರುವ ಹೈಡ್ರೋಕಾರ್ಬನ್‌ಗಳ ಮಧ್ಯಮ ಸಾರೀಕೃತ ಮಿಶ್ರಣ;

(ಟಿ) "ದ್ರವೀಕೃತ ನೈಸರ್ಗಿಕ ಅನಿಲ ತೈಲಾಗಾರ" ಎಂದರೆ:-

(i) ದ್ರವೀಕೃತ ನೈಸರ್ಗಿಕ ಅನಿಲವನ್ನು ಸ್ವೀಕರಿಸಲು;

(ii) ದ್ರವೀಕೃತ ನೈಸರ್ಗಿಕ ಅನಿಲವನ್ನು ಸಂಗ್ರಹಿಸಿಡಲು;

(iii) ದ್ರವೀಕೃತ ನೈಸರ್ಗಿಕ ಅನಿಲವನ್ನು ಮತ್ತು ಅನಿಲವಾಗಿಸುವುದಕ್ಕೆ ಸಾಧ್ಯಮಾಡಿಕೊಡಲು; ಮತ್ತು

(iv) ಮತ್ತೆ ಅನಿಲವಾಗಿಸಿದ ದ್ರವೀಕೃತ ನೈಸರ್ಗಿಕ ಅನಿಲವನ್ನು ಸೌಲಭ್ಯದ ಎಲ್ಲೆಗಳ ಆಚೆಯವರೆಗೆ ಸಾಗಿಸುವುದಕ್ಕೆ

-ಅಗತ್ಯವಿರುವ ಸೌಲಭ್ಯಗಳು ಮತ್ತು ಮೂಲ ಸೌಕರ್ಯಗಳು;

(ಯು) "ದ್ರವೀಕೃತ ಪೆಟ್ರೋಲಿಯಂ ಅನಿಲ" ಎಂದರೆ ಸಾಮಾನ್ಯ ವಾತಾವರಣದ ಉಷ್ಣತೆಯಲ್ಲಿ ಮತ್ತು ವಾಯುಮಂಡಲದ ಒತ್ತಡದಲ್ಲಿ ಅನಿಲ ಸ್ಥಿತಿಯಲ್ಲಿರುವ, ಆದರೆ ಒತ್ತಡ ಹಾಕುವ ಮೂಲಕ ಸಾಮಾನ್ಯ ವಾತಾವರಣದ ಉಷ್ಣತೆಯಲ್ಲಿ ದ್ರವ ಸ್ಥಿತಿಗೆ ಸಾಂದ್ರೀಕರಿಸಬಹುದಾದ, ಪ್ರೋಪೇನ್, ಐಸೋಬುಟೇನ್, ನಾರ್ಮಲ್ ಬುಟೇನ್ ಅಥವಾ ಅಂಥ ಇತರ ದ್ರವ್ಯಗಳನ್ನು ಒಳಗೊಂಡಿರುವ ಮತ್ತು ಕೇಂದ್ರ ಸರ್ಕಾರವು, ಭಾರತೀಯ ಮಾನಕಗಳ ಬ್ಯುರೋದೊಂದಿಗೆ ಸಮಾಲೋಚಿಸಿ ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ ತಪಶೀಲುಗಳಿಗೆ ಅನುಗುಣವಾಗಿರುವ ಹಗುರ ಹೈಡ್ರೋಕಾರ್ಬನ್‌ಗಳ ಮಿಶ್ರಣ;

(ವಿ) "ಸ್ಥಳೀಯ ವಿತರಣಾ ಸಂಸ್ಥೆ" ಎಂದರೆ ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲವನ್ನು ವಿನ್ಯಾಸಗೊಳಿಸಲು, ನಿರ್ಮಿಸಲು, ನಿರ್ವಹಿಸಲು ಅಥವಾ ವಿಸ್ತರಿಸಲು, 20ನೇ ಪ್ರಕರಣದ ಮೇರೆಗೆ ಮಂಡಳಿಯಿಂದ ಅಧಿಕೃತಗೊಂಡ ಸಂಸ್ಥೆ;

(ಡಬ್ಲ್ಯು) "ಕ್ರಯವಿಕ್ರಯ ಸೇವಾ ಬಾಧ್ಯತೆಗಳು" ಎಂದರೆ:

(i) ಅಧಿಸೂಚಿತ ಪೆಟ್ರೋಲಿಯಂ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಸಂಬಂಧದಲ್ಲಿ, ದೂರ ಪ್ರದೇಶಗಳಲ್ಲಿ ಕ್ರಯವಿಕ್ರಯ ಮೂಲ ಸೌಕರ್ಯವನ್ನು ಮತ್ತು ಚಿಲ್ಲರೆ ವ್ಯಾಪಾರ ಮಳಿಗೆಗಳನ್ನು ಸ್ಥಾಪಿಸುವ ಬಾಧ್ಯತೆಗಳು;

(ii) ಅಧಿಸೂಚಿತ ಪೆಟ್ರೋಲಿಯಂ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಕನಿಷ್ಠ ದಾಸ್ತಾನನ್ನು ಇಟ್ಟುಕೊಂಡು ಬರುವ ಬಾಧ್ಯತೆಗಳು;

(iii) ಗ್ರಾಹಕರಿಗೆ ನೈಸರ್ಗಿಕ ಅನಿಲವನ್ನು ಸರಬರಾಜು ಮಾಡಲು ಸ್ಥಳೀಯ ವಿತರಣಾ ಸಂಸ್ಥೆಯ ಬಾಧ್ಯತೆಗಳು; ಮತ್ತು

(iv) ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಬಾಧ್ಯತೆಗಳು;

(ಎಕ್ಸ್) "ಗರಿಷ್ಠ ಚಿಲ್ಲರೆ ಬೆಲೆ" ಎಂದರೆ ಪೆಟ್ರೋಲಿಯಂಅನ್ನು, ಪೆಟ್ರೋಲಿಯಂ ಉತ್ಪನ್ನಗಳನ್ನು ಮತ್ತು ನೈಸರ್ಗಿಕ ಅನಿಲವನ್ನು ಚಿಲ್ಲರೆ ಗ್ರಾಹಕರಿಗೆ ಯಾವ ಬೆಲೆಯಲ್ಲಿ ಮಾರಬೇಕೆಂದು ಸಂಸ್ಥೆಯು ನಿಗದಿಪಡಿಸಿದೆಯೋ ಆ ಗರಿಷ್ಠ ಬೆಲೆ ಮತ್ತು ಅದರಲ್ಲಿ ಸ್ಥಳೀಯ ಅಥವಾ ಇತರ ಎಲ್ಲ ತೆರಿಗೆಗಳು, ಉಪಕರಗಳು ಮತ್ತು ಸುಂಕಗಳು ಹಾಗೂ ವ್ಯಾಪಾರಿಗಳಿಗೆ ಸಂದಾಯ ಮಾಡಬೇಕಾದ ಸಾಗಣೆ ವೆಚ್ಚ ಅಥವಾ ಕಮೀಷನ್ ಒಳಗೊಳ್ಳುತ್ತದೆ;

(ವೈ) "ಸದಸ್ಯ" ಎಂದರೆ 4ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ಮಂಡಳಿಯ ಸದಸ್ಯ ಮತ್ತು ಇದರಲ್ಲಿ ಸದಸ್ಯನು (ಕಾನೂನು) ಮತ್ತು ಅಧ್ಯಕ್ಷನು ಒಳಗೊಳ್ಳುತ್ತಾನೆ;

(ಜೆಡ್) "ಮೋಟಾರು ಸ್ಪಿರಿಟ್" ಎಂದರೆ (ಕಚ್ಚಾ ಖನಿಜ ತೈಲವನ್ನು ಹೊರತುಪಡಿಸಿ) ಸ್ಪಾರ್ಕ್ ಇಗ್ನೀಷನ್ ಇಂಜಿನ್‌ಗಳಲ್ಲಿ ಇಂಧನವಾಗಿ ಬಳಸುವ ಮತ್ತು ಕೇಂದ್ರ ಸರ್ಕಾರವು, ಭಾರತೀಯ ಮಾನಕಗಳ ಬ್ಯೂರೋದೊಂದಿಗೆ ಸಮಾಲೋಚಿಸಿ ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ ತಪಶೀಲುಗಳಿಗೆ ಅನುಗುಣವಾಗಿರುವ ಯಾವುದೇ ಹೈಡ್ರೋಕಾರ್ಬನ್ ತೈಲ;

(ಜೆಡ್ಎ) "ನೈಸರ್ಗಿಕ ಅನಿಲ" ಎಂದರೆ ಕೊಳವೆ-ಕಂಡಿಗಳಿಂದ ಪಡೆದ ಮತ್ತು ಪ್ರಮುಖವಾಗಿ ಹೈಡ್ರೊ ಕಾರ್ಬನ್‌ಗಳನ್ನು ಒಳಗೊಂಡ ಅನಿಲ ಮತ್ತು ಅದು,-

(i) ದ್ರವ ಸ್ಥಿತಿಯಲ್ಲಿರುವ ಅನಿಲವನ್ನು, ಎಂದರೆ ದ್ರವೀಕೃತ ನೈಸರ್ಗಿಕ ಅನಿಲವನ್ನು ಹಾಗೂ ಮತ್ತೆ ಅನಿಲವಾಗಿಸಿದ ದ್ರವೀಕೃತ ನೈಸರ್ಗಿಕ ಅನಿಲವನ್ನು;

(ii) ಸಾಂದ್ರೀಕೃತ ನೈಸರ್ಗಿಕ ಅನಿಲವನ್ನು;

(iii) ಸಿಎನ್‌ಜಿ ಅಥವಾ ದ್ರವೀಕೃತ ನೈಸರ್ಗಿಕ ಅನಿಲವೂ ಒಳಗೊಂಡಂತೆ ರಾಷ್ಟ್ರದ ಗಡಿಗಳಿಂದಾಚೆಯ ಕೊಳವೆ ಮಾರ್ಗಗಳ ಮೂಲಕ ಆಮದು ಮಾಡಿಕೊಂಡ ಅನಿಲವನ್ನು;

(iv) ನೈಸರ್ಗಿಕ ಅನಿಲವಾಗಿ ಗ್ಯಾಸ್ ಹೈಡ್ರೇಟ್‌ಗಳಿಂದ ಹೊರತೆಗೆದ ಅನಿಲವನ್ನು;

(v) ಕಲ್ಲಿದ್ದಲು ಸ್ತರಗಳಿಂದ ಪಡೆದ ಮಿಥೇನ್ ಎಂದರೆ ಕಲ್ಲಿದ್ದಲು ಪದರ ಮಿಥೇನ್ ಅನ್ನು

– ಒಳಗೊಳ್ಳುತ್ತದೆ, ಆದರೆ ಅಂಥ ಹೈಡ್ರೋಕಾರ್ಬನ್‌ಗಳ ಜೊತೆಗೆ ದೊರಕುವ ಹೀಲಿಯಂ ಅನ್ನು ಒಳಗೊಳ್ಳುವುದಿಲ್ಲ.

(ಜಡ್‌ಬಿ) "ಅಧಿಸೂಚನೆ" ಎಂದರೆ ರಾಜಪತ್ರದಲ್ಲಿ ಪ್ರಕಟವಾದ ಅಧಿಸೂಚನೆ ಮತ್ತು ಸಜಾತೀಯ ಅರ್ಥಗಳು ಹಾಗೂ ವ್ಯಾಕರಣ ವ್ಯತ್ಯಾಸಗಳೊಂದಿಗೆ "ಅಧಿಸೂಚಿಸಿದ" ಎಂಬ ಪದವನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

(ಜಡ್‌ಸಿ) "ಅಧಿಸೂಚಿತ ಪೆಟ್ರೋಲಿಯಂ, ಪೆಟ್ರೋಲಿಯಂ ಉತ್ಪನ್ನಗಳು ಮತ್ತು ನೈಸರ್ಗಿಕ ಅನಿಲ" ಎಂದರೆ ಕೇಂದ್ರ ಸರ್ಕಾರವು, ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಮತ್ತು ನೈಸರ್ಗಿಕ ಅನಿಲದ ಸರಬರಾಜನ್ನು ನಿರ್ವಹಿಸಿಕೊಂಡು ಬರುವುದಕ್ಕಾಗಿ ಅಥವಾ ಹೆಚ್ಚಿಸುವುದಕ್ಕಾಗಿ ಅಥವಾ ಅವು ನ್ಯಾಯ ಸಮ್ಮತವಾಗಿ ವಿತರಣೆಯಾಗುವುದನ್ನು ಸುನಿಶ್ಚಿತಪಡಿಸಿಕೊಳ್ಳುವ ಸಲುವಾಗಿ ಅಥವಾ ಅವು ಸಾಕಷ್ಟು ಪ್ರಮಾಣದಲ್ಲಿ ದೊರೆಯುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಅಧಿಸೂಚಿಸುವುದು ಅವಶ್ಯಕ ಅಥವಾ ವಿಹಿತವೆಂದು ಮನವರಿಕೆ ಮಾಡಿಕೊಂಡ ತರುವಾಯ, ಅದು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ ಪೆಟ್ರೋಲಿಯಂ, ಪೆಟ್ರೋಲಿಯಂ ಉತ್ಪನ್ನಗಳು ಮತ್ತು ನೈಸರ್ಗಿಕ ಅನಿಲ;

(ಜಡ್‌ಡಿ) "ತೈಲ ಕಂಪನಿ" ಎಂದರೆ ಪೆಟ್ರೋಲಿಯಂ, ಪೆಟ್ರೋಲಿಯಂ ಉತ್ಪನ್ನಗಳು ಮತ್ತು ನೈಸರ್ಗಿಕ ಅನಿಲಕ್ಕೆ ಸಂಬಂಧಿಸಿದ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ಕಂಪನಿಗಳ ಅಧಿನಿಯಮ, 1956ರ (1956ರ ಸಂಖ್ಯೆ 1) ಮೇರೆಗೆ ನೋಂದಾಯಿತವಾದ ಕಂಪನಿ ಮತ್ತು ಅದರಲ್ಲಿ ಯಾವುದೇ ಹೆಸರಿನಿಂದ ಕರೆಯಲಾಗುವ ಅಥವಾ ಉಲ್ಲೇಖಿಸಿರುವ, ವ್ಯಕ್ತಿಗಳ ಸಂಘ, ಸೊಸೈಟಿ ಅಥವಾ ಫರ್ಮುಗಳನ್ನು ಒಳಗೊಳ್ಳುತ್ತವೆ;

(ಜೆಡ್‌ಇ) "ಪೆಟ್ರೋಲಿಯಂ" ಎಂದರೆ ಕಚ್ಚಾ ತೈಲವು ಮತ್ತು ದ್ರವೀಕೃತ ಪೆಟ್ರೋಲಿಯಂ ಅನಿಲವೂ ಒಳಗೊಂಡಂತೆ ಯಾವುದೇ ದ್ರವರೂಪದ ಹೈಡ್ರೋಕಾರ್ಬನ್ ಅಥವಾ ಹೈಡ್ರೋಕಾರ್ಬನ್‌ಗಳ ಮಿಶ್ರಣ ಮತ್ತು ಯಾವುದೇ ದ್ರವರೂಪದ ಹೈಡ್ರೋಕಾರ್ಬನ್‌ಅನ್ನು ಒಳಗೊಂಡಿರುವ ಸುಲಭವಾಗಿ ಉರಿ ಹೊತ್ತಿಕೊಳ್ಳುವ (ದ್ರವರೂಪದ, ಜಿಗುಟಾದ ಅಥವಾ ಘನರೂಪದ) ಯಾವುದೇ ಮಿಶ್ರಣ ಹಾಗೂ "ಪೆಟ್ರೋಲಿಯಂ ಉತ್ಪನ್ನ" ಪದಾವಳಿಯನ್ನು ಪೆಟ್ರೋಲಿಯಂನಿಂದ ತಯಾರಿಸಲಾದ ಯಾವುದೇ ಉತ್ಪನ್ನವೆಂದು ಅರ್ಥೈಸತಕ್ಕದ್ದು;

(ಜೆಡ್‌ಎಫ್) "ಕೊಳವೆ ಮಾರ್ಗ ಪ್ರವೇಶ ಸಂಹಿತೆ" ಎಂದರೆ 11ನೇ ಪ್ರಕರಣದ (ಇ) ಖಂಡದ (i)ನೇ ಉಪ-ಪ್ರಕರಣದ ಮೇರೆಗೆ ಕೊಳವೆ ಮಾರ್ಗಗಳಿಗೆ ಪ್ರವೇಶ ಸೌಲಭ್ಯ ಪಡೆಯಲು ಮೂರನೇ ಪಕ್ಷಕಾರನಿಗೆ ರೂಪುರೇಷೆಯನ್ನು ಗೊತ್ತುಪಡಿಸುವ ಸಂಹಿತೆ;

(ಜೆಡ್‌ಜಿ) "ನಿಯಮಿಸಿದ" ಎಂದರೆ ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಜೆಡ್‌ಹೆಚ್) "ವಿನಿಯಮಗಳು" ಎಂದರೆ ಈ ಅಧಿನಿಯಮದ ಮೇರೆಗೆ ಮಂಡಳಿಯು ರಚಿಸಿದ ವಿನಿಯಮಗಳು;

(ಜೆಡ್‌ಐ) "ನಿರ್ಬಂಧಕ ವ್ಯಾಪಾರ ಪದ್ಧತಿ" ಎಂದರೆ ಯಾವ ವ್ಯಾಪಾರ ಪದ್ಧತಿಯು, ಯಾವುದೇ ರೀತಿಯಲ್ಲಿ ಸ್ಪರ್ಧೆಯನ್ನು ತಡೆಯುವ, ದಿಕ್ಕುತಪ್ಪಿಸುವ ಅಥವಾ ನಿರ್ಬಂಧಿಸುವ ಪರಿಣಾಮ ಹೊಂದಿದೆಯೋ ಅಥವಾ ಹೊಂದಿರಬಹುದೋ ಮತ್ತು ಅದರಲ್ಲೂ ಮುಖ್ಯವಾಗಿ,–

(i) ಉತ್ಪಾದನೆಯ ವಾಹಿನಿಗೆ ಬಂಡವಾಳ ಅಥವಾ ಸಂಪನ್ಮೂಲಗಳು ಹರಿದು ಬರುವುದನ್ನು ತಡೆಯುವ ಉದ್ದೇಶವುಳ್ಳದ್ದಾಗಿಯೋ; ಅಥವಾ

(ii) ಗ್ರಾಹಕರ ಮೇಲೆ ನ್ಯಾಯಯುತವಲ್ಲದ ವೆಚ್ಚಗಳನ್ನು ಅಥವಾ ನಿರ್ಬಂಧಗಳನ್ನು ಹೇರುವಂಥ ರೀತಿಯಲ್ಲಿ ಪೆಟ್ರೋಲಿಯಂಗೆ, ಪೆಟ್ರೋಲಿಯಂ ಉತ್ಪನ್ನಗಳಿಗೆ ಅಥವಾ ನೈಸರ್ಗಿಕ ಅನಿಲಕ್ಕೆ ಅಥವಾ ಸೇವೆಗಳಿಗೆ ಸಂಬಂಧಪಟ್ಟಂತೆ ಬೆಲೆಗಳಲ್ಲಿ ಅಥವಾ ವಶಕ್ಕೆ ಒಪ್ಪಿಸುವ ಷರತ್ತುಗಳಲ್ಲಿ ಏರುಪೇರು ಉಂಟು ಮಾಡುವ ಅಥವಾ ಮಾರುಕಟ್ಟೆಯಲ್ಲಿ ನಿರಂತರ ಸರಬರಾಜಿಗೆ ಬಾಧಕವನ್ನುಂಟುಮಾಡುವ ಉದ್ದೇಶವುಳ್ಳದ್ದಾಗಿದೆಯೋ

– ಆ ವ್ಯಾಪಾರ ಪದ್ಧತಿ;

(ಜೆಡ್‌ಜೆ) 'ಚಿಲ್ಲರೆ ವ್ಯಾಪಾರ ಮಳಿಗೆ" ಎಂದರೆ ಮೋಟಾರು ಸ್ಪಿರಿಟ್‌ನ, ಹೈ ಸ್ಪೀಡ್ ಡೀಸೆಲ್‌ನ, ಸ್ವಯಂ ದ್ರವೀಕೃತ ಪೆಟ್ರೋಲಿಯಂ ಅನಿಲದ ಅಥವಾ ನೈಸರ್ಗಿಕ ಅನಿಲದ ಮಾರಾಟಕ್ಕಾಗಿ ಒಂದು ಅಥವಾ ಹೆಚ್ಚು ವಿತರಣಾ ಪಂಪುಗಳನ್ನು ಪೆಟ್ರೋಲ್ ತುಂಬುವ ಯಾವ ಕೇಂದ್ರದಲ್ಲಿ ಒದಗಿಸಲಾಗಿದೆಯೋ ಆ ಕೇಂದ್ರ ಮತ್ತು ಅದರಲ್ಲಿ ದ್ರವೀಕೃತ ಪೆಟ್ರೋಲಿಯಂ ಅನಿಲದ ವಿತರಣಾ ಅಧಿಕಾರವು ಅಥವಾ ಉತ್ತಮ ದರ್ಜೆಯ ಸೀಮೆ ಎಣ್ಣೆಯ ವ್ಯಾಪಾರ ಅಧಿಕಾರವು ಅಥವಾ ಸಿಎನ್‌ಜಿ ಕೇಂದ್ರಗಳೂ ಒಳಗೊಳ್ಳುತ್ತವೆ;

(ಜೆಡ್‌ಕೆ) "ಚಿಲ್ಲರೆ ಮಾರಾಟ ಸೇವಾ ಬಾಧ್ಯತೆಗಳು" ಎಂದರೆ ನಿರ್ದಿಷ್ಟಪಡಿಸಿದ ಕೆಲಸದ ಅವಧಿಯಾದ್ಯಂಥ ಮತ್ತು ನಿರ್ದಿಷ್ಟಪಡಿಸಿದ ಗುಣಮಟ್ಟದಲ್ಲಿ, ಪ್ರಮಾಣದಲ್ಲಿ ಸಿಎನ್‌ಜಿ ಒಳಗೊಂಡಂತೆ ಪೆಟ್ರೋಲಿಯಂ ಅನ್ನು, ಪೆಟ್ರೋಲಿಯಂ ಉತ್ಪನ್ನಗಳನ್ನು ಮತ್ತು ನೈಸರ್ಗಿಕ ಅನಿಲವನ್ನು ಗ್ರಾಹಕರಿಗೆ ಪೂರೈಸುವುದನ್ನು ನಿರ್ವಹಿಸಿಕೊಂಡು ಬರುವುದಕ್ಕಾಗಿ ವ್ಯಾಪಾರಿಗಳ ಮತ್ತು ವಿತರಕರ ಬಾಧ್ಯತೆಗಳು ಮತ್ತು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಬಾಧ್ಯತೆಗಳು;

(ಜೆಡ್‌ಎಲ್) "ನಿಯಮಗಳು" ಎಂದರೆ ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ನಿಯಮಗಳು;

(ಜೆಡ್‌ಎಂ) "ಕಾರ್ಯದರ್ಶಿ" ಎಂದರೆ ಮಂಡಳಿಯ ಕಾರ್ಯದರ್ಶಿ;

(ಜೆಡ್‌ಎನ್) ಸಾಮಾನ್ಯ ವಾಹಕಕ್ಕೆ ಅಥವಾ ಕರಾರು ವಾಹಕಕ್ಕೆ ಅಥವಾ ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲಕ್ಕೆ ಸಂಬಂಧಿಸಿದಂತೆ "ಸಾಗಣೆ ದರ" ಎಂದರೆ ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಅಥವಾ ನೈಸರ್ಗಿಕ ಅನಿಲದ ಪ್ರತಿಯೊಂದು ಯೂನಿಟ್‌ನ ಸಾಗಣೆಗಾಗಿ ವಿನಿಯಮಗಳ ಮೂಲಕ ನಿಗದಿಪಡಿಸಬಹುದಾದಂಥ ದರ.

## ಅಧ್ಯಾಯ – II

## ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ವಿನಿಯಾಮಕ ಮಂಡಳಿ

3. **ಮಂಡಳಿಯ ಸ್ಥಾಪನೆ ಮತ್ತು ನಿಗಮನ.–** (1) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಈ ಅಧಿನಿಯಮದ ಉದ್ದೇಶಗಳಿಗಾಗಿ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ವಿನಿಯಾಮಕ ಮಂಡಳಿ ಎಂದು ಕರೆಯಲಾಗುವ ಮಂಡಳಿಯನ್ನು ಸ್ಥಾಪಿಸತಕ್ಕದ್ದು.

(2) ಮಂಡಳಿಯು, ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಚರ ಮತ್ತು ಸ್ಥಿರ ಎರಡೂ ಬಗೆಯ ಸ್ವತ್ತುಗಳನ್ನು, ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಅದು, ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಅಥವಾ ದಾವೆಗೆ ಗುರಿಯಾಗತಕ್ಕದ್ದು.

(3) ಮಂಡಳಿಯು, ಕೇಂದ್ರ ಸರ್ಕಾರವು ನೇಮಕ ಮಾಡುವ ಅಧ್ಯಕ್ಷ, ಸದಸ್ಯ (ಕಾನೂನು) ಮತ್ತು ಇತರೆ ಮೂವರು ಸದಸ್ಯರನ್ನು ಒಳಗೊಂಡಿರತಕ್ಕದ್ದು.

(4) ಮಂಡಳಿಯ ಪ್ರಧಾನ ಕಚೇರಿಯು ನವದೆಹಲಿಯಲ್ಲಿರತಕ್ಕದ್ದು ಮತ್ತು ಪ್ರಾದೇಶಿಕ ಕಚೇರಿಗಳು ಸಾರ್ವಜನಿಕ ಹಿತಾಸಕ್ತಿಯನ್ನು ಮತ್ತು ಕೆಲಸದ ಮಹತ್ವವನ್ನು ಗಮನದಲ್ಲಿರಿಸಿಕೊಂಡು ಮಂಡಳಿಯು ಅವಶ್ಯವೆಂದು ಭಾವಿಸಬಹುದಾದಂಥ ಸ್ಥಳಗಳಲ್ಲಿರತಕ್ಕದ್ದು.

4. **ಅಧ್ಯಕ್ಷನ ಮತ್ತು ಇತರ ಸದಸ್ಯರ ನೇಮಕಕ್ಕೆ ಅರ್ಹತೆಗಳು.–** (1) ಕೇಂದ್ರ ಸರ್ಕಾರವು, ಮಂಡಳಿಯ ಅಧ್ಯಕ್ಷನನ್ನು ಮತ್ತು ಇತರ ಸದಸ್ಯರನ್ನು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಕೈಗಾರಿಕೆ, ವ್ಯವಸ್ಥಾಪನೆ, ಹಣಕಾಸು, ಕಾನೂನು, ಆಡಳಿತ ಅಥವಾ ಗ್ರಾಹಕ ವ್ಯವಹಾರಗಳ ಕ್ಷೇತ್ರಗಳಲ್ಲಿ ಪ್ರಖ್ಯಾತರಾದ ವ್ಯಕ್ತಿಗಳ ಪೈಕಿಯಿಂದ ನೇಮಕ ಮಾಡತಕ್ಕದ್ದು:

ಪರಂತು, ಯಾರೇ ವ್ಯಕ್ತಿಯನ್ನು, ಅವನು, –

(ಎ) ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಲು ಅರ್ಹನಾಗಿದ್ದ ಹೊರತು; ಅಥವಾ

(ಬಿ) ಭಾರತೀಯ ಕಾನೂನು ಸೇವೆಯ ಸದಸ್ಯನಾಗಿದ್ದ ಮತ್ತು ಕನಿಷ್ಠಪಕ್ಷ ಮೂರು ವರ್ಷಗಳ ಅವಧಿಗೆ ಆ ಸೇವೆಯ ಶ್ರೇಣಿ–1ರ ಹುದ್ದೆಯನ್ನು ಧಾರಣ ಮಾಡಿದ್ದ ಹೊರತು;

– ಸದಸ್ಯ (ಕಾನೂನು) ಆಗಿ ನೇಮಕ ಮಾಡತಕ್ಕದ್ದಲ್ಲ.

(2) ಕೇಂದ್ರ ಸರ್ಕಾರವು, ಅಧ್ಯಕ್ಷನನ್ನು ಮತ್ತು ಮಂಡಳಿಯ ಸದಸ್ಯರನ್ನು ಆಯ್ಕೆ ಮಾಡುವ ಉದ್ದೇಶಗಳಿಗಾಗಿ ಹಾಗೂ ಅಪೀಲು ನ್ಯಾಯಾಧಿಕರಣದ ತಾಂತ್ರಿಕ ಸದಸ್ಯನನ್ನು (ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ) ನೇಮಕ ಮಾಡುವುದಕ್ಕಾಗಿ ಪರಿಗಣಿಸಬೇಕಾದ ವ್ಯಕ್ತಿಗಳ ಒಂದು ಪಟ್ಟಿಯನ್ನು ಸಿದ್ಧಪಡಿಸುವುದಕ್ಕಾಗಿ,–

| | | |
|---|---|---|
| (i) | ಇಂಧನ ವಲಯದ ಪ್ರಭಾರದಲ್ಲಿರುವ ಯೋಜನಾ ಆಯೋಗದ ಸದಸ್ಯ | ಅಧ್ಯಕ್ಷ; |
| (ii) | ಭಾರತ ಸರ್ಕಾರದ ಕಾರ್ಯದರ್ಶಿ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯ | ಸದಸ್ಯ; |
| (iii) | ಭಾರತ ಸರ್ಕಾರದ ಕಾರ್ಯದರ್ಶಿ, ಹಣಕಾಸು ಮಂತ್ರಾಲಯ, ಆರ್ಥಿಕ ವ್ಯವಹಾರಗಳ ಇಲಾಖೆ | ಸದಸ್ಯ; |
| (iv) | ವಾಣಿಜ್ಯ ವಿಭಾಗದ ಪ್ರಭಾರದಲ್ಲಿರುವ, ಭಾರತ ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಾಲಯ | ಸದಸ್ಯ; |
| (v) | ಭಾರತ ಸರ್ಕಾರದ ಕಾರ್ಯದರ್ಶಿ, ಕಾನೂನು ವ್ಯವಹಾರಗಳ ಇಲಾಖೆ, ಕಾನೂನು ಮತ್ತು ನ್ಯಾಯ ಮಂತ್ರಾಲಯ | ಸದಸ್ಯ |

– ಇವರನ್ನು ಒಳಗೊಂಡ, ಒಂದು ಶೋಧನಾ ಸಮಿತಿಯನ್ನು ಸ್ಥಾಪಿಸತಕ್ಕದ್ದು.

**5. ಅಧ್ಯಕ್ಷ ಮತ್ತು ಇತರ ಸದಸ್ಯರ ಪದಾವಧಿ, ಸೇವಾ ಷರತ್ತುಗಳು, ಇತ್ಯಾದಿ.–** (1) ಯಾರೇ ವ್ಯಕ್ತಿಯನ್ನು, ಅಧ್ಯಕ್ಷನನ್ನಾಗಿ ಅಥವಾ ಇತರ ಸದಸ್ಯನನ್ನಾಗಿ ನೇಮಕ ಮಾಡುವುದಕ್ಕೆ ಮೊದಲು, ಕೇಂದ್ರ ಸರ್ಕಾರವು, ಅಂಥ ವ್ಯಕ್ತಿಯು, ಅಧ್ಯಕ್ಷನಾಗಿ ಅಥವಾ ಅಂಥ ಇತರ ಸದಸ್ಯನಾಗಿ ತನ್ನ ಪ್ರಕಾರ್ಯಗಳ ನಿರ್ವಹಣೆಗೆ ಪ್ರತಿಕೂಲ ಪರಿಣಾಮಬೀರುವ ಸಂಭವವಿರುವಂಥ ಯಾವುದೇ ಆರ್ಥಿಕ ಅಥವಾ ಇತರೆ ಹಿತಾಸಕ್ತಿಯನ್ನು ಹೊಂದಿಲ್ಲವೆಂದು ಸ್ವತಃ ಮನವರಿಕೆ ಮಾಡಿಕೊಳ್ಳತಕ್ಕದ್ದು.

(2) ಅಧ್ಯಕ್ಷನು ಮತ್ತು ಇತರ ಸದಸ್ಯರು ಯಾವ ದಿನಾಂಕದಂದು ತಮ್ಮ ಪದಗಳನ್ನು ವಹಿಸಿಕೊಂಡರೋ ಆ ದಿನಾಂಕದಿಂದ ಐದು ವರ್ಷಗಳು ಅಥವಾ ಅವರಿಗೆ ಅರವತ್ತೈದು ವರ್ಷಗಳ ವಯಸ್ಸು ತುಂಬುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ತಮ್ಮ ಪದವನ್ನು ಧಾರಣ ಮಾಡತಕ್ಕದ್ದು:

ಪರಂತು, ಅಧ್ಯಕ್ಷನು ಮತ್ತು ಇತರ ಸದಸ್ಯರು ಮರು ನೇಮಕಗೊಳ್ಳಲು ಅರ್ಹರಾಗಿರತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, ಒಬ್ಬ ಸದಸ್ಯನನ್ನು ಅಧ್ಯಕ್ಷನನ್ನಾಗಿ ನೇಮಕ ಮಾಡುವುದನ್ನು ಮರು ನೇಮಕ ಎಂದು ಭಾವಿಸತಕ್ಕದ್ದಲ್ಲ.

(3) ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಒಡೆತನ ಹೊಂದಿರುವ ಅಥವಾ ಅವುಗಳ ನಿಯಂತ್ರಣದಲ್ಲಿರುವ ಉದ್ಯಮದ, ನಿಗಮದ ಅಥವಾ ಕಂಪನಿಯ ಅಥವಾ ಇತರ ಯಾವುದೇ ಸರ್ಕಾರೇತರ ಸಂಸ್ಥೆಯ ಅಥವಾ ನಿಗಮಿತ ನಿಕಾಯದ ಸೇವೆಯಲ್ಲಿರುವ ವ್ಯಕ್ತಿಯು, ಸಂದರ್ಭಾನುಸಾರ ಅಧ್ಯಕ್ಷನಾಗಿ ಅಥವಾ ಇತರ ಸದಸ್ಯನಾಗಿ ಅಧಿಕಾರ ವಹಿಸಿಕೊಳ್ಳುವುದಕ್ಕೆ ಮೊದಲು ಅಂಥ ಸೇವೆಗೆ ರಾಜೀನಾಮೆ ನೀಡತಕ್ಕದ್ದು ಅಥವಾ ಆ ಸೇವೆಯಿಂದ ನಿವೃತ್ತನಾಗತಕ್ಕದ್ದು.

(4) ಅಧ್ಯಕ್ಷನಿಗೆ ಮತ್ತು ಇತರ ಸದಸ್ಯರಿಗೆ ಸಂದಾಯ ಮಾಡಬೇಕಾದ ಸಂಬಳಗಳು ಮತ್ತು ಭತ್ಯೆಗಳು ಹಾಗೂ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಅಧ್ಯಕ್ಷನ ಅಥವಾ ಇತರ ಯಾರೇ ಸದಸ್ಯನ ಸಂಬಳವನ್ನಾಗಲಿ ಮತ್ತು ಭತ್ಯೆಗಳನ್ನಾಗಲಿ ಅಥವಾ ಸೇವೆಯ ಇತರ ನಿಬಂಧನೆಗಳನ್ನಾಗಲಿ ಮತ್ತು ಷರತ್ತುಗಳನ್ನಾಗಲಿ ಆತನ ನೇಮಕದ ತರುವಾಯ ಆತನಿಗೆ ಅನಾನುಕೂಲವಾಗುವಂತೆ ವ್ಯತ್ಯಸ್ತಗೊಳಿಸತಕ್ಕದ್ದಲ್ಲ.

(5) ಅಧ್ಯಕ್ಷನು ಅಥವಾ ಇತರ ಸದಸ್ಯನು ಕೇಂದ್ರ ಸರ್ಕಾರಕ್ಕೆ ಲಿಖಿತದಲ್ಲಿ ರಾಜೀನಾಮೆಯ ನೋಟೀಸನ್ನು ನೀಡುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು ಮತ್ತು ಅಂಥ ರಾಜೀನಾಮೆಯನ್ನು ಅಂಗೀಕರಿಸಿದ ನಂತರ, ಅಧ್ಯಕ್ಷನು ಅಥವಾ ಅಂಥ ಇತರ ಸದಸ್ಯನು ತನ್ನ ಪದವನ್ನು ತೆರವು ಮಾಡಿರುವುದಾಗಿ ಭಾವಿಸತಕ್ಕದ್ದು.

(6) ಅಧ್ಯಕ್ಷನು ಅಥವಾ ಇತರ ಯಾರೇ ಸದಸ್ಯನು, ಹಾಗೆ ಪದವನ್ನು ಧಾರಣ ಮಾಡಿರುವುದು ನಿಂತು ಹೋದ ಮೇಲೆ,–

(ಎ) ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಅಧೀನದಲ್ಲಿ ಮತ್ತೆ ನೇಮಕಗೊಳ್ಳಲು ಅನರ್ಹನಾಗತಕ್ಕದ್ದು; ಮತ್ತು

(ಬಿ) ಆತನು ಅಂಥ ಪದವನ್ನು ಧಾರಣ ಮಾಡಿರುವುದು ನಿಂತುಹೋದ ದಿನಾಂಕದಿಂದ ಎರಡು ವರ್ಷಗಳ ಅವಧಿಯವರೆಗೆ ಯಾವುದೇ ವಾಣಿಜ್ಯ ಉದ್ಯೋಗವನ್ನು ಒಪ್ಪಿಕೊಳ್ಳತಕ್ಕದ್ದಲ್ಲ.

**ವಿವರಣೆ**: ಈ ಪ್ರಕರಣದ ಉದ್ದೇಶಗಳಿಗಾಗಿ, "ವಾಣಿಜ್ಯ ಉದ್ಯೋಗ" ಎಂದರೆ ಯಾವುದೇ ಕ್ಷೇತ್ರದಲ್ಲಿ ವ್ಯಾಪಾರ, ವಾಣಿಜ್ಯ, ಕೈಗಾರಿಕೆ ಅಥವಾ ಹಣಕಾಸು ವ್ಯವಹಾರಗಳಲ್ಲಿ ತೊಡಗಿರುವ ವ್ಯಕ್ತಿಯ ಅಥವಾ ಆ ವ್ಯಕ್ತಿಯ ಏಜೆನ್ಸಿಯ ಅಧೀನದಲ್ಲಿನ ಯಾವುದೇ ಸಾಮರ್ಥ್ಯದ ಉದ್ಯೋಗ ಮತ್ತು ಇದರಲ್ಲಿ ಕಂಪನಿಯ ನಿರ್ದೇಶಕನು ಅಥವಾ ಫರ್ಮಿನ ಪಾಲುದಾರನು ಅಥವಾ ಸ್ವತಂತ್ರವಾಗಿಯಾಗಲಿ ಅಥವಾ ಫರ್ಮಿನ ಪಾಲುದಾರನಾಗಿಯಾಗಲಿ ಅಥವಾ ಸಲಹೆಗಾರನಾಗಿಯಾಗಲಿ ಅಥವಾ ಸಮಾಲೋಚಕನಾಗಿಯಾಗಲಿ ವೃತ್ತಿಯನ್ನು ಪ್ರಾರಂಭಿಸುವುದು ಸಹ ಒಳಗೊಳ್ಳುತ್ತದೆ.

6. **ಅಧ್ಯಕ್ಷನ ಅಧಿಕಾರಗಳು.**- ಅಧ್ಯಕ್ಷನು, ಮಂಡಳಿಯ ವ್ಯವಹಾರಗಳನ್ನು ನಿರ್ವಹಿಸುವಾಗ ಮತ್ತು ಸಾಮಾನ್ಯ ಮೇಲ್ವಿಚಾರಣೆ ಮಾಡುವ ಮತ್ತು ನಿರ್ದೇಶನಗಳನ್ನು ನೀಡುವ ಅಧಿಕಾರಗಳನ್ನು ಹೊಂದಿರತಕ್ಕದ್ದು ಹಾಗೂ ಮಂಡಳಿಯ ಸಭೆಗಳ ಅಧ್ಯಕ್ಷತೆಯನ್ನು ವಹಿಸುವುದರ ಜೊತೆಗೆ, ಮಂಡಳಿಯು ಆತನಿಗೆ ವಹಿಸಬಹುದಾದಂಥ ಮಂಡಳಿಯ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

7. **ಅಧ್ಯಕ್ಷನನ್ನು ಅಥವಾ ಇತರ ಯಾರೇ ಸದಸ್ಯನನ್ನು ಪದದಿಂದ ತೆಗೆದುಹಾಕುವುದು.**- ಕೇಂದ್ರ ಸರ್ಕಾರವು, ಅಧ್ಯಕ್ಷನು ಅಥವಾ ಇತರೆ ಯಾರೇ ಸದಸ್ಯನು,-

(ಎ) ದಿವಾಳಿಯೆಂದು ನ್ಯಾಯನಿರ್ಣೀತನಾಗಿದ್ದರೆ; ಅಥವಾ

(ಬಿ) ಯಾವ ಅಪರಾಧವು ನೈತಿಕ ಅಧಃಪತನವನ್ನು ಒಳಗೊಂಡಿದೆ ಎಂದು ಕೇಂದ್ರ ಸರ್ಕಾರವು ಅಭಿಪ್ರಾಯಪಡುತ್ತದೋ ಆ ಅಪರಾಧದ ಅಪರಾಧಿಯೆಂದು ನ್ಯಾಯ ನಿರ್ಣೀತನಾಗಿದ್ದರೆ; ಅಥವಾ

(ಸಿ) ಸದಸ್ಯನಾಗಿ ಕಾರ್ಯನಿರ್ವಹಿಸಲು ದೈಹಿಕವಾಗಿ ಅಥವಾ ಮಾನಸಿಕವಾಗಿ ಅಸಮರ್ಥನಾಗಿದ್ದರೆ; ಅಥವಾ

(ಡಿ) ಸದಸ್ಯನಾಗಿ ಆತನ ಪ್ರಕಾರ್ಯಗಳಿಗೆ, ಪ್ರತಿಕೂಲ ಪರಿಣಾಮ ಬೀರುವ ಸಂಭವವಿರುವಂತಹ ಹಣಕಾಸು ಅಥವಾ ಇತರ ಹಿತಾಸಕ್ತಿಗಳನ್ನು ಹೊಂದಿದ್ದರೆ; ಅಥವಾ

(ಇ) ಅವನು ತನ್ನ ಸ್ಥಾನವನ್ನು ಎಷ್ಟರಮಟ್ಟಿಗೆ ದುರುಪಯೋಗ ಪಡಿಸಿಕೊಂಡಿದ್ದಾನೆಂದರೆ ಅವನು ಪದದಲ್ಲಿ ಮುಂದುವರಿದರೆ ಸಾರ್ವಜನಿಕ ಹಿತಾಸಕ್ತಿಗೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ ಎಂಬುವಷ್ಟರಮಟ್ಟಿಗೆ ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದ್ದರೆ

- ಆತನನ್ನು ಪದದಿಂದ ತೆಗೆದುಹಾಕಬಹುದು:

ಪರಂತು, ಯಾರೇ ಅಧ್ಯಕ್ಷನನ್ನು ಅಥವಾ ಇತರ ಸದಸ್ಯನನ್ನು, ವಿಚಾರಣೆಯ ಉದ್ದೇಶಕ್ಕಾಗಿ ನೇಮಕ ಮಾಡಿದ ಯಾರೇ ವ್ಯಕ್ತಿಯು ಅಥವಾ ಸ್ಥಾಪಿಸಿದ ಪ್ರಾಧಿಕಾರವು ಹಾಗೂ ಈ ಸಂಬಂಧದಲ್ಲಿ ನಿಯಮಿಸಬಹುದಾದಂಥ ಕಾರ್ಯವಿಧಾನಕ್ಕೆ ಅನುಸಾರವಾಗಿ ವಿಚಾರಣೆಯನ್ನು ನಡೆಸಿದ ತರುವಾಯ ಅಂಥ ಕೇಂದ್ರ ಸರ್ಕಾರಕ್ಕೆ ಕಾರಣದ ಅಥವಾ ಕಾರಣಗಳ ಮೇಲೆ ಅಂಥ ವ್ಯಕ್ತಿಯನ್ನು ತೆಗೆದುಹಾಕುವುದು ವಿಹಿತವೆಂದು ಮನವರಿಕೆಯಾದ ಹೊರತು (ಡಿ) ಖಂಡದ ಅಥವಾ (ಇ) ಖಂಡದ ಮೇರೆಗೆ ಪದದಿಂದ ತೆಗೆದುಹಾಕತಕ್ಕದ್ದಲ್ಲ.

8. **ಮಂಡಳಿಯ ಸಭೆಗಳು.**- (1) ಮಂಡಳಿಯು, ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ಕಾಲಗಳಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು (ಅಂಥ ಸಭೆಗಳಲ್ಲಿ ಇರಬೇಕಾದ ಕೋರಂ ಒಳಗೊಂಡಂತೆ) ಅದರ ಸಭೆಗಳಲ್ಲಿ ಕಾರ್ಯಕಲಾಪಗಳ ನಿರ್ವಹಣೆಗೆ ಸಂಬಂಧಿಸಿದಂತೆ ಅಂಥ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

(2) ಅಧ್ಯಕ್ಷನು ಅಥವಾ ಮಂಡಳಿಯ ಸಭೆಗೆ ಹಾಜರಾಗಲು ಅವನಿಗೆ ಸಾಧ್ಯವಾಗದಿದ್ದಲ್ಲಿ, ಮಂಡಳಿಗೆ ನೇಮಕಗೊಂಡ ದಿನಾಂಕದಿಂದ ಪರಿಗಣಿಸಿದಾಗ ಅತ್ಯಂತ ಹಿರಿಯ ಸದಸ್ಯನಾಗಿರುವ, ಸಭೆಯಲ್ಲಿ ಹಾಜರಿರುವ ಸದಸ್ಯನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು:

ಪರಂತು, ಸದಸ್ಯರು ಒಂದೇ ದಿನಾಂಕದಂದು ನೇಮಕಗೊಂಡಿರುವ ಸಂದರ್ಭದಲ್ಲಿ, ವಯಸ್ಸಿನಲ್ಲಿ ಹಿರಿಯನಾದ ಸದಸ್ಯನನ್ನು ಇತರ ಸದಸ್ಯರಿಗಿಂತ ಹಿರಿಯನೆಂದು ಪರಿಗಣಿಸತಕ್ಕದ್ದು.

(3) ಮಂಡಳಿಯ ಯಾವುದೇ ಸಭೆಯ ಮುಂದೆ ಬರುವ ಎಲ್ಲ ವಿಷಯಗಳನ್ನು ಹಾಜರಿರುವ ಮತ್ತು ಮತನೀಡುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು, ಹಾಗೂ ಮತಗಳು ಸಮ-ಸಮವಾಗಿ ಬಂದ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಅವನ ಅನುಪಸ್ಥಿತಿಯಲ್ಲಿ, ಸಭೆಯ ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯು ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

(4) ಮಂಡಳಿಯ ಎಲ್ಲ ಆದೇಶಗಳನ್ನು ಮತ್ತು ತೀರ್ಮಾನಗಳನ್ನು, ಕಾರ್ಯದರ್ಶಿಯು ಅಥವಾ ಈ ಬಗ್ಗೆ ಅಧ್ಯಕ್ಷರು ವಿದ್ಯುಕ್ತವಾಗಿ ಅಧಿಕೃತಗೊಳಿಸಿದ ಮಂಡಳಿಯ ಇತರ ಯಾರೇ ಅಧಿಕಾರಿಯು ಅಧಿಪ್ರಮಾಣೀಕರಿಸತಕ್ಕದ್ದು.

9. **ಖಾಲಿಸ್ಥಾನಗಳು, ಇತ್ಯಾದಿ, ಮಂಡಳಿಯ ವ್ಯವಹರಣೆಗಳನ್ನು ಅಸಿಂಧುಗೊಳಿಸದಿರುವುದು.**- ಮಂಡಳಿಯ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು,

(ಎ) ಮಂಡಳಿಯಲ್ಲಿ ಯಾವುದೇ ಖಾಲಿಸ್ಥಾನ ಇರುವ ಅಥವಾ ಅದರ ರಚನೆಯಲ್ಲಿ ಯಾವುದೇ ನ್ಯೂನ್ಯತೆ ಇರುವ; ಅಥವಾ

(ಬಿ) ಮಂಡಳಿಯ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯ ನೇಮಕದಲ್ಲಿ ಯಾವುದೇ ನ್ಯೂನ್ಯತೆ ಇರುವ; ಅಥವಾ

(ಸಿ) ಮಂಡಳಿಯ ಕಾರ್ಯವಿಧಾನದಲ್ಲಿ, ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದಂಥ, ಯಾವುದೇ ಅಕ್ರಮತೆ ಇರುವ

– ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

**10. ಮಂಡಳಿಯ ಅಧಿಕಾರಿಗಳು ಮತ್ತು ಇತರ ನೌಕರರು.**– (1) ಕೇಂದ್ರ ಸರ್ಕಾರವು, ಮಂಡಳಿಯೊಂದಿಗೆ ಸಮಾಲೋಚಿಸಿ, ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಅಧ್ಯಕ್ಷನ ನಿಯಂತ್ರಣದಲ್ಲಿ ಚಲಾಯಿಸಲು ಮತ್ತು ನಿರ್ವಹಿಸಲು ಕಾರ್ಯದರ್ಶಿಯನ್ನು ನೇಮಕ ಮಾಡಬಹುದು:

ಪರಂತು, ಮಂಡಳಿಯ ಮೊದಲ ಕಾರ್ಯದರ್ಶಿಯ ನೇಮಕಕ್ಕೆ ಅಂಥ ಯಾವುದೇ ಸಮಾಲೋಚನೆಯ ಅವಶ್ಯಕತೆಯಿರತಕ್ಕದ್ದಲ್ಲ.

(2) ಮಂಡಳಿಯು, ತನ್ನ ಪ್ರಕಾರ್ಯಗಳ ದಕ್ಷ ನಿರ್ವಹಣೆಗಾಗಿ ತನಗೆ ನೆರವಾಗಲು ಅಗತ್ಯವಿರುವ ಇತರ ಅಧಿಕಾರಿಗಳ ಮತ್ತು ನೌಕರರ ಸಂಖ್ಯೆಯನ್ನು, ಬಗೆಯನ್ನು ಮತ್ತು ಪ್ರವರ್ಗಗಳನ್ನು ಕೇಂದ್ರ ಸರ್ಕಾರದ ಅನುಮತಿ ಪಡೆದು ನಿರ್ಧರಿಸಬಹುದು.

(3) ಮಂಡಳಿಯ ಕಾರ್ಯದರ್ಶಿಗೆ, ಇತರ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂದಾಯ ಮಾಡಬೇಕಾದ ಸಂಬಳಗಳು ಮತ್ತು ಭತ್ಯೆಗಳು ಹಾಗೂ ಅದರ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(4) ಮಂಡಳಿಯು, ತನ್ನ ಪ್ರಕಾರ್ಯಗಳ ನಿರ್ವಹಣೆಯಲ್ಲಿ ತನಗೆ ನೆರವಾಗಲು ಅಗತ್ಯವಿರುವ ಸಮಾಲೋಚಕರನ್ನು ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ನೇಮಕ ಮಾಡಬಹುದು.

## ಅಧ್ಯಾಯ – III

## ಮಂಡಳಿಯ ಪ್ರಕಾರ್ಯಗಳು ಮತ್ತು ಅಧಿಕಾರಗಳು

**11. ಮಂಡಳಿಯ ಪ್ರಕಾರ್ಯಗಳು.**– ಮಂಡಳಿಯು,–

(ಎ) ಸಂಸ್ಥೆಗಳು ನ್ಯಾಯಯುತ ವ್ಯಾಪಾರ ನಡೆಸುವುದಕ್ಕೆ ಮತ್ತು ಅವುಗಳ ನಡುವೆ ಪೈಪೋಟಿಗೆ ಉತ್ತೇಜನ ನೀಡುವ ಮೂಲಕ ಗ್ರಾಹಕರ ಹಿತಾಸಕ್ತಿಯನ್ನು ಸಂರಕ್ಷಿಸತಕ್ಕದ್ದು;

(ಬಿ) ಸಂಸ್ಥೆಗಳನ್ನು,–

(i) ಅಧಿಸೂಚಿತ ಪೆಟ್ರೋಲಿಯಂಅನ್ನು ಮತ್ತು ಪೆಟ್ರೋಲಿಯಂ ಉತ್ಪನ್ನಗಳನ್ನು ಹಾಗೂ ಕೇಂದ್ರ ಸರ್ಕಾರದ ಕರಾರು ಜನ್ಯ ಬಾಧ್ಯತೆಗಳಿಗೆ ಒಳಪಟ್ಟು, ನೈಸರ್ಗಿಕ ಅನಿಲವನ್ನು ಕ್ರಯವಿಕ್ರಯ ಮಾಡಲು;

(ii) ದ್ರವೀಕೃತ ನೈಸರ್ಗಿಕ ಅನಿಲ ತೈಲಾಗಾರಗಳನ್ನು ಸ್ಥಾಪಿಸಲು ಮತ್ತು ನಿರ್ವಹಿಸಲು;

(iii) ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸಂಗ್ರಹಣಾ ಸಾಮರ್ಥ್ಯಕ್ಕೆ ಮೀರಿ ಪೆಟ್ರೋಲಿಯಂಅನ್ನು, ಪೆಟ್ರೋಲಿಯಂ ಉತ್ಪನ್ನಗಳನ್ನು ಅಥವಾ ನೈಸರ್ಗಿಕ ಅನಿಲವನ್ನು ಸಂಗ್ರಹಿಸಿಡುವ ಸೌಲಭ್ಯಗಳನ್ನು ಸ್ಥಾಪಿಸಲು

– ನೋಂದಾಯಿಸತಕ್ಕದ್ದು.

(ಸಿ) ಸಂಸ್ಥೆಗಳಿಗೆ,–

(i) ಸಾಮಾನ್ಯ ವಾಹಕವನ್ನು ಅಥವಾ ಕರಾರು ವಾಹಕವನ್ನು ವಿನ್ಯಾಸಗೊಳಿಸಲು, ನಿರ್ಮಿಸಲು, ನಿರ್ವಹಿಸಲು, ಅಥವಾ ವಿಸ್ತರಿಸಲು;

(ii) ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲವನ್ನು ವಿನ್ಯಾಸಗೊಳಿಸಲು, ನಿರ್ಮಿಸಲು, ನಿರ್ವಹಿಸಲು ಅಥವಾ ವಿಸ್ತರಿಸಲು

– ಅಧಿಕಾರ ನೀಡತಕ್ಕದ್ದು.

(ಡಿ) ಕೊಳವೆ ಮಾರ್ಗಗಳನ್ನು ಸಾಮಾನ್ಯ ವಾಹಕ ಅಥವಾ ಕರಾರು ವಾಹಕ ಎಂದು ಘೋಷಿಸತಕ್ಕದ್ದು.

(ಇ) ವಿನಿಯಮಗಳ ಮೂಲಕ,–

(i) ಉದ್ಯಮಗಳು ನ್ಯಾಯಯುತ ವ್ಯಾಪಾರ ನಡೆಸುವುದನ್ನು ಮತ್ತು ಅವುಗಳ ನಡುವೆ ಪೈಪೋಟಿಯನ್ನು ಸುನಿಶ್ಚಿತಪಡಿಸುವ ಹಾಗೆ, ಹಾಗೂ ಆ ಉದ್ದೇಶಕ್ಕಾಗಿ ಕೊಳವೆ ಮಾರ್ಗ ಪ್ರವೇಶ ಸಂಕೇತವನ್ನು ನಿರ್ದಿಷ್ಟಪಡಿಸಲು ಸಾಮಾನ್ಯ ವಾಹಕಕ್ಕೆ ಅಥವಾ ಕರಾರು ವಾಹಕಕ್ಕೆ ಪ್ರವೇಶಾವಕಾಶವನ್ನು;

(ii) ಸಾಮಾನ್ಯ ವಾಹಕಕ್ಕೆ ಅಥವಾ ಕರಾರು ವಾಹಕಕ್ಕೆ ಸಾಗಣೆ ದರಗಳನ್ನು;

(iii) ಕೊಳವೆ ಮಾರ್ಗ ಪ್ರವೇಶ ಸಂಕೇತದ ಪ್ರಕಾರ ಸಂಸ್ಥೆಗಳು ನ್ಯಾಯಯುತ ವ್ಯಾಪಾರ ನಡೆಸುವುದನ್ನು ಮತ್ತು ಅವುಗಳ ನಡುವೆ ಪೈಪೋಟಿಯನ್ನು ಸುನಿಶ್ಚಿತಪಡಿಸುವ ಹಾಗೆ ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲಕ್ಕೆ ಪ್ರವೇಶಾವಕಾಶವನ್ನು

– ವಿನಿಯಮಿಸತಕ್ಕದ್ದು;

(ಎಫ್) ಅಧಿಸೂಚಿತ ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಹಾಗೂ ನೈಸರ್ಗಿಕ ಅನಿಲದ ಸಂಬಂಧದಲ್ಲಿ,–

(i) ಸಾಕಷ್ಟು ಪ್ರಮಾಣದಲ್ಲಿ ಲಭ್ಯವಾಗುವುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು;

(ii) ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಗ್ರಾಹಕರಿಗೆ ಸಂಸ್ಥೆಯು ನಿಗದಿಪಡಿಸಿರುವ ಗರಿಷ್ಠ ಚಿಲ್ಲರೆ ಬೆಲೆಗಳ ಬಗೆಗಿನ ಮಾಹಿತಿಯನ್ನು ಪ್ರದರ್ಶಿಸಿರುವುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು;

(iii) ಬೆಲೆಗಳ ಬಗ್ಗೆ ನಿಗಾ ಇಡತಕ್ಕದ್ದು ಮತ್ತು ಸಂಸ್ಥೆಗಳು ನಡೆಸುವ ನಿರ್ಬಂಧಕ ವ್ಯಾಪಾರ ಪದ್ಧತಿಗಳನ್ನು ತಡೆಗಟ್ಟಲು ಸುಧಾರಣಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು;

(iv) ಪೆಟ್ರೋಲಿಯಂ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ನ್ಯಾಯಸಮ್ಮತ ವಿತರಣೆಯನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು;

(v) ಚಿಲ್ಲರೆ ಮಾರಾಟ ಮಳಿಗೆಗಳಿಗೆ ಚಿಲ್ಲರೆ ಮಾರಾಟ ಸೇವಾ ಬಾಧ್ಯತೆಗಳನ್ನು ಮತ್ತು ಸಂಸ್ಥೆಗಳಿಗೆ ಕ್ರಯವಿಕ್ರಯ ಸೇವಾ ಬಾಧ್ಯತೆಗಳನ್ನು ವಿನಿಯಮಗಳ ಮೂಲಕ ಉಪಬಂಧಿಸತಕ್ಕದ್ದು ಮತ್ತು ಅವುಗಳನ್ನು ಅನುಷ್ಠಾನಗೊಳಿಸತಕ್ಕದ್ದು;

(vi) ಸಾಗಣೆ ದರಗಳ ಬಗ್ಗೆ ನಿಗಾ ಇಡತಕ್ಕದ್ದು ಮತ್ತು ಸಂಸ್ಥೆಗಳು ನಡೆಸುವ ನಿರ್ಬಂಧಕ ವ್ಯಾಪಾರ ಪದ್ಧತಿಗಳನ್ನು ತಡೆಗಟ್ಟಲು ಸುಧಾರಣಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು;

(ಜಿ) ವಿನಿಯಮಗಳ ಮೂಲಕ ನಿರ್ಧರಿಸಿದಂತೆ ಫೀಜನ್ನು ಮತ್ತು ಇತರ ಚಾರ್ಜುಗಳನ್ನು ವಿಧಿಸತಕ್ಕದ್ದು;

(ಹೆಚ್) ಪೆಟ್ರೋಲಿಯಂಗೆ, ಪೆಟ್ರೋಲಿಯಂ ಉತ್ಪನ್ನಗಳಿಗೆ ಮತ್ತು ನೈಸರ್ಗಿಕ ಅನಿಲಕ್ಕೆ ಸಂಬಂಧಿಸಿದ ಕಾರ್ಯ ಚಟುವಟಿಕೆಗಳ ಬಗ್ಗೆ ಮಾಹಿತಿ ದತ್ತಾಂಶಕೋಶವನ್ನು ನಿರ್ವಹಿಸತಕ್ಕದ್ದು;

(ಐ) ಡೌನ್ ಸ್ಟ್ರೀಂ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ವಲಯಕ್ಕೆ ಸಂಬಂಧಿಸಿದ ಕೊಳವೆ ಮಾರ್ಗದ ನಿರ್ಮಾಣ ಮತ್ತು ನಿರ್ವಹಣೆ ಹಾಗೂ ಮೂಲ ಸೌಕರ್ಯ ಯೋಜನೆಗಳೂ ಸೇರಿದಂತೆ, ಪೆಟ್ರೋಲಿಯಂಗೆ, ಪೆಟ್ರೋಲಿಯಂ ಉತ್ಪನ್ನಗಳಿಗೆ ಮತ್ತು ನೈಸರ್ಗಿಕ ಅನಿಲಕ್ಕೆ ಸಂಬಂಧಿಸಿದ ಕಾರ್ಯ ಚಟುವಟಿಕೆಗಳಲ್ಲಿ ಸುರಕ್ಷತಾ ಗುಣಮಟ್ಟಗಳನ್ನು ಒಳಗೊಂಡಂತೆ ತಾಂತ್ರಿಕ ಗುಣಮಟ್ಟಗಳನ್ನು ಮತ್ತು ತಪಶೀಲುಗಳನ್ನು ವಿನಿಯಮಗಳ ಮೂಲಕ ಗೊತ್ತುಪಡಿಸತಕ್ಕದ್ದು.

(ಜೆ) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರವು, ಅದಕ್ಕೆ ವಹಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**12. ದೂರುಗಳಿಗೆ ಮತ್ತು ಮಂಡಳಿಯಿಂದ ವಿವಾದಗಳನ್ನು ಬಗೆಹರಿಸುವುದಕ್ಕೆ ಸಂಬಂಧಿಸಿದ ಅಧಿಕಾರಗಳು.–** (1) ಮಂಡಳಿಯು,–

(ಎ) ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಮತ್ತು ನೈಸರ್ಗಿಕ ಅನಿಲದ ಶುದ್ಧೀಕರಣ, ಸಂಸ್ಕರಣೆ, ಸಂಗ್ರಹಣೆ, ಸಾಗಣೆ, ವಿತರಣೆ, ಕ್ರಯವಿಕ್ರಯ ಮತ್ತು ಮಾರಾಟಕ್ಕೆ ಸಂಬಂಧಿಸಿದ ವಿವಾದಾಂಶಗಳ ಬಗ್ಗೆ ಸಂಸ್ಥೆಗಳ ನಡುವೆ ಅಥವಾ ಸಂಸ್ಥೆಯ ಮತ್ತು ಯಾರೇ ಇತರ ವ್ಯಕ್ತಿಯ ನಡುವೆ ಉದ್ಭವಿಸುವ ಯಾವುದೇ ವಿವಾದದ ಅಥವಾ ವಿಷಯದ ಮೇಲೆ, ಪಕ್ಷಕಾರರು ಮಧ್ಯಸ್ಥಿಕೆಗೆ ಒಪ್ಪಿದ ಹೊರತು, ಅಧ್ಯಾಯ–Vರ ಉಪಬಂಧಗಳಿಗನುಸಾರವಾಗಿ ನ್ಯಾಯ ನಿರ್ಣಯ ಮಾಡಲು ಮತ್ತು ತೀರ್ಮಾನಿಸಲು;

(ಬಿ) ಈ ಮುಂದಿನವುಗಳನ್ನು ಎಂದರೆ,–

(i) ಚಿಲ್ಲರೆ ಮಾರಾಟ ಸೇವಾ ಬಾಧ್ಯತೆಗಳನ್ನು;

(ii) ಕ್ರಯವಿಕ್ರಯ ಸೇವಾ ಬಾಧ್ಯತೆಗಳನ್ನು;

(iii) ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಚಿಲ್ಲರೆ ಮಾರಾಟ ಬೆಲೆ ಪ್ರದರ್ಶಿಸುವ ಬಾಧ್ಯತೆಯನ್ನು;

(iv) ಯಾವ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು, ಕೊಳವೆ ಮಾರ್ಗವನ್ನು ಸಾಮಾನ್ಯ ವಾಹಕವಾಗಿ ಅಥವಾ ಕರಾರು ವಾಹಕವಾಗಿ ಘೋಷಿಸಲಾಗಿದೆಯೋ ಅಥವಾ ಇತರ ಸಂಸ್ಥೆಗಳಿಗೆ ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲಕ್ಕೆ ಪ್ರವೇಶಾವಕಾಶವನ್ನು ಅನುಮತಿಸಲಾಗಿತ್ತೋ ಅಥವಾ ಸಾಮಾನ್ಯ ವಾಹಕವಾಗಿ ಅಥವಾ ಕರಾರು ವಾಹಕವಾಗಿ ಕೊಳವೆ ಮಾರ್ಗವನ್ನು ವಿನ್ಯಾಸಗೊಳಿಸಲು, ನಿರ್ಮಿಸಲು, ವಿಸ್ತರಿಸಲು ಅಥವಾ ನಿರ್ವಹಿಸಲು ಸಂಸ್ಥೆಗೆ ಅಧಿಕಾರವನ್ನು ನೀಡಲಾಗಿದೆಯೋ ಅಥವಾ ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲವನ್ನು ವಿನ್ಯಾಸಗೊಳಿಸಲು, ನಿರ್ಮಿಸಲು, ವಿಸ್ತರಿಸಲು ಅಥವಾ ನಿರ್ವಹಿಸಲು ಸಂಸ್ಥೆಗೆ ಅಧಿಕಾರವನ್ನು ನೀಡಲಾಗಿದೆಯೋ ಆ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು;

(v) ಈ ಅಧಿನಿಯಮದ ಯಾವುದೇ ಇತರ ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳನ್ನು ಅಥವಾ ವಿನಿಯಮಗಳನ್ನು ಅಥವಾ ಮಾಡಿದ ಆದೇಶಗಳನ್ನು,

ಉಲ್ಲಂಘಿಸಿ ಪೆಟ್ರೋಲಿಯಂಗೆ, ಪೆಟ್ರೋಲಿಯಂ ಉತ್ಪನ್ನಗಳಿಗೆ ಮತ್ತು ನೈಸರ್ಗಿಕ ಅನಿಲಕ್ಕೆ ಸಂಬಂಧಿಸಿದಂತೆ ನಡೆಸಿದ ಕಾರ್ಯಚಟುವಟಿಕೆಗಳ ಬಗ್ಗೆ ಯಾರೇ ವ್ಯಕ್ತಿಯಿಂದ ದೂರನ್ನು ಸ್ವೀಕರಿಸಲು ಮತ್ತು ಯಾವುದೇ ವಿಚಾರಣೆಯನ್ನು ಮತ್ತು ತನಿಖೆಯನ್ನು ನಡೆಸಲು

– ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು.

(2) ಉಪ-ಪ್ರಕರಣ (1)ರ ಮೇರೆಗೆ ದೂರನ್ನು ತೀರ್ಮಾನಿಸುವಾಗ, ಮಂಡಳಿಯು, ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶಗಳನ್ನು ಮಾಡಬಹುದು ಮತ್ತು ಅಂಥ ನಿರ್ದೇಶನಗಳನ್ನು ನೀಡಬಹುದು ಅಥವಾ ಅಧ್ಯಾಯ – Vರ ಉಪಬಂಧಗಳಿಗನುಸಾರವಾಗಿ ತನಿಖೆಗೆ ವಿಷಯವನ್ನು ಒಪ್ಪಿಸಬಹುದು.

**13. ಮಂಡಳಿಯ ಕಾರ್ಯವಿಧಾನ.**– (1) ಮಂಡಳಿಯು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಗಳಿಗಾಗಿ, ಈ ಮುಂದಿನ ವಿಷಯಗಳಿಗೆ ಎಂದರೆ:–

(ಎ) ಯಾರೇ ವ್ಯಕ್ತಿಗೆ ಹಾಜರಾಗುವಂತೆ ಸಮನು ಮಾಡುವುದಕ್ಕೆ ಮತ್ತು ಒತ್ತಾಯಿಸುವುದಕ್ಕೆ ಹಾಗೂ ಪ್ರಮಾಣ ಮಾಡಿಸಿ ಅವನನ್ನು ಪರೀಕ್ಷಿಸುವುದಕ್ಕೆ;

(ಬಿ) ಭಾರತ ಸಾಕ್ಷ್ಯ ಅಧಿನಿಯಮ, 1872ರ (1872 ರ 1) 123ನೇ ಮತ್ತು 124ನೇ ಪ್ರಕರಣಗಳ ಉಪಬಂಧಗಳಿಗೊಳಪಟ್ಟು, ಯಾವುದೇ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಅಥವಾ ದಸ್ತಾವೇಜನ್ನು ಅಥವಾ ಅಂಥ ದಾಖಲೆಯ ಅಥವಾ ದಸ್ತಾವೇಜಿನ ಪ್ರತಿಯನ್ನು ಕಡ್ಡಾಯವಾಗಿ ಕೋರುವುದಕ್ಕೆ ಹಾಗೂ ಅಂಥ ದಸ್ತಾವೇಜುಗಳನ್ನು ಹಾಜರುಪಡಿಸುವುದಕ್ಕೆ;

(ಸಿ) ಅಫಿಡಾವಿಟ್‌ಗಳಲ್ಲಿ ಸಾಕ್ಷ್ಯವನ್ನು ಸ್ವೀಕರಿಸುವುದಕ್ಕೆ;

(ಡಿ) ಸಾಕ್ಷಿದಾರರನ್ನು ಅಥವಾ ದಸ್ತಾವೇಜುಗಳನ್ನು ಪರೀಕ್ಷಿಸಲು ಕಾರ್ಯಾಜ್ಞೆಗಳನ್ನು ಹೊರಡಿಸುವುದಕ್ಕೆ;

(ಇ) ಹಾಜರಾಗಲು ತಪ್ಪಿದ್ದಕ್ಕಾಗಿ ಅರ್ಜಿಯನ್ನು ವಜಾ ಮಾಡುವುದಕ್ಕೆ ಅಥವಾ ಅದನ್ನು ಏಕಪಕ್ಷೀಯವಾಗಿ ತೀರ್ಮಾನಿಸುವುದಕ್ಕೆ;

(ಎಫ್) ಹಾಜರಾಗಲು ತಪ್ಪಿದ್ದಕ್ಕಾಗಿ ಯಾವುದೇ ಅರ್ಜಿಯನ್ನು ವಜಾ ಮಾಡಿದ ಯಾವುದೇ ಆದೇಶವನ್ನು ಅಥವಾ ಏಕಪಕ್ಷೀಯವಾಗಿ ಅದು ಹೊರಡಿಸಿದ ಯಾವುದೇ ಆದೇಶವನ್ನು ತಳ್ಳಿಹಾಕುವುದಕ್ಕೆ;

(ಜಿ) ಮಧ್ಯಂತರ ಪರಿಹಾರವನ್ನು ಮಂಜೂರು ಮಾಡುವುದಕ್ಕೆ;

(ಹೆಚ್) ತನ್ನ ತೀರ್ಮಾನಗಳನ್ನು ಪುನರವಲೋಕನ ಮಾಡುವುದಕ್ಕೆ; ಮತ್ತು

(ಐ) ನಿಯಮಿಸಬಹುದಾದಂಥ ಯಾವುದೇ ಇತರ ವಿಷಯಕ್ಕೆ

– ಸಂಬಂಧಿಸಿದಂತೆ ದಾವೆಯನ್ನು ಅಧಿವಿಚಾರಣೆ ನಡೆಸುವಾಗ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ 5) ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂತಹವೇ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ಮಂಡಳಿಯ ಮುಂದೆ ಇರುವ ಪ್ರತಿಯೊಂದು ವ್ಯವಹರಣೆಯನ್ನು ಭಾರತ ದಂಡ ಸಂಹಿತೆಯ (1860 ರ 45) 193ನೇ ಮತ್ತು 228ನೇ ಪ್ರಕರಣಗಳ ಅರ್ಥವ್ಯಾಪ್ತಿಯೊಳಗೆ ಮತ್ತು 196ನೇ ಪ್ರಕರಣದ ಉದ್ದೇಶಗಳಿಗಾಗಿ ನ್ಯಾಯಿಕ ವ್ಯವಹರಣೆಯೆಂದು ಭಾವಿಸತಕ್ಕದ್ದು ಮತ್ತು ಮಂಡಲಿಯನ್ನು ದಂಡ ಪ್ರಕ್ರಿಯಾ ಸಂಹಿತೆ, 1973 ರ (1974 ರ 2) 195ನೇ ಪ್ರಕರಣದ ಮತ್ತು ಅಧ್ಯಾಯ XXVI ರ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

(3) ಮಂಡಳಿಯು, ಸಹಜ ನ್ಯಾಯ ತತ್ವಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು ಮತ್ತು ಈ ಅಧಿನಿಯಮದ ಹಾಗೂ ಅದರ ಮೇರೆಗೆ ರಚಿಸಿದ ಯಾವುವೇ ನಿಯಮಗಳ ಇತರ ಉಪಬಂಧಗಳಿಗೆ ಒಳಪಟ್ಟು ಅದು ತನ್ನ ಕಾರ್ಯಕಲಾಪಗಳನ್ನು ಯಾವ ಸ್ಥಳಗಳಲ್ಲಿ ನಡೆಸತಕ್ಕದ್ದೋ ಆ ಸ್ಥಳಗಳು ಸೇರಿದಂತೆ ತನ್ನದೇ ಕಾರ್ಯವಿಧಾನವನ್ನು ವಿನಿಯಮಿಸಿಕೊಳ್ಳುವುದಕ್ಕೆ ಅಧಿಕಾರಗಳನ್ನು ಹೊಂದಿರತಕ್ಕದ್ದು.

## ಅಧ್ಯಾಯ – IV

## ನೋಂದಣಿ ಮತ್ತು ಅಧಿಕೃತಗೊಳಿಸುವುದು

**14. ರಿಜಿಸ್ಟರ್.**– (1) ಈ ಅಧಿನಿಯಮದ ಉದ್ದೇಶಗಳಿಗಾಗಿ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ರಿಜಿಸ್ಟರು ಎಂದು ಕರೆಯಲಾಗುವ ಒಂದು ರಿಜಿಸ್ಟರನ್ನು ಮಂಡಳಿಯ ಕೇಂದ್ರ ಕಚೇರಿಯಲ್ಲಿ ಇಡತಕ್ಕದ್ದು.

(ಎ) ಅದರಲ್ಲಿ,–

(i) ಅಧಿಸೂಚಿತ ಪೆಟ್ರೋಲಿಯಂಅನ್ನು, ಪೆಟ್ರೋಲಿಯಂ ಉತ್ಪನ್ನಗಳನ್ನು ಅಥವಾ ನೈಸರ್ಗಿಕ ಅನಿಲವನ್ನು ಕ್ರಯ-ವಿಕ್ರಯ ಮಾಡುವುದಕ್ಕಾಗಿ; ಅಥವಾ

(ii) ದ್ರವೀಕೃತ ನೈಸರ್ಗಿಕ ಅನಿಲ ತೈಲಾಗಾರಗಳ ಸ್ಥಾಪನೆಗಾಗಿ ಮತ್ತು ನಿರ್ವಹಣೆಗಾಗಿ;

ಅಥವಾ

(iii) ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಅಥವಾ ನೈಸರ್ಗಿಕ ಅನಿಲದ ದಾಸ್ತಾನಿಗಾಗಿ ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸಾಮರ್ಥ್ಯವನ್ನು ಮೀರಿದ ಸೌಲಭ್ಯಗಳನ್ನು ಕಲ್ಪಿಸುವುದಕ್ಕಾಗಿ

– ನೋಂದಾಯಿತವಾದ; ಅಥವಾ

(ಬಿ) ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂತೆ,–

(i) ಸಾಮಾನ್ಯ ವಾಹಕವನ್ನು ವಿನ್ಯಾಸಗೊಳಿಸುವುದಕ್ಕಾಗಿ, ನಿರ್ಮಿಸುವುದಕ್ಕಾಗಿ, ನಿರ್ವಹಿಸುವುದಕ್ಕಾಗಿ ಅಥವಾ ವಿಸ್ತರಿಸುವುದಕ್ಕಾಗಿ; ಅಥವಾ

(ii) ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲವನ್ನು ವಿನ್ಯಾಸಗೊಳಿಸುವುದಕ್ಕಾಗಿ, ನಿರ್ಮಿಸುವುದಕ್ಕಾಗಿ, ನಿರ್ವಹಿಸುವುದಕ್ಕಾಗಿ ಅಥವಾ ವಿಸ್ತರಿಸುವುದಕ್ಕಾಗಿ

– ಅಧಿಕಾರ ಪಡೆದಿರುವಂತಹ ಸಂಸ್ಥೆಗಳ ವಿವರಗಳು ಒಳಗೊಂಡಿರತಕ್ಕದ್ದು.

(2) ಮಂಡಳಿಯು ನಿರ್ವಹಿಸಬೇಕೆಂದು ತಾತ್ಪರ್ಯವಾಗುವ ರಿಜಿಸ್ಟರಿನಲ್ಲಿ ಇರುವ ಮತ್ತು ಮಂಡಳಿಯಿಂದ ಅಧಿಕೃತಗೊಂಡ ಅಧಿಕಾರಿಯು ಪ್ರಮಾಣೀಕರಿಸಿದ ಯಾವುದೇ ನಮೂದಿನ ಪ್ರತಿಯನ್ನು ಹೆಚ್ಚಿನ ರುಜುವಾತಿಲ್ಲದೆ ಅಥವಾ ಮೂಲ ಪ್ರತಿಯನ್ನು ಹಾಜರುಪಡಿಸದೆ, ಎಲ್ಲ ನ್ಯಾಯಾಲಯಗಳಲ್ಲಿ ಮತ್ತು ಎಲ್ಲ ವ್ಯವಹರಣೆಗಳಲ್ಲಿ ಸಾಕ್ಷ್ಯವಾಗಿ ಅಂಗೀಕರಿಸತಕ್ಕದ್ದು.

(3) ರಿಜಿಸ್ಟರು, ಮಂಡಲಿಯ ಪ್ರಧಾನ ಕಚೇರಿಯಲ್ಲಿ ಸಾರ್ವಜನಿಕ ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು.

(4) ಯಾರೇ ವ್ಯಕ್ತಿಯು, ಮಂಡಳಿಗೆ ಅರ್ಜಿ ಸಲ್ಲಿಸಿ ಮತ್ತು ವಿನಿಯಮಗಳ ಮೂಲಕ ಮಂಡಳಿಯು ನಿರ್ಧರಿಸಬಹುದಾದಂಥ ಶುಲ್ಕವನ್ನು ಸಂದಾಯ ಮಾಡಿ, ರಿಜಿಸ್ಟರಿನಲ್ಲಿನ ಯಾವುದೇ ನಮೂದಿನ ಪ್ರಮಾಣೀಕೃತ ಪ್ರತಿಯನ್ನು ಪಡೆಯಬಹುದು.

**15. ಸಂಸ್ಥೆಗಳ ನೋಂದಣಿ.–** (1) ಈ ಅಧಿನಿಯಮದ ಮೇರೆಗೆ,–

(ಎ) ಯಾವುದೇ ಅಧಿಸೂಚಿತ ಪೆಟ್ರೋಲಿಯಂ ಅನ್ನು ಅಥವಾ ಪೆಟ್ರೋಲಿಯಂ ಉತ್ಪನ್ನಗಳನ್ನು ಅಥವಾ ನೈಸರ್ಗಿಕ ಅನಿಲವನ್ನು ಕ್ರಯವಿಕ್ರಯ ಮಾಡಲು; ಅಥವಾ

(ಬಿ) ದ್ರವೀಕೃತ ನೈಸರ್ಗಿಕ ಅನಿಲ ತೈಲಗಾರವನ್ನು ಸ್ಥಾಪಿಸಲು ಅಥವಾ ನಿರ್ವಹಿಸಲು; ಅಥವಾ

(ಸಿ) ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸಾಮರ್ಥ್ಯವನ್ನು ಮೀರಿ ಪೆಟ್ರೋಲಿಯಂ, ಪೆಟ್ರೋಲಿಯಂ ಉತ್ಪನ್ನಗಳು ಅಥವಾ ನೈಸರ್ಗಿಕ ಅನಿಲದ ದಾಸ್ತಾನಿಗಾಗಿ ಸೌಲಭ್ಯಗಳನ್ನು ಕಲ್ಪಿಸಲು;

– ಇಚ್ಛಿಸುವ ಮತ್ತು ನಿಯಮಿಸಬಹುದಾದಂಥ ಅರ್ಹತಾ ಷರತ್ತುಗಳನ್ನು ಈಡೇರಿಸುವ ಪ್ರತಿಯೊಂದು ಸಂಸ್ಥೆಯು, ಅದರ ನೋಂದಣಿಗಾಗಿ ಮಂಡಳಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು:

ಪರಂತು, ಈ ಅಧಿನಿಯಮದ ಮೇರೆಗೆ, ಗೊತ್ತುಪಡಿಸಿದ ದಿನದ ನಿಕಟಪೂರ್ವದಲ್ಲಿ ಖಂಡ (ಎ) ಅಥವಾ ಖಂಡ (ಬಿ) ಅಥವಾ ಖಂಡ (ಸಿ) ಯಲ್ಲಿ ಉಲ್ಲೇಖಿಸಿದ ಯಾವುದೇ ಕಾರ್ಯಚಟುವಟಿಕೆಯನ್ನು ನಡೆಸುತ್ತಿರುವ ಯಾವುದೇ ಸಂಸ್ಥೆಗೆ ಯಾವುದೇ ನೋಂದಣಿಯು ಅಗತ್ಯವಿರತಕ್ಕದ್ದಲ್ಲ. ಆದರೆ, ಗೊತ್ತುಪಡಿಸಿದ ದಿನದಿಂದ ಆರು ತಿಂಗಳುಗಳೊಳಗೆ ಅಂಥ ಕಾರ್ಯಚಟುವಟಿಕೆಯ ಬಗ್ಗೆ ಮಂಡಳಿಗೆ ತಿಳಿಸತಕ್ಕದ್ದು.

(2) ಉಪ–ಪ್ರಕರಣ (1)ರ ಮೇರೆಗೆ ನೋಂದಣಿಗಾಗಿ ಪ್ರತಿಯೊಂದು ಅರ್ಜಿಯನ್ನು ಮಂಡಳಿಯು ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಸಲ್ಲಿಸತಕ್ಕದ್ದು ಹಾಗೂ ಅರ್ಜಿಯ ಜೊತೆಗೆ ಅಂಥ ಫೀಜು ಇರತಕ್ಕದ್ದು.

(3) ಮಂಡಲಿಯು, ನಿರ್ದಿಷ್ಟಪಡಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ ಹಾಗೂ ಅಂಥ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಸಂಸ್ಥೆಯನ್ನು ಪ್ರಾರಂಭಿಸಲು ಮತ್ತು ಸಂದರ್ಭಾನುಸಾರ (1)ನೇ ಉಪ ಪ್ರಕರಣದ (ಎ) ಖಂಡದಲ್ಲಿ ಅಥವಾ (ಬಿ) ಖಂಡದಲ್ಲಿ ಅಥವಾ (ಸಿ) ಖಂಡದಲ್ಲಿ ಉಲ್ಲೇಖಿಸಿದ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗಲು ಅನುಮತಿಸುವ ನೋಂದಣಿ ಪ್ರಮಾಣಪತ್ರವನ್ನು ಸಂಸ್ಥೆಗೆ ಮಂಜೂರು ಮಾಡಬಹುದು.

(4) ಮಂಡಳಿಯು, ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ರೀತಿಯಲ್ಲಿ (3)ನೇ ಉಪ–ಪ್ರಕರಣದ ಮೇರೆಗೆ ಮಂಜೂರು ಮಾಡಿದ ನೋಂದಣಿ ಪ್ರಮಾಣಪತ್ರವನ್ನು ಆದೇಶದ ಮೂಲಕ ಅಮಾನತು ಮಾಡಬಹುದು ಅಥವಾ ರದ್ದುಗೊಳಿಸಬಹುದು:

ಪರಂತು, ಸಂಬಂಧಪಟ್ಟ ಸಂಸ್ಥೆಗೆ, ಅದರ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ಹೊರತು ಈ ಉಪ ಪ್ರಕರಣದ ಮೇರೆಗೆ ಯಾವುದೇ ಅದೇಶವನ್ನು ಮಾಡತಕ್ಕದ್ದಲ್ಲ.

**16. ಅಧಿಕೃತಗೊಳಿಸುವುದು.**– ಯಾವುದೇ ಸಂಸ್ಥೆಯು,–

(ಎ) ಸಾಮಾನ್ಯ ವಾಹಕವಾಗಿ ಅಥವಾ ಕರಾರು ವಾಹಕವಾಗಿ ಯಾವುದೇ ಕೊಳವೆ ಮಾರ್ಗದ ವಿನ್ಯಾಸವನ್ನು, ನಿರ್ಮಾಣವನ್ನು, ನಿರ್ವಹಣೆಯನ್ನು ಅಥವಾ ವಿಸ್ತರಣೆಯನ್ನು;

(ಬಿ) ಈ ಅಧಿನಿಯಮದ ಮೇರೆಗೆ ಅಧಿಕಾರ ಪಡೆಯದೆ ಯಾವುದೇ ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲದ ವಿನ್ಯಾಸವನ್ನು, ನಿರ್ಮಾಣವನ್ನು, ನಿರ್ವಹಣೆಯನ್ನು ಅಥವಾ ವಿಸ್ತರಣೆಯನ್ನು;

– ಮಾಡತಕ್ಕದ್ದಲ್ಲ:

ಪರಂತು, ಗೊತ್ತುಪಡಿಸಿದ ದಿನದ ನಿಕಟಪೂರ್ವದಲ್ಲಿ ಸಂಸ್ಥೆಯು,

(i) ಸಾಮಾನ್ಯ ವಾಹಕವಾಗಿ ಅಥವಾ ಕರಾರು ವಾಹಕವಾಗಿ ಯಾವುದೇ ಕೊಳವೆ ಮಾರ್ಗವನ್ನು ವಿನ್ಯಾಸಗೊಳಿಸಿದ್ದರೆ, ನಿರ್ಮಿಸಿದ್ದರೆ, ನಿರ್ವಹಿಸಿದ್ದರೆ ಅಥವಾ ವಿಸ್ತರಿಸಿದ್ದರೆ, ಅಥವಾ

(ii) ಯಾವುದೇ ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲವನ್ನು ವಿನ್ಯಾಸಗೊಳಿಸಿದ್ದರೆ, ನಿರ್ಮಿಸಿದ್ದರೆ, ನಿರ್ವಹಿಸಿದ್ದರೆ ಅಥವಾ ವಿಸ್ತರಿಸಿದ್ದರೆ

– ಈ ಅಧ್ಯಾಯದ ಉಪಬಂಧಗಳಿಗೆ ಒಳಪಟ್ಟು, ಅದು ಅಂಥ ಅಧಿಕಾರವನ್ನು ಹೊಂದಿತ್ತೆಂದು ಭಾವಿಸತಕ್ಕದ್ದು, ಆದರೆ ಉದ್ದೇಶದಲ್ಲಿನ ಅಥವಾ ಬಳಕೆಯಲ್ಲಿನ ಯಾವುದೇ ಬದಲಾವಣೆಗೆ ಮಂಡಲಿಯಿಂದ ಪ್ರತ್ಯೇಕ ಅಧಿಕಾರ ನೀಡಿಕೆ ಅಗತ್ಯವಿರತಕ್ಕದ್ದು.

**17. ಅಧಿಕಾರ ಪಡೆಯುವುದಕ್ಕಾಗಿ ಅರ್ಜಿ.**– (1) ಸಾಮಾನ್ಯ ವಾಹಕವಾಗಿ ಅಥವಾ ಕರಾರುವಾಹಕವಾಗಿ ಯಾವುದೇ ಕೊಳವೆಮಾರ್ಗವನ್ನು ವಿನ್ಯಾಸಗೊಳಿಸುವ, ನಿರ್ಮಿಸುವ, ನಿರ್ವಹಿಸುವ ಅಥವಾ ವಿಸ್ತರಿಸುವ ಅಥವಾ ವಿನ್ಯಾಸಗೊಳಿಸಲು, ನಿರ್ಮಿಸಲು, ನಿರ್ವಹಿಸಲು ಅಥವಾ ವಿಸ್ತರಿಸಲು ಉದ್ದೇಶಿಸಿರುವ ಸಂಸ್ಥೆಯು ಈ ಅಧಿನಿಯಮದ ಮೇರೆಗೆ ಅಧಿಕಾರವನ್ನು ಪಡೆಯಲು ಮಂಡಲಿಗೆ ಲಿಖಿತದಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು:

ಪರಂತು, ಯಾವುದೇ ಕೊಳವೆ ಮಾರ್ಗವನ್ನು ಸಾಮಾನ್ಯ ವಾಹಕವಾಗಿ ಅಥವಾ ಕರಾರು ವಾಹಕವಾಗಿ ವಿನ್ಯಾಸಗೊಳಿಸಲು, ನಿರ್ಮಿಸಲು, ನಿರ್ವಹಿಸಲು ಅಥವಾ ವಿಸ್ತರಿಸಲು ಸಂಸ್ಥೆಯು ಗೊತ್ತುಪಡಿಸಿದ ದಿನಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಕೇಂದ್ರ ಸರ್ಕಾರದಿಂದ ಅಧಿಕಾರ ಪಡೆದ ಯಾವುದೇ ಸಂಸ್ಥೆಯು ಗೊತ್ತುಪಡಿಸಿದ ದಿನದಿಂದ ಆರು ತಿಂಗಳೊಳಗೆ ಅಂಥ ಚಟುವಟಿಕೆಗಳ ಬಗ್ಗೆ ವಿವರಗಳನ್ನು ಮಂಡಳಿಗೆ ಸಲ್ಲಿಸತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲವನ್ನು ವಿನ್ಯಾಸಗೊಳಿಸುವ, ನಿರ್ಮಿಸುವ, ನಿರ್ವಹಿಸುವ ಅಥವಾ ವಿಸ್ತರಿಸುವ ಅಥವಾ ವಿನ್ಯಾಸಗೊಳಿಸಲು, ನಿರ್ಮಿಸಲು, ನಿರ್ವಹಿಸಲು ಅಥವಾ ವಿಸ್ತರಿಸಲು ಉದ್ದೇಶಿಸಿರುವ ಸಂಸ್ಥೆಯು ಅದಕ್ಕಾಗಿ ಅಧಿಕಾರವನ್ನು ಪಡೆಯಲು ಲಿಖಿತದಲ್ಲಿ ಅರ್ಜಿ ಸಲ್ಲಿಸತಕ್ಕದ್ದು:

ಪರಂತು, ಯಾವುದೇ ನಗರ ಅಥವಾ ಸ್ಥಳೀಯ ನೈಸರ್ಗಿಕ ವಿತರಣಾ ಜಾಲವನ್ನು ವಿನ್ಯಾಸಗೊಳಿಸಲು, ನಿರ್ಮಿಸಲು, ನಿರ್ವಹಿಸಲು ಅಥವಾ ವಿಸ್ತರಿಸಲು ಗೊತ್ತುಪಡಿಸಿದ ದಿನಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಕೇಂದ್ರ ಸರ್ಕಾರದಿಂದ ಅಧಿಕಾರ ಪಡೆದಿದ್ದ ಸಂಸ್ಥೆಯು ಗೊತ್ತುಪಡಿಸಿದ ದಿನದಿಂದ ಆರು ತಿಂಗಳುಗಳೊಳಗೆ ಅಂಥ ಚಟುವಟಿಕೆಗಳ ವಿವರಗಳನ್ನು ಮಂಡಳಿಗೆ ಸಲ್ಲಿಸತಕ್ಕದ್ದು.

(3) ಉಪ–ಪ್ರಕರಣ (1)ರ ಅಥವಾ ಉಪ ಪ್ರಕರಣ (2)ರ ಮೇರೆಗಿನ ಪ್ರತಿಯೊಂದು ಅರ್ಜಿಯನ್ನು ಮಂಡಳಿಯು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಸಲ್ಲಿಸತಕ್ಕದ್ದು ಹಾಗೂ ಅರ್ಜಿಯ ಜೊತೆಗೆ ಅಂಥ ಫೀಜು ಇರತಕ್ಕದ್ದು.

(4) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಮತ್ತು ಕೇಂದ್ರ ಸರ್ಕಾರವು ವಿಧಿಸಿದ ನಿಬಂಧನೆಗೆ ಮತ್ತು ಕಾರ್ಯನೀತಿ ಮಾರ್ಗಸೂಚಿಗಳಿಗೆ ಅನುಗುಣವಾಗಿ ಮಂಡಳಿಯು ತನಗೆ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಬಹುದು ಅಥವಾ ತಾನು ಸೂಕ್ತವೆಂದು ಭಾವಿಸಬಹುದಾದಂಥ ತಿದ್ದುಪಡಿಗಳು ಅಥವಾ ಷರತ್ತುಗಳು ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟು ಅಂಗೀಕರಿಸಬಹುದು.

(5) ಅರ್ಜಿಯನ್ನು ತಿರಸ್ಕರಿಸಿದ ಅಥವಾ ಷರತ್ತುಪೂರ್ವಕವಾಗಿ ಅಂಗೀಕರಿಸಿದ ಸಂದರ್ಭದಲ್ಲಿ, ಮಂಡಳಿಯು ಸಂದರ್ಭಾನುಸಾರ ಹಾಗೆ ನಿರಾಕರಿಸಿರುವುದಕ್ಕೆ ಅಥವಾ ಷರತ್ತುಪೂರ್ವಕವಾಗಿ ಅಂಗೀಕರಿಸಿರುವುದಕ್ಕೆ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು.

**18. ಅರ್ಜಿಗಳನ್ನು ಪ್ರಚುರಪಡಿಸುವುದು.**–ಅಧಿಸೂಚಿತ ಪೆಟ್ರೋಲಿಯಂಅನ್ನು, ಪೆಟ್ರೋಲಿಯಂ ಉತ್ಪನ್ನಗಳನ್ನು ಮತ್ತು ನೈಸರ್ಗಿಕ ಅನಿಲವನ್ನು ಕ್ರಯ–ವಿಕ್ರಯ ಮಾಡಲು ಅಥವಾ ದ್ರವೀಕೃತ ನೈಸರ್ಗಿಕ ಅನಿಲ ತೈಲಾಗಾರವನ್ನು ಸ್ಥಾಪಿಸಲು ಮತ್ತು ನಿರ್ವಹಿಸಲು ಅಥವಾ ಪೆಟ್ರೋಲಿಯಂಗೆ, ಪೆಟ್ರೋಲಿಯಂ ಉತ್ಪನ್ನಗಳಿಗೆ ಅಥವಾ ನೈಸರ್ಗಿಕ ಅನಿಲಗಳಿಗೆ ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸಾಮರ್ಥ್ಯವನ್ನು ಮೀರಿದ ದಾಸ್ತಾನು ಸೌಲಭ್ಯಗಳನ್ನು ಕಲ್ಪಿಸಲು ನೋಂದಣಿಗಾಗಿ ಸಲ್ಲಿಸುವ ಅರ್ಜಿಯನ್ನು ಪೂರ್ಣವಾಗಿಯಾಗಲಿ ಅಥವಾ ಷರತ್ತುಗಳಿಗೆ ಅಥವಾ ಪರಿಮಿತಿಗಳಿಗೆ ಒಳಪಟ್ಟಾಗಲಿ ಅಂಗೀಕರಿಸಿದಾಗ, ಮಂಡಳಿಯು ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಅಂಥ ಅಂಗೀಕಾರವನ್ನು ಸಾಧ್ಯವಾದಷ್ಟು ಬೇಗನೇ ಸಾರ್ವಜನಿಕರಿಗೆ ತಿಳಿಯುವಂತೆ ಮಾಡತಕ್ಕದ್ದು.

**19. ಅಧಿಕಾರ ನೀಡಿಕೆ.**– (1) ಸಾಮಾನ್ಯ ವಾಹಕವನ್ನು ಅಥವಾ ಕರಾರು ವಾಹಕವನ್ನು ವಿನ್ಯಾಸಗೊಳಿಸಲು, ನಿರ್ಮಿಸಲು, ನಿರ್ವಹಿಸಲು ಅಥವಾ ವಿಸ್ತರಿಸಲು ಅಥವಾ ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲವನ್ನು ವಿನ್ಯಾಸಗೊಳಿಸಲು,

ನಿರ್ಮಿಸಲು, ನಿರ್ವಹಿಸಲು ಅಥವಾ ವಿಸ್ತರಿಸಲು ಅಧಿಕಾರ ಪಡೆಯುವುದಕ್ಕಾಗಿ ಅರ್ಜಿಯನ್ನು ಸ್ವೀಕರಿಸಿದಾಗ ಅಥವಾ ಸ್ವಪ್ರೇರಣೆಯಿಂದ ಮಂಡಳಿಯು, ಎರಡು ನಿರ್ದಿಷ್ಟಪಡಿಸಿದ ಸ್ಥಳಗಳ ನಡುವೆ ಸಾಮಾನ್ಯ ವಾಹಕವನ್ನು ಅಥವಾ ಕರಾರು ವಾಹಕವನ್ನು ವಿನ್ಯಾಸಗೊಳಿಸುವುದು, ನಿರ್ಮಿಸುವುದು, ನಿರ್ವಹಿಸುವುದು ಅಥವಾ ವಿಸ್ತರಿಸುವುದು ಅಥವಾ ನಿರ್ದಿಷ್ಟಪಡಿಸಿದ ಭೌಗೋಳಿಕ ಪ್ರದೇಶದಲ್ಲಿ ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲವನ್ನು ವಿನ್ಯಾಸಗೊಳಿಸುವುದು, ನಿರ್ಮಿಸುವುದು, ನಿರ್ವಹಿಸುವುದು ಅಥವಾ ವಿಸ್ತರಿಸುವುದು ಅವಶ್ಯಕ ಅಥವಾ ವಿಹಿತವೆಂದು ಮಂಡಳಿಯು ಒಂದು ಅಭಿಪ್ರಾಯಕ್ಕೆ ಬಂದಾಗ, ಮಂಡಳಿಯು ಹಾಗೆ ಮಾಡುವ ತನ್ನ ಉದ್ದೇಶದ ಬಗ್ಗೆ ವ್ಯಾಪಕ ಪ್ರಚಾರವನ್ನು ಮಾಡಬಹುದು ಮತ್ತು ಅಂಥ ಕೊಳವೆ ಮಾರ್ಗಗಳನ್ನು ಅಥವಾ ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲವನ್ನು ವಿನ್ಯಾಸಗೊಳಿಸಲು, ನಿರ್ಮಿಸಲು, ನಿರ್ವಹಿಸಲು ಅಥವಾ ವಿಸ್ತರಿಸಲು ಆಸಕ್ತಿಯುಳ್ಳ ಪಕ್ಷಕಾರರಿಂದ ಅರ್ಜಿಗಳನ್ನು ಕರೆಯಬಹುದು.

(2) ಮಂಡಲಿಯು, ಅಂಥ ಚಟುವಟಿಕೆಗಳಿಗಾಗಿ ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಿದ ವಸ್ತುನಿಷ್ಠ ಮತ್ತು ಪಾರದರ್ಶಕ ರೀತಿಯಲ್ಲಿ ಸಂಸ್ಥೆಯನ್ನು ಆಯ್ಕೆ ಮಾಡಬಹುದು.

**20. ಸಾಮಾನ್ಯ ವಾಹಕವನ್ನಾಗಿ ಅಥವಾ ಕರಾರು ವಾಹಕವನ್ನಾಗಿ ಘೋಷಿಸುವುದು ಮತ್ತು ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲದ ವಿನ್ಯಾಸ, ನಿರ್ಮಾಣ, ಇತ್ಯಾದಿಯನ್ನು ಘೋಷಿಸುವುದು.–** (1) ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಮತ್ತು ನೈಸರ್ಗಿಕ ಅನಿಲದ ಸಾಗಣೆಗಾಗಿ ಹಾಲಿ ಇರುವ ಕೊಳವೆ ಮಾರ್ಗವನ್ನು ಅಥವಾ ಹಾಲಿ ಇರುವ ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿರತಣಾ ಜಾಲವನ್ನು ಸಾಮಾನ್ಯ ವಾಹಕವಾಗಿ ಅಥವಾ ಕರಾರುವಾಹಕವಾಗಿ ಘೋಷಿಸುವುದು ಅಥವಾ ಅಂಥ ಕೊಳವೆ ಮಾರ್ಗಕ್ಕೆ ಅಥವಾ ಜಾಲಕ್ಕೆ ಪ್ರವೇಶಾವಕಾಶವನ್ನು ನಿಯಂತ್ರಿಸುವುದು ಅಥವಾ ಅನುಮತಿಸುವುದು ಅವಶ್ಯಕವೆಂದು ಅಥವಾ ವಿಹಿತವೆಂದು ಮಂಡಳಿಯು ಅಭಿಪ್ರಾಯಪಟ್ಟರೆ, ಅದು ಹಾಗೆ ಮಾಡುವ ತನ್ನ ಉದ್ದೇಶವನ್ನು ವ್ಯಾಪಕವಾಗಿ ಪ್ರಚಾರ ಮಾಡಬಹುದು ಮತ್ತು ಅಂಥ ನಿರ್ಧಾರದಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಮತ್ತು ಸಂಸ್ಥೆಗಳಿಂದ ನಿರ್ದಿಷ್ಟಪಡಿಸಿದ ಕಾಲದೊಳಗೆ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಬಹುದು.

(2) ಉಪ ಪ್ರಕರಣ (1)ರ ಉದ್ದೇಶಗಳಿಗಾಗಿ, ಮಂಡಳಿಯು, ಕೊಳವೆ ಮಾರ್ಗದ ಅಥವಾ ಜಾಲದ ಮಾಲೀಕತ್ವ ಹೊಂದಿರುವ ಸಂಸ್ಥೆಗೆ ಅಹವಾಲು ಹೇಳಿಕೊಳ್ಳುವ ಅವಕಾಶವನ್ನು ಒದಗಿಸತಕ್ಕದ್ದು ಮತ್ತು ಕೊಳವೆ ಮಾರ್ಗವನ್ನು ಅಥವಾ ಜಾಲವನ್ನು ಯಾವ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಸಾಮಾನ್ಯ ವಾಹಕವೆಂದು ಅಥವಾ ಕರಾರು ವಾಹಕವೆಂದು ಘೋಷಿಸಬಹುದೋ ಆ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಗೊತ್ತುಪಡಿಸತಕ್ಕದ್ದು ಹಾಗೂ ಸಾರ್ವಜನಿಕ ಹಿತಾಸಕ್ತಿಯನ್ನು, ಪೈಪೋಟಿ ಸಾಗಣೆ ದರಗಳನ್ನು ಮತ್ತು ಪ್ರಥಮ ಬಳಕೆಯ ಹಕ್ಕನ್ನು ಗಮನದಲ್ಲಿಟ್ಟುಕೊಂಡು ಸೂಕ್ತವೆಂದು ತಾನು ಭಾವಿಸಬಹುದಾದಂಥ ಆದೇಶಗಳನ್ನು ಹೊರಡಿಸಬಹುದು.

(3) ಮಂಡಳಿಯು, 19ನೇ ಪ್ರಕರಣದ ಮತ್ತು ಈ ಪ್ರಕರಣದ (1)ನೇ ಮತ್ತು (2)ನೇ ಉಪ ಪ್ರಕರಣಗಳ ಮೇರೆಗೆ ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಿದಂಥ ಕಾರ್ಯವಿಧಾನವನ್ನು ಅನುಸರಿಸಿದ ನಂತರ ಅಧಿಸೂಚನೆಯ ಮೂಲಕ,–

(ಎ) ಕೊಳವೆ ಮಾರ್ಗವನ್ನು ಅಥವಾ ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲದ ವಿರತಣಾ ಜಾಲವನ್ನು ಸಾಮಾನ್ಯ ವಾಹಕವೆಂದು ಅಥವಾ ಕರಾರು ವಾಹಕವೆಂದು ಘೋಷಿಸಬಹುದು; ಅಥವಾ

(ಬಿ) ಕೊಳವೆ ಮಾರ್ಗವನ್ನು ಸಾಮಾನ್ಯ ವಾಹಕವಾಗಿ ಅಥವಾ ಕರಾರು ವಾಹಕವಾಗಿ ವಿನ್ಯಾಸಗೊಳಿಸಲು, ನಿರ್ಮಿಸಲು, ನಿರ್ವಹಿಸಲು ಅಥವಾ ವಿಸ್ತರಿಸಲು ಸಂಸ್ಥೆಗೆ ಅಧಿಕಾರ ನೀಡಬಹುದು; ಅಥವಾ

(ಸಿ) ಸಾಮಾನ್ಯ ವಾಹಕಕ್ಕೆ ಅಥವಾ ಕರಾರು ವಾಹಕಕ್ಕೆ ಅಥವಾ ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲಕ್ಕೆ ಪ್ರವೇಶಾವಕಾಶವನ್ನು ಅನುಮತಿಸಬಹುದು; ಅಥವಾ

(ಡಿ) ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲವನ್ನು ವಿನ್ಯಾಸಗೊಳಿಸಲು, ನಿರ್ಮಿಸಲು, ನಿರ್ವಹಿಸಲು ಅಥವಾ ವಿಸ್ತರಿಸಲು ಸಂಸ್ಥೆಗೆ ಅಧಿಕಾರ ನೀಡಬಹುದು.

(4) ಮಂಡಳಿಯು, ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲವನ್ನು ವಿನ್ಯಾಸಗೊಳಿಸಲು, ನಿರ್ಮಿಸಲು ನಿರ್ವಹಿಸಲು ಅಥವಾ ವಿಸ್ತರಿಸಲು ಎಷ್ಟು ವರ್ಷಗಳ ಅವಧಿ ಬೇಕೇ ಬೇಕಾಗುತ್ತದೆಂದು, ತಾನೇ ರಚಿಸಿದ ವಿನಿಯಮಗಳ ಮೂಲ ಗೊತ್ತುಪಡಿಸಿದ ತತ್ವಗಳಿಗೆ ಅನುಸಾರವಾಗಿ ಆದೇಶದ ಮೂಲಕ ಅದು ನಿರ್ಧರಿಸಬಹುದೋ ಆ ಅವಧಿಯನ್ನು, ಗ್ರಾಹಕ ಹಿತಾಸಕ್ತಿಯನ್ನು ಪೂರ್ಣವಾಗಿ ರಕ್ಷಿಸಿ, ಪಾರದರ್ಶಕ ರೀತಿಯಲ್ಲಿ ನಿರ್ಧರಿಸಬಹುದು.

(5) ಈ ಪ್ರಕರಣದ ಉದ್ದೇಶಗಳಿಗಾಗಿ ಮಂಡಳಿಯು, ಸಂಸ್ಥೆಗಳ ನಡುವೆ ಪೈಪೋಟಿಯನ್ನು ಉತ್ತೇಜಿಸುವ, ವ್ಯಥ ಹೂಡಿಕೆಯನ್ನು ತಪ್ಪಿಸುವ, ದೇಶಾದ್ಯಂತ ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಅಥವಾ ನೈಸರ್ಗಿಕ ಅನಿಲ ಸರಬರಾಜುಗಳನ್ನು ನಿರ್ವಹಿಸುವ ಅಥವಾ ಹೆಚ್ಚಿಸುವ ಅಥವಾ ಅವುಗಳ ನ್ಯಾಯಸಮ್ಮತ ವಿತರಣೆಯನ್ನು ಸುನಿಶ್ಚಿತಪಡಿಸಿಕೊಳ್ಳು ಅಥವಾ ಅವು ಸಾಕಷ್ಟು ಪ್ರಮಾಣದಲ್ಲಿ ದೊರೆಯುವುದನ್ನು ಖಾತ್ರಿಪಡಿಸಿಕೊಳ್ಳುವ ಉದ್ದೇಶಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು ಮತ್ತು ಮಂಡಳಿಯು ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ತತ್ವಗಳನ್ನು ಈ ಪ್ರಕರಣದ ಮೇರೆಗೆ ತನ್ನ ಪ್ರಕಾರ್ಯಗಳನ ನಿರ್ವಹಿಸುವಾಗ ಅನುಸರಿಸತಕ್ಕದ್ದು.

**21. ಮೊದಲ ಬಳಕೆಯ ಹಕ್ಕು ಇತ್ಯಾದಿ.–** (1) ಪೆಟ್ರೋಲಿಯಂನ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಸಾಗಣೆಗಾಗಿ ಕೊಳ ಮಾರ್ಗವನ್ನು ವಿನ್ಯಾಸಗೊಳಿಸುವ, ನಿರ್ಮಿಸುವ, ನಿರ್ವಹಿಸುವ ಅಥವಾ ವಿಸ್ತರಿಸುವ ಅಥವಾ ನಗರ ಅಥವಾ ಸ್ಥಳೀಯ ನೈಸರ್ಗಿ ಅನಿಲ ವಿತರಣಾ ಜಾಲವನ್ನು ವಿನ್ಯಾಸಗೊಳಿಸುವ, ನಿರ್ಮಿಸುವ, ನಿರ್ವಹಿಸುವ ಅಥವಾ ವಿಸ್ತರಿಸುವ ಸಂಸ್ಥೆಯು ತನ್ನದೇ ಅಗತ್ಯಕ್ಕಾ ಮೊದಲ ಬಳಕೆಯ ಹಕ್ಕನ್ನು ಹೊಂದಿರತಕ್ಕದ್ದು ಮತ್ತು ಉಳಿದ ಪ್ರಮಾಣವನ್ನು 20ನೇ ಪ್ರಕರಣದ ಮೇರೆಗೆ ಘೋಷಣೆಯನ ಹೊರಡಿಸಿದ ತರುವಾಯ ದೇಶದಾದ್ಯಂತ ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಕ್ರಯ-ವಿಕ್ರಯದಲ್ಲಿ ನ್ಯಾಯಯು

ಪೈಪೋಟಿ ಅಗತ್ಯತೆಯನ್ನು ಮತ್ತು ಅವುಗಳ ಲಭ್ಯತೆಯನ್ನು ಗಮನದಲ್ಲಿರಿಸಿಕೊಂಡು ಮಂಡಳಿಯು ನಿರ್ಧರಿಸಬಹುದಾದಂತೆ ಸಂಸ್ಥೆಗಳು ಬಳಸಿಕೊಳ್ಳತಕ್ಕದ್ದು:

ಪರಂತು, ನೈಸರ್ಗಿಕ ಅನಿಲದ ಕ್ರಯವಿಕ್ರಯದಲ್ಲಿ ಮತ್ತು ಸಾಮಾನ್ಯ ವಾಹಕದ ಅಥವಾ ಕರಾರು ವಾಹಕದ ಮೂಲಕ ನೈಸರ್ಗಿಕ ಅನಿಲದ ಸಾಗಣೆಗಾಗಿ ಕೊಳವೆ ಮಾರ್ಗವನ್ನು ವಿನ್ಯಾಸಗೊಳಿಸುವ, ನಿರ್ಮಿಸುವ, ನಿರ್ವಹಿಸುವ ಅಥವಾ ವಿಸ್ತರಿಸುವ ಈ ಎರಡೂ ಕಾರ್ಯದಲ್ಲಿ ತೊಡಗಿರುವ ಸಂಸ್ಥೆಯ ಸಂದರ್ಭದಲ್ಲಿ ಮಂಡಳಿಯು, ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಸಂಸ್ಥೆಗಳ ನೀತಿ ಸಂಹಿತೆಯನ್ನು ಪಾಲಿಸುವಂತೆ ಅಂಥ ಸಂಸ್ಥೆಗಳನ್ನು ಅಗತ್ಯಪಡಿಸತಕ್ಕದ್ದು ಹಾಗೂ ಮಂಡಳಿಯು ಅನುಮತಿಸಬಹುದಾದಂಥ ಅವಧಿಯೊಳಗೆ ಕೊಳವೆ ಮಾರ್ಗದ ಮಾಲೀಕತ್ವವನ್ನು ಒಳಗೊಂಡಂತೆ ನೈಸರ್ಗಿಕ ಅನಿಲದ ಕ್ರಯವಿಕ್ರಯದ ಮತ್ತು ಸಾಗಣೆಯ ಕಾರ್ಯಚಟುವಟಿಕೆಗಳನ್ನು ಪ್ರತ್ಯೇಕಗೊಳಿಸುವಂತೆ ಅಂಥ ಸಂಸ್ಥೆಯನ್ನು ಅಗತ್ಯಪಡಿಸಬಹುದು ಮತ್ತು ಸದರಿ ಅವಧಿಯೊಳಗೆ ಮಾತ್ರ ಅಂಥ ಸಂಸ್ಥೆಯು ಪ್ರಥಮ ಬಳಕೆಯ ಹಕ್ಕನ್ನು ಹೊಂದಿರತಕ್ಕದ್ದು.

(2) ಸಾಮಾನ್ಯ ವಾಹಕವನ್ನು ಅಥವಾ ಕರಾರು ವಾಹಕವನ್ನು ನಿರ್ವಹಿಸಲು ಅಧಿಕಾರ ಪಡೆದಿರುವ ಸಂಸ್ಥೆಯಲ್ಲದ ಸಂಸ್ಥೆಯು ಸಾಮಾನ್ಯ ವಾಹಕವನ್ನು ಅಥವಾ ಕರಾರು ವಾಹಕವನ್ನು ಬಳಸುವುದಕ್ಕಾಗಿ ಸಾಗಣೆ ದರವನ್ನು ಅಧಿಕಾರ ಪಡೆದ ಸಂಸ್ಥೆಯಾಗಿ ಅದನ್ನು ನಡೆಸುತ್ತಿರುವ ಸಂಸ್ಥೆಗೆ ಸಂದಾಯ ಮಾಡತಕ್ಕದ್ದು.

(3) ಸಾಮಾನ್ಯ ವಾಹಕವಾಗಿ ಅಥವಾ ಕರಾರು ವಾಹಕವಾಗಿ ಕೊಳವೆ ಮಾರ್ಗವನ್ನು ವಿನ್ಯಾಸಗೊಳಿಸಲು, ನಿರ್ಮಿಸಲು, ನಿರ್ವಹಿಸಲು ಅಥವಾ ವಿಸ್ತರಿಸಲು ಅಥವಾ ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲವನ್ನು ವಿನ್ಯಾಸಗೊಳಿಸಲು, ನಿರ್ಮಿಸಲು, ನಿರ್ವಹಿಸಲು ಅಥವಾ ವಿಸ್ತರಿಸಲು ಅಧಿಕಾರ ಪಡೆದಿರುವ ಸಂಸ್ಥೆಯು, ಅಧಿಕಾರ ನೀಡಿಕೆಗೆ ಸಂಬಂಧಿಸಿದ ಯಾವುದೇ ಹಕ್ಕಿನ ಉಲ್ಲಂಘನೆಯನ್ನು ತಡೆಗಟ್ಟಲು ಅಥವಾ ಆ ಉಲ್ಲಂಘನೆಯಿಂದಾಗಿ ಆದ ನಷ್ಟವನ್ನು ವಸೂಲಿ ಮಾಡಲು, ಮಂಡಳಿಯ ಮುಂದೆ ವ್ಯವಹರಣೆಗಳನ್ನು ಹೂಡುವುದಕ್ಕೆ ಹಕ್ಕುಳ್ಳದ್ದಾಗಿರತಕ್ಕದ್ದು.

**ವಿವರಣೆ.**- ಈ ಉಪ-ಪ್ರಕರಣದ ಉದ್ದೇಶಗಳಿಗಾಗಿ, "ಯಾವುದೇ ಹಕ್ಕಿನ ಉಲ್ಲಂಘನೆ" ಎಂದರೆ ಯಾವ ಕೃತ್ಯದಿಂದಾಗಿ ಸಾಮಾನ್ಯವಾಹಕದಲ್ಲಿ ಅಥವಾ ಕರಾರುವಾಹಕದಲ್ಲಿ ಹಸ್ತಕ್ಷೇಪ ಆಗುತ್ತದೋ ಅಥವಾ ಅಧಿಕಾರ ಪಡೆದ ಸಂಸ್ಥೆಯ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುತ್ತದೋ ಅಂಥ ಯಾವುದೇ ಕೃತ್ಯವನ್ನು ಯಾರೇ ವ್ಯಕ್ತಿಯು ಮಾಡುವುದು.

**22. ಸಾಗಣೆ ದರ. – (1)** ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಮಂಡಳಿಯು ಸಾಮಾನ್ಯವಾಹಕಗಳಿಗೆ ಅಥವಾ ಕರಾರುವಾಹಕಗಳಿಗೆ ಅಥವಾ ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲಕ್ಕೆ ಸಾಗಣೆ ದರಗಳನ್ನು ಮತ್ತು ಅಂಥ ದರಗಳನ್ನು ನಿರ್ಧರಿಸುವ ರೀತಿಯನ್ನು ವಿನಿಯಮಗಳ ಮೂಲಕ ಗೊತ್ತುಪಡಿಸತಕ್ಕದ್ದು.

(2) ಉಪ-ಪ್ರಕರಣ (1)ರ ಉದ್ದೇಶಗಳಿಗಾಗಿ, ಮಂಡಳಿಯು ಈ ಮುಂದಿನವುಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು, ಎಂದರೆ:-

(ಎ) ಪೈಪೋಟಿಗೆ, ದಕ್ಷತೆಗೆ, ಸಂಪನ್ಮೂಲಗಳ ಮಿತಬಳಕೆಗೆ, ಉತ್ತಮ ಕಾರ್ಯಸಾಧನೆಗೆ ಮತ್ತು ಲಾಭದಾಯಕ ಹೂಡಿಕೆಗೆ ಉತ್ತೇಜನ ನೀಡುವ ಅಂಶಗಳು;

(ಬಿ) ಗ್ರಾಹಕರ ಹಿತಾಸಕ್ತಿಯನ್ನು ಸಂರಕ್ಷಿಸುವುದರ ಜೊತೆಗೆ ಸೂಕ್ತ ರೀತಿಯಲ್ಲಿ ಸಾಗಣೆ ವೆಚ್ಚದ ವಸೂಲಿ;

(ಸಿ) ಕಾರ್ಯಸಾಧನೆಯಲ್ಲಿ ದಕ್ಷತೆಗೆ ಸಂಬಂಧಿಸಿದ ತತ್ವಗಳು;

(ಡಿ) ಕಂಪ್ರೆಸ್ಸರುಗಳು, ಪಂಪುಗಳು ಮೀಟರಿಂಗ್ ಯೂನಿಟ್‌ಗಳು, ದಾಸ್ತಾನುಗಳಂಥ ಸಂಬಂಧಿತ ಮೂಲ ಸೌಲಭ್ಯಗಳು ಮತ್ತು ಸಾಮಾನ್ಯ ವಾಹಕಗಳಿಗೆ ಅಥವಾ ಕರಾರು ವಾಹಕಗಳಿಗೆ ಸಂಬಂಧಿಸಿದಂಥ ಅದೇ ರೀತಿಯ ಮೂಲಭೂತ ಸೌಲಭ್ಯಗಳು;

(ಇ) ಸೇವಾ ವೆಚ್ಚವನ್ನು, ಲಾಭದ ಆಂತರಿಕ ದರವನ್ನು, ನಿವ್ವಳ ಪ್ರಸ್ತುತ ಮೌಲ್ಯವನ್ನು ಅಥವಾ ಸಾಗಣೆಯ ಪರ್ಯಾಯ ವಿಧಾನವನ್ನು ಆಧರಿಸಿ ಲೆಕ್ಕ ಹಾಕಲಾದ ಅನುರೂಪ ದರಕ್ಕೆ ಸಂಬಂಧಿಸಿದ ಮಾನದಂಡ;

(ಎಫ್) ಸಾಮಾನ್ಯವಾಹಕಕ್ಕೆ, ಕರಾರು ವಾಹಕಕ್ಕೆ ಮತ್ತು ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲಕ್ಕೆ ಅನ್ವಯವಾಗುವ ಕೇಂದ್ರ ಸರ್ಕಾರದ ನೀತಿ.

**23. ಅಧಿಕಾರ ನೀಡಿರುವುದನ್ನು ಅಮಾನತುಗೊಳಿಸುವುದು ಅಥವಾ ರದ್ದುಪಡಿಸುವುದು.**- ಬಾಧಿತ ಪಕ್ಷಕಾರನು ಅರ್ಜಿಯನ್ನು ಸಲ್ಲಿಸಿದಾಗ ಅಥವಾ ಸ್ವಪ್ರೇರಣೆಯಿಂದ, 19ನೇ ಪ್ರಕರಣದ ಮೇರೆಗೆ ಯಾವ ಸಂಸ್ಥೆಗೆ ಅಧಿಕಾರ ನೀಡಲಾಗಿದೆಯೋ ಅಂಥ ಸಂಸ್ಥೆಯು ಅಧಿಕಾರ ನೀಡಿಕೆಯ ಯಾವುವೇ ಷರತ್ತುಗಳನ್ನು ಪಾಲಿಸಲು ವಿಫಲವಾಗಿದೆಯೆಂದು ಮಂಡಳಿಯು ಮನಗಂಡರೆ ಅದು, ಅಂಥ ಸಂಸ್ಥೆಗೆ ತನ್ನ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡಿದ ತರುವಾಯ ಅಧಿಕಾರ ನೀಡಿರುವುದನ್ನು ಮಂಡಳಿಯು ಸೂಕ್ತವೆಂದು ಭಾವಿಸಬಹುದಾದಂಥ ಅವಧಿಯವರೆಗೆ ಅಮಾನತುಗೊಳಿಸಬಹುದು ಅಥವಾ ಅಧಿಕಾರ ನೀಡಿರುವುದನ್ನು ರದ್ದುಗೊಳಿಸಬಹುದು:

ಪರಂತು, ಅಧಿಕಾರ ಪಡೆದ ಸಂಸ್ಥೆಯು ಗ್ರಾಹಕರ ಹಿತಾಸಕ್ತಿಗಳಿಗೆ ಬಾಧಕವಾಗುವಂಥ ರೀತಿಯಲ್ಲಿ ಸತತವಾಗಿ ವರ್ತಿಸುತ್ತಿದೆಯೆಂದು ಮಂಡಳಿಯು ಅಭಿಪ್ರಾಯಪಟ್ಟರೆ ಆ ತರುವಾಯ ಸಂಸ್ಥೆಗೆ ತನ್ನ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡುವುದಕ್ಕೆ ಒಳಪಟ್ಟು, ಅಧಿಕಾರ ನೀಡಿರುವುದನ್ನು ಕೂಡಲೇ ಅಮಾನತುಗೊಳಿಸಲು ಕ್ರಮಕೈಗೊಳ್ಳಬಹುದು. ಆ ನಂತರ ಹಾಗೆ ತೆಗೆದುಕೊಂಡ ಕ್ರಮವನ್ನು ಸ್ಥಿರೀಕರಿಸಬಹುದು ಅಥವಾ ರದ್ದುಗೊಳಿಸಬಹುದು.

## ಅಧ್ಯಾಯ– V

### ವಿವಾದಗಳ ಇತ್ಯರ್ಥ

**24. ಮಂಡಳಿಯಿಂದ ವಿವಾದಗಳ ಇತ್ಯರ್ಥ.–** (1) ಸಂಸ್ಥೆಗಳ ನಡುವೆ ಅಥವಾ ಸಂದರ್ಭಾನುಸಾರ ಸಂಸ್ಥೆಯ ಮತ್ತು ಇತರ ಯಾರೇ ವ್ಯಕ್ತಿಯ ನಡುವೆ ಆಗಿರುವ ಸುಸಂಗತ ಒಪ್ಪಂದಗಳಲ್ಲಿ ಮಧ್ಯಸ್ಥಿಕೆಗೆ ಅನ್ಯಥಾ ಅವಕಾಶ ಕಲ್ಪಿಸಿರುವುದನ್ನುಳಿದು ಸಂಸ್ಥೆಗಳ ನಡುವೆ ಅಥವಾ ಸಂಸ್ಥೆಯ ಮತ್ತು ಯಾರೇ ಇತರ ವ್ಯಕ್ತಿಯ ನಡುವೆ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ವಿಷಯಗಳ ಸಂಬಂಧದಲ್ಲಿ ಯಾವುದೇ ವಿವಾದ ಉದ್ಭವಿಸಿದಲ್ಲಿ, ಅಂಥ ವಿವಾದಗಳನ್ನು, ಸದಸ್ಯ (ಕಾನೂನು)ನನ್ನು ಮತ್ತು ಅಧ್ಯಕ್ಷನು ನಾಮ ನಿರ್ದೇಶಿಸಿದ ಒಬ್ಬ ಅಥವಾ ಹೆಚ್ಚು ಸದಸ್ಯರನ್ನು ಒಳಗೊಂಡಿರುವ ನ್ಯಾಯಪೀಠವು ಇತ್ಯರ್ಥಪಡಿಸತಕ್ಕದ್ದು:

ಪರಂತು, ಯಾವುದೇ ಅಂಶದ ಅಥವಾ ಅಂಶಗಳ ಬಗ್ಗೆ ನ್ಯಾಯ ಪೀಠದ ಸದಸ್ಯರಲ್ಲಿ ಭಿನ್ನಾಭಿಪ್ರಾಯ ಉದ್ಭವಿಸಿದರೆ, ಯಾವ ಅಂಶದ ಅಥವಾ ಅಂಶಗಳ ಬಗ್ಗೆ ಅದರಲ್ಲಿ ಭಿನ್ನಾಭಿಪ್ರಾಯ ಉಂಟಾಗಿದೆಯೋ ಆ ಅಂಶವನ್ನು ಅಥವಾ ಅಂಶಗಳನ್ನು ಹೇಳತಕ್ಕದ್ದು, ಹಾಗೂ ಅಂಥ ಅಂಶದ ಅಥವಾ ಅಂಶಗಳ ಬಗ್ಗೆ ವಿಚಾರಣೆ ನಡೆಸಲು ನ್ಯಾಯಪೀಠದ ಸದಸ್ಯನಲ್ಲದ ಸದಸ್ಯನಿಗೆ ಆ ಅಂಶವನ್ನು ಅಥವಾ ಅಂಶಗಳನ್ನು ಒಪ್ಪಿಸತಕ್ಕದು ಮತ್ತು ಅಂಥ ಅಂಶವನ್ನು ಅಥವಾ ಆ ಅಂಶಗಳನ್ನು ಆ ಸದಸ್ಯನ ಅಭಿಪ್ರಾಯಕ್ಕನುಸಾರವಾಗಿ ಇತ್ಯರ್ಥಪಡಿಸತಕ್ಕದ್ದು.

(2) ಉಪ–ಪ್ರಕರಣ (1)ರ ಮೇರೆಗೆ ರಚಿಸಿದ ನ್ಯಾಯಪೀಠವು, ಸಿವಿಲ್ ನ್ಯಾಯಾಲಯವು ಚಲಾಯಿಸಬಹುದಾದಂಥ ಎಲ್ಲಾ ಅಧಿಕಾರ ವ್ಯಾಪ್ತಿಯನ್ನು ಹಾಗೂ ಅಧಿಕಾರಿಗಳನ್ನು ಮತ್ತು ಪ್ರಾಧಿಕಾರವನ್ನು ,–

(ಎ) ಸಂಸ್ಥೆಗಳಿಂದ, ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಮತ್ತು ನೈಸರ್ಗಿಕ ಅನಿಲದ ಸಂಸ್ಕರಣೆಗೆ, ಶುದ್ಧೀಕರಣಕ್ಕೆ, ದಾಸ್ತಾನಿಗೆ, ಸಾಗಣೆಗೆ ಮತ್ತು ವಿತರಣೆಗೆ;

(ಬಿ) ಸಂಸ್ಥೆಗಳಿಂದ ಗ್ರಾಹಕರಿಗೆ ಒದಗಿಸುವ ಸೇವೆಯ ಗುಣಮಟ್ಟವನ್ನು ಮತ್ತು ಸರಬರಾಜಿನ ಖಾತ್ರಿಯನ್ನು ಒಳಗೊಂಡಂತೆ ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಮತ್ತು ನೈಸರ್ಗಿಕ ಅನಿಲದ ಕ್ರಯವಿಕ್ರಯಕ್ಕೆ ಮತ್ತು ಮಾರಾಟಕ್ಕೆ; ಮತ್ತು

(ಸಿ) 15ನೇ ಪ್ರಕರಣದ ಮೇರೆಗೆ ಮಂಡಳಿಯಿಂದ ನೋಂದಣಿಗೆ ಅಥವಾ 19ನೇ ಪ್ರಕರಣದ ಮೇರೆಗೆ ಮಂಡಳಿಯು ನೀಡಿದ ಅಧಿಕಾರಕ್ಕೆ;

– ಸಂಬಂಧಿಸಿದ ಯಾವುದೇ ವಿಷಯದ ಮೇಲೆ ಗೊತ್ತುಪಡಿಸಿದ ದಿನಾಂಕದಂದು ಮತ್ತು ದಿನಾಂಕದಿಂದ ಚಲಾಯಿಸತಕ್ಕದ್ದು.

(3) ಸಿವಿಲ್ ಪ್ರಕ್ರಿಯಾ ಸಂಹಿತೆ 1908 ರಲ್ಲಿ (1908ರ ಸಂಖ್ಯೆ 5) ಏನೇ ಒಳಗೊಂಡಿದ್ದರೂ ಮಂಡಳಿಯು, (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ವಿಷಯಗಳನ್ನು ಗೊತ್ತುಪಡಿಸಿದ ದಿನಾಂಕದಂದು ಅಥವಾ ಆ ತರುವಾಯ ತೀರ್ಮಾನಿಸಲು ಅಧಿಕಾರ ಹೊಂದಿರತಕ್ಕದ್ದು.

**25. ದೂರುಗಳನ್ನು ದಾಖಲಿಸುವುದು.–** (1) ಸಂಸ್ಥೆಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಅಥವಾ ಈ ಯಾವುದೇ ಅಧಿನಿಯಮದ ಉಪಬಂಧಗಳಿಂದ ಉದ್ಭವಿಸುವ ಯಾವುದೇ ವಿಷಯಗಳ ಮೇಲೆ ಸಂಸ್ಥೆಗಳ ನಡುವಿನ ಯಾವುದೇ ವಿಷಯಗಳ ಬಗ್ಗೆ ಯಾರೇ ವ್ಯಕ್ತಿಯು ಮಂಡಳಿಯ ಮುಂದೆ ದೂರನ್ನು ಸಲ್ಲಿಸಬಹುದು:

ಪರಂತು, ಗ್ರಾಹಕ ಸಂರಕ್ಷಣಾ ಅಧಿನಿಯಮ, 1986ರ (1986ರ ಸಂಖ್ಯೆ 68) ಮೇರೆಗೆ ಗ್ರಾಹಕ ವಿವಾದಗಳ ಪರಿಹಾರ ನ್ಯಾಯಾಧಿಕರಣದ ಮುಂದೆ ಆಯಾಯ ಗ್ರಾಹಕರು ಹೂಡಬಹುದಾದಂಥ ದೂರುಗಳನ್ನು ಮಂಡಳಿಯು ಕೈಗೆತ್ತಿಕೊಳ್ಳತಕ್ಕದ್ದಲ್ಲ. ಆದರೆ, ಅಂಥ ನ್ಯಾಯಾಧಿಕರಣವು ಅದನ್ನು ವಿಚಾರಣೆ ಮಾಡಿ ವಿಲೇ ಮಾಡತಕ್ಕದ್ದು.

**ವಿವರಣೆ:–** ಈ ಉಪ–ಪ್ರಕರಣದ ಉದ್ದೇಶಗಳಿಗಾಗಿ "ಗ್ರಾಹಕ ವಿವಾದಗಳ ಪರಿಹಾರ ನ್ಯಾಯಾಧಿಕರಣ" ಎಂದರೆ ಗ್ರಾಹಕ ಸಂರಕ್ಷಣಾ ಅಧಿನಿಯಮ, 1986 ರ (1986ರ ಸಂಖ್ಯೆ 68) ಉಪಬಂಧಗಳ ಮೇರೆಗೆ ರಚಿಸಿದ, ಸಂದರ್ಭಾನುಸಾರ ಜಿಲ್ಲಾ ನ್ಯಾಯಾಧಿಕರಣ ರಾಜ್ಯ ಆಯೋಗ ಅಥವಾ ರಾಷ್ಟ್ರೀಯ ಆಯೋಗ.

(2) ಉಪ ಪ್ರಕರಣ (1)ರ ಮೇರೆಗೆ ಸಲ್ಲಿಸುವ ಪ್ರತಿಯೊಂದು ದೂರನ್ನು, ಉಲ್ಲಂಘನೆಗೆ ಕಾರಣವಾಗುವ ಯಾವುದೇ ಕೃತ್ಯವು ಅಥವಾ ವರ್ತನೆಯು ಯಾವ ದಿನಾಂಕದಂದು ಘಟಿಸಿತೋ ಆ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಸಲ್ಲಿಸತಕ್ಕದ್ದು ಮತ್ತು ಅದು ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು ಮತ್ತು ಅದರೊಂದಿಗೆ ಅಂಥ ಫೀಜು ಇರತಕ್ಕದ್ದು:

ಪರಂತು, ಮಂಡಳಿಯು ಸದರಿ ಅವಧಿಯೊಳಗೆ ದೂರನ್ನು ಸಲ್ಲಿಸದೆ ಇರುವುದಕ್ಕೆ ಸಾಕಷ್ಟು ಕಾರಣಗಳಿದ್ದವೆಂದು ಅದಕ್ಕೆ ಮನವರಿಕೆಯಾದಲ್ಲಿ ಸದರಿ ಅವಧಿಯೂ ಮುಕ್ತಾಯದ ತರುವಾಯವೂ ದೂರನ್ನು ಸ್ವೀಕರಿಸಬಹುದು.

(3) ಉಪಪ್ರಕರಣ (1)ರ ಮೇರೆಗೆ ದೂರನ್ನು ಸ್ವೀಕರಿಸಿದ ಬಳಿಕ, ಮಂಡಳಿಯು, ಸಂಸ್ಥೆಯ ಅಥವಾ ಸಂಸ್ಥೆಗಳ ವಿರುದ್ಧ ದೂರಿನಲ್ಲಿ ಮೊದಲ ನೋಟಕ್ಕೆ ವಾಸ್ತವಾಂಶವೇನಾದರೂ ಇದೆಯೇ ಎಂಬುದನ್ನು ಮೂವತ್ತು ದಿನಗಳೊಳಗಾಗಿ ನಿರ್ಧರಿಸತಕ್ಕದ್ದು ಮತ್ತು ತಾನೇ ಸ್ವತಃ ವಿಚಾರಣೆ ನಡೆಸಬಹುದು ಅಥವಾ ಈ ಅಧ್ಯಾಯದ ಮೇರೆಗೆ ತನಿಖೆಗಾಗಿ ಅಧಿಕಾರವ್ಯಾಪ್ತಿಯುಳ್ಳ ತನಿಖಾ ಅಧಿಕಾರಿಗೆ ವಿಷಯವನ್ನು ವಹಿಸಬಹುದು; ಹಾಗೂ ಅಂಥ ತನಿಖಾಧಿಕಾರಿಗೆ ಆ ವಿಷಯವನ್ನು ವಹಿಸಿ ಆದ ಮೇಲೆ ಅಂಥ ತನಿಖಾಧಿಕಾರಿಯಿಂದ ತನಿಖಾವರದಿಯನ್ನು ಸ್ವೀಕರಿಸಿದಾಗ, ಆ ದೂರು 27ನೇ ಪ್ರಕರಣದ (2)ನೇ ಉಪ–ಪ್ರಕರಣದ ವ್ಯಾಪ್ತಿಗೆ ಒಳಪಟ್ಟಿದ್ದರೆ ಅದನ್ನು ವಿಚಾರಣೆ ಮಾಡಬಹುದು ಮತ್ತು ವಿಲೆ ಮಾಡಬಹುದು ಹಾಗೂ ಯಾವುದೇ ಇತರ ಸಂದರ್ಭದಲ್ಲಿ, ಅದು ಸೂಕ್ತವೆಂದು ತಾನು ಭಾವಿಸಬಹುದಾದಂಥ ಆದೇಶಗಳನ್ನು ಹೊರಡಿಸಬಹುದು ಅಥವಾ ಅಂಥ ನಿರ್ದೇಶನಗಳನ್ನು ನೀಡಬಹುದು.

(4) ಒಂದು ವಿಷಯವು ಈ ಅಧಿನಿಯಮದ ಉಪಬಂಧಗಳಿಂದಾಗಿ ಉದ್ಭವಿಸಿದ ವಿಷಯವೆಂದು ಕೇಂದ್ರ ಸರ್ಕಾರವು ಪರಿಗಣಿಸಿದರೆ ಅದು ಮಂಡಳಿಗೆ ಅದನ್ನು ಉಲ್ಲೇಖಿಸತಕ್ಕದ್ದು ಮತ್ತು ಅಂಥ ಉಲ್ಲೇಖವನ್ನು ಮಂಡಳಿಗೆ ಸಲ್ಲಿಸಿದ ದೂರು ಎಂಬಂತೆಯೇ ಈ ಅಧಿನಿಯಮದ ಉಪಬಂಧಗಳು ಅನ್ವಯವಾಗತಕ್ಕದ್ದು.

26. **ತನಿಖೆ ಮಾಡಲು ಅಧಿಕಾರ.**– (1) 25ನೇ ಪ್ರಕರಣದ ಉಪಬಂಧಗಳ ಉದ್ದೇಶಗಳಿಗಾಗಿ ಮಂಡಳಿಯು, ವಿನಿಯಮಗಳ ಮೂಲಕ ಉಪಬಂಧಿಸಿದ ರೀತಿಯಲ್ಲಿ ತನಿಖೆಯನ್ನು ನಡೆಸುವುದಕ್ಕಾಗಿ ಮಂಡಳಿಯ ಒಬ್ಬ ಅಧಿಕಾರಿಯನ್ನು (3)ನೇ ಉಪ-ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ತನಿಖಾ ಅಧಿಕಾರಿಯನ್ನಾಗಿ ನೇಮಕ ಮಾಡತಕ್ಕದ್ದು:

ಪರಂತು, ಮಂಡಳಿಯು, ದೆಹಲಿ ವಿಶೇಷ ಪೊಲೀಸ್ ಸಿಬ್ಬಂದಿ ಅಧಿನಿಯಮ, 1946ರ (1946ರ 25) 2ನೇ ಪ್ರಕರಣದ ಮೇರೆಗೆ ರಚಿಸಿದ ವಿಶೇಷ ಪೊಲೀಸ್ ದಳವೂ ಸೇರಿದಂತೆ ರಾಜ್ಯ ಅಥವಾ ಕೇಂದ್ರ ಸರ್ಕಾರದ ಯಾವುದೇ ತನಿಖಾ ಏಜೆನ್ಸಿಯಿಂದ ವಿಷಯವನ್ನು ತನಿಖೆ ಮಾಡಿಸುವುದು ಅವಶ್ಯಕವೆಂದು ಪರಿಗಣಿಸಿದರೆ, ಮಂಡಳಿಯು, ತನಿಖೆ ಮಾಡುವುದಕ್ಕೆ ಅಂಥ ಏಜೆನ್ಸಿಗೆ ನಿರ್ದೇಶನ ನೀಡಬೇಕೆಂದು ಅಥವಾ ಅಧಿಕಾರ ನೀಡಬೇಕೆಂದು ಸಂಬಂಧಪಟ್ಟ ಸರ್ಕಾರವನ್ನು ಕೋರಬಹುದು ಹಾಗೂ ಹಾಗೆ ನಿರ್ದೇಶನ ಪಡೆದ ಅಥವಾ ಅಧಿಕಾರ ಪಡೆದ ಏಜೆನ್ಸಿಯು ಆ ನಂತರ, ಈ ಅಧಿನಿಯಮದ ಮೇರೆಗೆ ತನಿಖಾಧಿಕಾರಿಯ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಸಕ್ಷಮವಾಗಿರತಕ್ಕದ್ದು.

(2) ಯಾರೇ ವ್ಯಕ್ತಿಯನ್ನು, ವಿನಿಯಮಗಳ ಮೂಲಕ ಮಂಡಳಿಯು ನಿರ್ಧರಿಸಬಹುದಾದಂಥ ಅರ್ಹತೆಗಳನ್ನು ಮತ್ತು ಅನುಭವವನ್ನು ಹೊಂದಿದ್ದ ಹೊರತು ತನಿಖಾಧಿಕಾರಿಯನ್ನಾಗಿ ನೇಮಕ ಮಾಡತಕ್ಕದ್ದಲ್ಲ.

(3) ಒಬ್ಬರಿಗಿಂತ ಹೆಚ್ಚು ತನಿಖಾಧಿಕಾರಿಗಳನ್ನು ನೇಮಕ ಮಾಡಿರುವಲ್ಲಿ ಮಂಡಳಿಯು, ಅಂಥ ಪ್ರತಿಯೊಬ್ಬ ಅಧಿಕಾರಿಯು ಯಾವ ವಿಷಯಗಳಿಗೆ ಮತ್ತು ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳಿಗೆ ಸಂಬಂಧಿಸಿದಂತೆ ತನ್ನ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಬಹುದೋ ಆ ವಿಷಯಗಳನ್ನು ಮತ್ತು ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳನ್ನು ಆದೇಶದ ಮೂಲಕ ನಿರ್ದಿಷ್ಟಪಡಿಸತಕ್ಕದ್ದು.

27. **ಮಂಡಳಿಯು ಗಣನೆಗೆ ತೆಗೆದುಕೊಳ್ಳಬೇಕಾದ ಅಂಶಗಳು.**– ಮಂಡಳಿಯು, ಈ ಅಧ್ಯಾಯದ ಮೇರೆಗೆ ವಿವಾದವನ್ನು ಇತ್ಯರ್ಥಪಡಿಸುವಾಗ, ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಈ ಮುಂದಿನ ಅಂಶಗಳಿಗೆ ಯುಕ್ತ ಗಮನ ನೀಡತಕ್ಕದ್ದು, ಎಂದರೆ:–

(ಎ) ಕರ್ತವ್ಯಲೋಪದ ಪರಿಣಾಮವಾಗಿ, ಮಾಡಿಕೊಂಡ ಅಸಮ ಪ್ರಮಾಣದ ಗಳಿಕೆಯ ಮೊಬಲಗು ಮತ್ತು ಪಡೆದ ಅನುಚಿತ ಅನುಕೂಲದ ಪ್ರಮಾಣವನ್ನು ನಿರ್ಧರಿಸಬಹುದಾದಲ್ಲೆಲ್ಲ ಅಂಥ ಅಸಮ ಪ್ರಮಾಣದ ಗಳಿಕೆಯ ಮತ್ತು ಪಡೆದ ಅನುಚಿತ ಅನುಕೂಲದ ಮೊಬಲಗು;

(ಬಿ) ಕರ್ತವ್ಯಲೋಪದ ಪರಿಣಾಮವಾಗಿ ಸಂಸ್ಥೆಗೆ ಆದ ನಷ್ಟದ ಮೊಬಲಗು;

(ಸಿ) ಕರ್ತವ್ಯ ಲೋಪವು ಪುನರಾವರ್ತನೆಯಾಗುತ್ತಿರುವ ರೀತಿ.

28. **ಮಂಡಳಿಯು ನೀಡಿದ ನಿರ್ದೇಶನಗಳ ಉಲ್ಲಂಘನೆಗಾಗಿ ಸಿವಿಲ್ ದಂಡ.**– ಈ ಅಧಿನಿಯಮದ ಮೇರೆಗೆ ಮಂಡಳಿಯ ಮುಂದೆ ಯಾರೇ ವ್ಯಕ್ತಿಯು ಯಾವುದೇ ದೂರನ್ನು ದಾಖಲಿಸಿದ ಸಂದರ್ಭದಲ್ಲಿ ಅಥವಾ ಸಾಮಾನ್ಯ ವಾಹಕಕ್ಕೆ ಪ್ರವೇಶಾವಕಾಶ ಕಲ್ಪಿಸುವ ಅಥವಾ ಅದರ ಸಂಬಂಧದಲ್ಲಿ ಸಾಗಣೆ ದರಕ್ಕೆ ಬದ್ಧವಾಗಿರುವ ಅಥವಾ ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಗರಿಷ್ಠ ಚಿಲ್ಲರೆ ಬೆಲೆ ಪ್ರದರ್ಶಿಸುವ ಬಗ್ಗೆ ಮಂಡಳಿಯು ನೀಡಿದ ನಿರ್ದೇಶವನ್ನು ಯಾರೇ ವ್ಯಕ್ತಿಯು ಉಲ್ಲಂಘಿಸಿರುವನೆಂದು ಮಂಡಳಿಗೆ ಮನವರಿಕೆಯಾದಲ್ಲಿ ಅಥವಾ 15ನೇ ಪ್ರಕರಣದ ಮೇರೆಗೆ ಮಾಡಿದ ನೋಂದಣಿಯ ಅಥವಾ 19ನೇ ಪ್ರಕರಣದ ಮೇರೆಗೆ ನೀಡಿದ ಅಧಿಕಾರದ ನಿಬಂಧನೆಗಳನ್ನು ಅಥವಾ ಷರತ್ತುಗಳನ್ನು ಅಥವಾ ಚಿಲ್ಲರೆ ಸೇವಾ ಬಾಧ್ಯತೆಗಳನ್ನು ಅಥವಾ ಕ್ರಯ-ವಿಕ್ರಯ ಸೇವಾ ಬಾಧ್ಯತೆಗಳನ್ನು ಉಲ್ಲಂಘಿಸಿದಲ್ಲಿ ಅಥವಾ ಮಂಡಳಿಯು ಅಗತ್ಯಪಡಿಸಿದ ಮಾಹಿತಿಯನ್ನು, ದಸ್ತಾವೇಜನ್ನು, ವಿವರ ಪಟ್ಟಿಕೆಯನ್ನು ಅಥವಾ ವರದಿಯನ್ನು ಒದಗಿಸದಿದ್ದರೆ, ಮಂಡಳಿಯು ಅಂಥ ಯಾರೇ ವ್ಯಕ್ತಿಗೆ ಆ ವಿಷಯದ ಸಂಬಂಧದಲ್ಲಿ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ, ಲಿಖಿತ ಆದೇಶದ ಮೂಲಕ, ಈ ಅಧಿನಿಯಮದ ಮೇರೆಗೆ ಯಾವ ದಂಡಕ್ಕೆ ಗುರಿಯಾಗಲು ಅವನು ಬದ್ಧನಾಗಿದ್ದಾನೋ ಆ ಯಾವುದೇ ಇತರ ದಂಡಕ್ಕೆ ಬಾಧಕವಾಗದಂತೆ, ಪ್ರತಿಯೊಂದು ಉಲ್ಲಂಘನೆಗೆ ಒಂದು ಕೋಟಿ ರೂಪಾಯಿಗಳನ್ನು ಮೀರದ ಮೊಬಲಗನ್ನು ಮತ್ತು ವಿಫಲತೆಯು ಮುಂದುವರಿದ ಸಂದರ್ಭದಲ್ಲಿ ಅಂಥ ಮೊದಲ ನಿರ್ದೇಶನದ ಉಲ್ಲಂಘನೆಯ ತರುವಾಯ ವಿಫಲತೆಯು ಮುಂದುವರಿದ ಅವಧಿಯಲ್ಲಿ ಪ್ರತಿ ದಿನಕ್ಕೆ ಹತ್ತು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಹೆಚ್ಚುವರಿ ದಂಡವನ್ನು ಸಿವಿಲ್ ದಂಡದ ರೂಪದಲ್ಲಿ ಸಂದಾಯ ಮಾಡತಕ್ಕದ್ದೆಂದು ನಿರ್ದೇಶಿಸಬಹುದು:

ಪರಂತು, ನಿರ್ಬಂಧಕ ವ್ಯಾಪಾರ ಪದ್ಧತಿಯ ಬಗ್ಗೆ ನೀಡಿದ ದೂರಿನ ಸಂದರ್ಭದಲ್ಲಿ, ಸಿವಿಲ್ ದಂಡದ ಮೊಬಲಗನ್ನು, ಸಂಸ್ಥೆಯು ಮಾಡಿಕೊಂಡ ಅನುಚಿತ ಗಳಿಕೆಯ ಐದು ಪಟ್ಟು ಮೊಬಲಗಿಗೆ ಅಥವಾ ಹತ್ತು ಕೋಟಿ ರೂಪಾಯಿಗಳು ಇವೆರಡರಲ್ಲಿ ಯಾವುದು ಹೆಚ್ಚೋ ಅಷ್ಟಕ್ಕೆ ವಿಸ್ತರಿಸಬಹುದು.

29. **ಮಂಡಳಿಯು ಹೊರಡಿಸಿದ ಆದೇಶಗಳನ್ನು ಡಿಕ್ರಿಗಳೆಂದು ಭಾವಿಸುವುದು.**– ಈ ಅಧಿನಿಯಮದ ಮೇರೆಗೆ ಮಂಡಳಿಯು ಹೊರಡಿಸಿದ ಪ್ರತಿಯೊಂದು ಆದೇಶವನ್ನು, ಮಂಡಳಿಯ ಅಧಿಕಾರಿಯು ನೀಡಿದ ಪ್ರಮಾಣಪತ್ರದ ಮೇಲೆ, ಅದು ಸಿವಿಲ್ ನ್ಯಾಯಾಲಯದ ಡಿಕ್ರಿಯಾಗಿದ್ದಿದ್ದರೆ ಹೇಗೆ ಕಾರ್ಯಗತಗೊಳಿಸಲಾಗುತ್ತಿತ್ತೋ ಅದೇ ರೀತಿಯಲ್ಲಿ ಕಾರ್ಯಗತಗೊಳಿಸತಕ್ಕದ್ದು:

ಪರಂತು, ಮಂಡಳಿಯ ಆದೇಶದ ವಿರುದ್ಧ ಅಪೀಲು ಹೂಡಲು ಅವಕಾಶವಿದ್ದು ಯಾವುದೇ ಅಪೀಲನ್ನು ಹೂಡಿರದಿದ್ದರೆ, ಅಂಥ ಸಂದರ್ಭದಲ್ಲಿ ಅಪೀಲು ನ್ಯಾಯಾಧಿಕರಣಕ್ಕೆ ಆ ಆದೇಶದ ವಿರುದ್ಧ ಅಪೀಲು ಹೂಡಲು ಅನುಮತಿಸಿರುವ ಅವಧಿ ಮುಕ್ತಾಯವಾದ ತರುವಾಯ ಆ ಆದೇಶವನ್ನು ಈ ಪ್ರಕರಣದ ಮೇರೆಗೆ ಅಂತಿಮ ಡಿಕ್ರಿಯೆಂದು ಭಾವಿಸತಕ್ಕದ್ದು.

## ಅಧ್ಯಾಯ – VI

### ಅಪೀಲು ನ್ಯಾಯಾಧಿಕರಣಕ್ಕೆ ಅಪೀಲುಗಳು

30. **ಅಪೀಲು ನ್ಯಾಯಾಧಿಕರಣ.**– (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ವಿದುಚ್ಛಕ್ತಿ ಅಧಿನಿಯಮ, 2003ರ (2003ರ 36) 110ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ಅಪೀಲು ನ್ಯಾಯಾಧಿಕರಣವು ಈ ಅಧಿನಿಯಮದ ಉದ್ದೇಶಗಳಿಗಾಗಿ ಅಪೀಲು ನ್ಯಾಯಾಧಿಕರಣವಾಗಿರತಕ್ಕದ್ದು ಮತ್ತು ಸದರಿ ಅಪೀಲು ನ್ಯಾಯಾಧಿಕರಣವು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅದಕ್ಕೆ ಪ್ರದತ್ತವಾದ ಅಧಿಕಾರ ವ್ಯಾಪ್ತಿಯನ್ನು, ಅಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಚಲಾಯಿಸತಕ್ಕದ್ದು:

ಪರಂತು, ಈ ಅಧಿನಿಯಮದ ಉದ್ದೇಶಗಳಿಗಾಗಿ ಅಪೀಲು ನ್ಯಾಯಾಧಿಕರಣದ ತಾಂತ್ರಿಕ ಸದಸ್ಯನನ್ನು ತಾಂತ್ರಿಕ ಸದಸ್ಯ (ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ) ಎಂದು ಕರೆಯತಕ್ಕದ್ದು ಹಾಗೂ ಆತನು 31ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಹೊಂದಿರತಕ್ಕದ್ದು.

(2) ವಿದ್ಯುಚ್ಛಕ್ತಿ ಅಧಿನಿಯಮ, 2003ರಲ್ಲಿ (2003ರ 36) ಏನೇ ಒಳಗೊಂಡಿದ್ದರೂ, ಕೇಂದ್ರ ಸರ್ಕಾರವು ಈ ಅಧಿನಿಯಮದ ಉದ್ದೇಶಗಳಿಗಾಗಿ, ವಿದ್ಯುಚ್ಛಕ್ತಿಗಾಗಿ ಅಪೀಲು ನ್ಯಾಯಾಧಿಕರಣಕ್ಕೆ ಒಬ್ಬ ಅಥವಾ ಹೆಚ್ಚು ತಾಂತ್ರಿಕ ಸದಸ್ಯರನ್ನು (ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ) ನೇಮಕ ಮಾಡಬಹುದು ಅಥವಾ 31ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಹೊಂದಿರುವ ಸದರಿ ನ್ಯಾಯಾಧಿಕರಣದ ತಾಂತ್ರಿಕ ಸದಸ್ಯನೆಂದು ಹೆಸರಿಸಬಹುದು ಮತ್ತು ಒಬ್ಬ ತಾಂತ್ರಿಕ ಸದಸ್ಯ (ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ)ನನ್ನು ನೇಮಕ ಮಾಡಿದಾಗ, ಆತನು ಸದರಿ ಅಧಿನಿಯಮದ ಮೇರೆಗೆ ನೇಮಕಗೊಂಡ ಇತರ ಮೂವರು ಸದಸ್ಯರು ಹೆಚ್ಚುವರಿಯಾಗಿ ಇರತಕ್ಕದ್ದು.

31. **ತಾಂತ್ರಿಕ ಸದಸ್ಯ (ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ).**– (1) ತಾಂತ್ರಿಕ ಸದಸ್ಯ (ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ)ನನ್ನು 4ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ರಚಿಸಿದ ಶೋಧನಾ ಸಮಿತಿಯು ಸಿದ್ಧಪಡಿಸಿದ ಹೆಸರುಗಳ ಪಟ್ಟಿಯಿಂದ ನೇಮಕ ಮಾಡತಕ್ಕದ್ದು.

(2) ಒಬ್ಬ ವ್ಯಕ್ತಿಯು, ಅವನು,–

(i) ಇಂಧನ ವಲಯದಲ್ಲಿ, ವಿಶೇಷವಾಗಿ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ವಲಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಸಾಕಷ್ಟು ಅನುಭವ ಹೊಂದಿರುವ ಅಥವಾ ಕೇಂದ್ರ ಸರ್ಕಾರದ ಮಂತ್ರಾಲಯದಲ್ಲಿ ಅಥವಾ ಇಲಾಖೆಯಲ್ಲಿ ಕನಿಷ್ಠಪಕ್ಷ ಒಂದು ವರ್ಷ ಕಾರ್ಯದರ್ಶಿಯಾಗಿರುವ ಅಥವಾ ಕಾರ್ಯದರ್ಶಿಯಾಗಿದ್ದ ಹೊರತು; ಅಥವಾ

(ii) ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಅಥವಾ ನೈಸರ್ಗಿಕ ಅನಿಲದ ಅನ್ವೇಷಣೆ, ಉತ್ಪಾದನೆ, ಸಾಗಣೆ ಕೊಳವೆ ಮಾರ್ಗಗಳು, ಕ್ರಯ-ವಿಕ್ರಯ ಅಥವಾ ವಿನಿಯಮನದಲ್ಲಿ, ಹಣಕಾಸು, ವಾಣಿಜ್ಯ, ಕಾನೂನು ಅಥವಾ ವ್ಯವಸ್ಥಾಪನೆಗೆ ಸಂಬಂಧಿಸಿದ ವಿಷಯಗಳನ್ನು ವ್ಯವಹರಿಸುವುದರಲ್ಲಿ ಸಾಕಷ್ಟು ಜ್ಞಾನವನ್ನು ಅಥವಾ ಅನುಭವವನ್ನು ಹೊಂದಿರುವ ಸಮರ್ಥ ಮತ್ತು ಪ್ರತಿಷ್ಠಿತ ವ್ಯಕ್ತಿಯಾಗಿರುವ ಅಥವಾ ವ್ಯಕ್ತಿಯಾಗಿದ್ದ ಹೊರತು

– ಅಪೀಲು ನ್ಯಾಯಾಧಿಕರಣದ ತಾಂತ್ರಿಕ ಸದಸ್ಯನಾಗಿ (ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ) ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದಲ್ಲ.

32. **ತಾಂತ್ರಿಕ ಸದಸ್ಯನ (ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ) ಸೇವಾ ನಿಬಂಧನೆಗಳು ಮತ್ತು ಷರತ್ತುಗಳು.**– ತಾಂತ್ರಿಕ ಸದಸ್ಯನ (ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ) ಪದಾವಧಿ, ಆತನಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು ಹಾಗೂ ಆತನ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು ಅಪೀಲು ನ್ಯಾಯಾಧಿಕರಣದ ಇತರ ಸದಸ್ಯರಿಗೆ ಅನ್ವಯವಾಗುವಂತಹವುಗಳೇ ಆಗಿರತಕ್ಕದ್ದು.

33. **ಅಪೀಲು ನ್ಯಾಯಾಧಿಕರಣಕ್ಕೆ ಅಪೀಲುಗಳು.**– (1) ಈ ಅಧಿನಿಯಮದ ಮೇರೆಗೆ ಮಂಡಳಿಯು ಮಾಡಿದ ಆದೇಶದಿಂದ ಅಥವಾ ತೀರ್ಮಾನದಿಂದ ಬಾಧಿತನಾದ ಯಾರೇ ವ್ಯಕ್ತಿಯು ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು ಸಲ್ಲಿಸಬಹುದು:

ಪರಂತು, ಮಂಡಳಿಯು ವಿಧಿಸಿರುವ ಯಾವುದೇ ದಂಡ ಆದೇಶದ ಅಥವಾ ತೀರ್ಮಾನದ ವಿರುದ್ಧ ಅಪೀಲನ್ನು ಸಲ್ಲಿಸುವ ಯಾರೇ ವ್ಯಕ್ತಿಯು, ಅಪೀಲನ್ನು ಸಲ್ಲಿಸುವಾಗ, ಅಂಥ ದಂಡದ ಮೊಬಲಗನ್ನು ಠೇವಣಿ ಇಡತಕ್ಕದ್ದು:

ಮತ್ತು ಪರಂತು, ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ, ಅಪೀಲು ನ್ಯಾಯಾಧಿಕರಣವು, ಅಂಥ ದಂಡವನ್ನು ಠೇವಣಿ ಇಡಲು ಅಂಥ ವ್ಯಕ್ತಿಗೆ ತುಂಬಾ ಕಷ್ಟವಾಗುತ್ತದೆಂದು ಅಭಿಪ್ರಾಯಪಟ್ಟಲ್ಲಿ, ದಂಡದ ವಸೂಲಿಯು ಖಾತ್ರಿಯಾಗುವ ಹಾಗೆ ವಿಧಿಸುವುದು ಸೂಕ್ತವೆಂದು ತಾನು ಭಾವಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಅಂಥ ಠೇವಣಿಗೆ ಅದು ವಿನಾಯಿತಿ ನೀಡಬಹುದು.

(2) ಉಪ-ಪ್ರಕರಣ (1)ರ ಮೇರೆಗೆ ಪ್ರತಿಯೊಂದು ಅಪೀಲನ್ನು, ಮಂಡಳಿಯು ನೀಡಿದ ನಿರ್ದೇಶನದ ಅಥವಾ ಆದೇಶದ ಅಥವಾ ತೀರ್ಮಾನದ ಪ್ರತಿಯನ್ನು ಬಾಧಿತ ವ್ಯಕ್ತಿಯು ಯಾವ ದಿನಾಂಕದಂದು ಸ್ವೀಕರಿಸಿದನೋ ಆ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗಾಗಿ ಸಲ್ಲಿಸತಕ್ಕದ್ದು ಮತ್ತು ಅದು ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು ಮತ್ತು ಅಂಥ ರೀತಿಯಲ್ಲಿ ಸತ್ಯಾಪನೆ ಮಾಡಿರತಕ್ಕದ್ದು ಮತ್ತು ಅದರೊಂದಿಗೆ ಅಂಥ ಫೀಜು ಇರತಕ್ಕದ್ದು:

ಪರಂತು, ಅಪೀಲು ನ್ಯಾಯಾಧಿಕರಣವು, ನಿಗದಿತ ಅವಧಿಯೊಳಗಾಗಿ ಅಪೀಲನ್ನು ಸಲ್ಲಿಸದಿರಲು ಸಾಕಷ್ಟು ಕಾರಣಗಳಿದ್ದವು ಎಂದು ಅದಕ್ಕೆ ಮನವರಿಕೆಯಾದಲ್ಲಿ, ಸದರಿ ಮೂವತ್ತು ದಿನಗಳ ಅವಧಿಯು ಮುಕ್ತವಾದ ತರುವಾಯವೂ ಅಪೀಲನ್ನು ಪುರಸ್ಕರಿಸಬಹುದು.

(3) ಉಪ-ಪ್ರಕರಣ (1)ರ ಮೇರೆಗೆ ಅಪೀಲನ್ನು ಸ್ವೀಕರಿಸಿದ ಮೇಲೆ, ಅಪೀಲು ನ್ಯಾಯಾಧಿಕರಣವು, ಪಕ್ಷಕಾರರಿಗೆ ತಮ್ಮ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ, ಅಪೀಲಿನ ಬಗ್ಗೆ ಸೂಕ್ತವೆಂದು ತಾನು ಭಾವಿಸಬಹುದಾದಂಥ ಆದೇಶಗಳನ್ನು ಹೊರಡಿಸಬಹುದು.

(4) ಅಪೀಲು ನ್ಯಾಯಾಧಿಕರಣವು, ಅದು ಹೊರಡಿಸಿದ ಪ್ರತಿಯೊಂದು ಆದೇಶದ ಪ್ರತಿಯನ್ನು ಅಪೀಲಿನ ಪಕ್ಷಕಾರರಿಗೆ ಮತ್ತು ಮಂಡಳಿಗೆ ಕಳುಹಿಸತಕ್ಕದ್ದು.

(5) ಉಪ-ಪ್ರಕರಣ (1)ರ ಮೇರೆಗೆ ಸಲ್ಲಿಸಿದ ಅಪೀಲನ್ನು ಅಪೀಲು ನ್ಯಾಯಾಧಿಕರಣವು ಸಾಧ್ಯವಾದಷ್ಟು ಬೇಗನೆ ವ್ಯವಹರಿಸತಕ್ಕದ್ದು ಮತ್ತು ಅಪೀಲನ್ನು ಸ್ವೀಕರಿಸಿದ ದಿನಾಂಕದಿಂದ ತೊಂಭತ್ತು ದಿನಗಳೊಳಗೆ ಅಂತಿಮವಾಗಿ ಅಪೀಲನ್ನು ವಿಲೆಮಾಡಲು ಅದು ಪ್ರಯತ್ನಿಸತಕ್ಕದ್ದು:

ಪರಂತು, ಸದರಿ ತೊಂಬತ್ತು ದಿನಗಳ ಒಳಗಾಗಿ ಅಂಥ ಯಾವುದೇ ಅಪೀಲನ್ನು ವಿಲೆ ಮಾಡಲು ಸಾಧ್ಯವಾಗದಿದ್ದಲ್ಲಿ, ಅಪೀಲು ನ್ಯಾಯಾಧಿಕರಣವು ಸದರಿ ಅವಧಿಯೊಳಗಾಗಿ ಅಪೀಲನ್ನು ವಿಲೆ ಮಾಡದಿರುವುದಕ್ಕೆ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು.

(6) ಅಪೀಲು ನ್ಯಾಯಾಧಿಕರಣವು, (1)ನೇ ಉಪ-ಪ್ರಕರಣದ ಮೇರೆಗೆ ಸಲ್ಲಿಸಿದ ಅಪೀಲಿನಲ್ಲಿ ಉಲ್ಲೇಖಿಸಿದ ಮಂಡಳಿಯ ಯಾವುದೇ ಆದೇಶದ ಅಥವಾ ತೀರ್ಮಾನದ ಕಾನೂನು ಸಮ್ಮತತೆಯನ್ನು ಅಥವಾ ಔಚಿತ್ಯವನ್ನು ಅಥವಾ ಸರಿತನವನ್ನು ಪರಿಶೀಲಿಸುವ ಉದ್ದೇಶಕ್ಕಾಗಿ, ಅಂಥ ಅಪೀಲನ್ನು ವಿಲೆ ಮಾಡುವುದಕ್ಕೆ ಸುಸಂಗತವಾದ ದಾಖಲೆಗಳನ್ನು ಸ್ವಪ್ರೇರಣೆಯಿಂದಾಗಲಿ ಅಥವಾ ಬೇರೆ ರೀತಿಯಲ್ಲಾಗಲಿ ತರಿಸಿಕೊಳ್ಳಬಹುದು ಮತ್ತು ಸೂಕ್ತವೆಂದು ತಾನು ಭಾವಿಸಬಹುದಾದಂಥ ಆದೇಶಗಳನ್ನು ಹೊರಡಿಸಬಹುದು.

**34. ಅಪೀಲು ನ್ಯಾಯಾಧಿಕರಣದ ಕಾರ್ಯವಿಧಾನ ಮತ್ತು ಅಧಿಕಾರಗಳು.**- ವಿದುಚ್ಛಕ್ತಿ ಅಧಿನಿಯಮ, 2003ರ (2003ರ 36) 120ರಿಂದ 124ರವರೆಗಿನ (ಎರಡೂ ಸೇರಿ) ಪ್ರಕರಣಗಳ ಉಪಬಂಧಗಳು, ಅಪೀಲು ನ್ಯಾಯಾಧಿಕರಣಕ್ಕೆ ವಿದ್ಯುಚ್ಛಕ್ತಿ ಅಧಿನಿಯಮ, 2003ರ ಮೇರೆಗೆ ಅದರ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಅನ್ವಯವಾಗುವಂತೆಯೇ ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳ ನಿರ್ವಹಣೆಗೂ ಯಥೋಚಿತ ವ್ಯತ್ಯಾಸಗಳೊಂದಿಗೆ ಅದಕ್ಕೆ ಅನ್ವಯವಾಗತಕ್ಕದ್ದು.

**35. ನಿಯಮಗಳನ್ನು ರಚಿಸಲು ಅಪೀಲು ನ್ಯಾಯಾಧಿಕರಣದ ಅಧಿಕಾರ.**- ಅಪೀಲು ನ್ಯಾಯಾಧಿಕರಣವು, ಈ ಅಧಿನಿಯಮದ ಮೇರೆಗೆ, ತನ್ನ ಮುಂದಿರುವ ಎಲ್ಲ ವ್ಯವಹರಣೆಗಳಿಗೆ ಸಂಬಂಧಪಟ್ಟಂತೆ ನಿರ್ವಹಣೆ ಮತ್ತು ಕಾರ್ಯವಿಧಾನದ ಬಗ್ಗೆ ಈ ಅಧಿನಿಯಮದ ಉಪಬಂಧಗಳಿಗೆ ಸುಸಂಗತವಾಗಿರುವ ನಿಯಮಗಳನ್ನು ಅಧಿಸೂಚನೆಯ ಮೂಲಕ ರಚಿಸಬಹುದು.

**36. ಅಪೀಲು ನ್ಯಾಯಾಧಿಕರಣವು ಹೊರಡಿಸಿದ ಆದೇಶಗಳು ಡಿಕ್ರಿಯೆಂದು ಜಾರಿ ಮಾಡಬಹುದಾದವುಗಳಾಗಿರುವುದು.**- (1) ಈ ಅಧಿನಿಯಮದ ಮೇರೆಗೆ ಅಪೀಲು ನ್ಯಾಯಾಧಿಕರಣವು ಹೊರಡಿಸಿದ ಪ್ರತಿಯೊಂದು ಆದೇಶವು ಸಿವಿಲ್ ನ್ಯಾಯಾಲಯದ ಡಿಕ್ರಿಯಂತೆ ಅಪೀಲು ನ್ಯಾಯಾಧಿಕರಣವು ಜಾರಿ ಮಾಡಬಹುದಾದುದು ಆಗಿರತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ, ಅಪೀಲು ನ್ಯಾಯಾಧಿಕರಣವು ಸಿವಿಲ್ ನ್ಯಾಯಾಲಯದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ಉಪ-ಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಅಪೀಲು ನ್ಯಾಯಾಧಿಕರಣವು ತಾನು ಮಾಡಿದ ಯಾವುದೇ ಆದೇಶವನ್ನು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಿವಿಲ್ ನ್ಯಾಯಾಲಯಕ್ಕೆ ಕಳುಹಿಸಬಹುದು ಮತ್ತು ಆ ಸಿವಿಲ್ ನ್ಯಾಯಾಲಯವು ತಾನು ಹೊರಡಿಸಿದ ಡಿಕ್ರಿಯಂತೆಯೇ ಆ ಆದೇಶವನ್ನು ಜಾರಿ ಮಾಡತಕ್ಕದ್ದು.

**37. ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು.**- (1) ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರಲ್ಲಿ (1908ರ 05) ಅಥವಾ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಅಪೀಲು ನ್ಯಾಯಾಧಿಕರಣದ ವಾದಕಾಲೀನ ಆದೇಶವಾಗಿರದ, ಯಾವುದೇ ಆದೇಶದ ವಿರುದ್ಧ ಆ ಸಂಹಿತೆಯ 100ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಒಂದು ಅಥವಾ ಹೆಚ್ಚು ಕಾರಣಗಳ ಮೇಲೆ ಸರ್ವೋಚ್ಚ ನ್ಯಾಯಾಲಯದಲ್ಲಿ ಅಪೀಲು ಹೂಡಲು ಅವಕಾಶವಿರತಕ್ಕದ್ದು.

(2) ಪಕ್ಷಕಾರರ ಸಮ್ಮತಿಯೊಂದಿಗೆ ಅಪೀಲು ನ್ಯಾಯಾಧಿಕರಣವು ನೀಡಿದ ಯಾವುದೇ ತೀರ್ಪಿನ ಅಥವಾ ಆದೇಶದ ವಿರುದ್ಧ ಯಾವುದೇ ಅಪೀಲು ಹೂಡಲು ಅವಕಾಶ ಇರತಕ್ಕದ್ದಲ್ಲ.

(3) ಈ ಪ್ರಕರಣದ ಮೇರೆಗೆ ಪ್ರತಿಯೊಂದು ಅಪೀಲನ್ನು, ಯಾವ ತೀರ್ಪಿನ ಅಥವಾ ಆದೇಶದ ವಿರುದ್ಧ ಅಪೀಲನ್ನು ಹೂಡಲಾಗಿದೆಯೋ ಆ ತೀರ್ಪಿನ ಅಥವಾ ಆದೇಶದ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯ ಒಳಗಾಗಿ ಹೂಡತಕ್ಕದ್ದು:

ಪರಂತು, ಅಪೀಲುದಾರನಿಗೆ ಸಕಾಲದಲ್ಲಿ ಅಪೀಲು ಸಲ್ಲಿಸಲು ಸಾಕಷ್ಟು ಕಾರಣದಿಂದಾಗಿ ಅಡ್ಡಿಯುಂಟಾಗಿತ್ತೆಂದು ಸರ್ವೋಚ್ಚ ನ್ಯಾಯಾಲಯಕ್ಕೆ ಮನವರಿಕೆಯಾದರೆ, ತೊಂಬತ್ತು ದಿನಗಳ ಸದರಿ ಅವಧಿಯ ಮುಕ್ತಾಯದ ತರುವಾಯವೂ ಅದು ಅಪೀಲನ್ನು ಪುರಸ್ಕರಿಸಬಹುದು.

## ಅಧ್ಯಾಯ - VII

## ಹಣಕಾಸು, ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ

**38. ಕೇಂದ್ರ ಸರ್ಕಾರದಿಂದ ಅನುದಾನಗಳು.**- ಕೇಂದ್ರ ಸರ್ಕಾರವು, ಈ ಬಗ್ಗೆ ಸಂಸತ್ತು ಕಾನೂನಿನ ಮೂಲಕ ಯುಕ್ತ ಧನ ವಿನಿಯೋಗ ಮಾಡಿದ ತರುವಾಯ, ಅಧ್ಯಕ್ಷರಿಗೆ ಮತ್ತು ಇತರ ಸದಸ್ಯರಿಗೆ ಸಂದಾಯ ಮಾಡಬೇಕಾದ ಸಂಬಳಗಳನ್ನು ಮತ್ತು ಭತ್ಯೆಗಳನ್ನು ಹಾಗೂ ಮಂಡಳಿಯ ಅಧಿಕಾರಿಗಳಿಗೆ ಮತ್ತು ಉದ್ಯೋಗಿಗಳಿಗೆ ಸಂದಾಯ ಮಾಡಬೇಕಾದ ಸಂಬಳಗಳು, ಭತ್ಯೆಗಳು

ಮತ್ತು ಪಿಂಚಣಿಗಳೂ ಒಳಗೊಂಡಂತೆ ಆಡಳಿತಾತ್ಮಕ ವೆಚ್ಚಗಳನ್ನು ಸಂದಾಯ ಮಾಡಲು ಅಗತ್ಯವಿರುವಷ್ಟು ಹಣದ ಮೊತ್ತದ ಅನುದಾನಗಳನ್ನು ಮಂಡಳಿಗೆ ನೀಡಬಹುದು.

39. ನಿಧಿ.- (1) ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ವಿನಿಯಾಮಕ ಮಂಡಳಿ ನಿಧಿಯೆಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ಅದಕ್ಕೆ,-

(i) ಈ ಅಧಿನಿಯಮದ ಮೇರೆಗೆ ಮಂಡಳಿಯು ಸ್ವೀಕರಿಸಿದ ಎಲ್ಲ ಅನುದಾನಗಳನ್ನು, ಫೀಜುಗಳನ್ನು, ದಂಡಗಳನ್ನು ಮತ್ತು ಚಾರ್ಜುಗಳನ್ನು; ಮತ್ತು

(ii) ಕೇಂದ್ರ ಸರ್ಕಾರವು ಅನುಮೋದಿಸಬಹುದಾದಂಥ ಇತರ ಮೂಲಗಳಿಂದ ಮಂಡಳಿಯು ಸ್ವೀಕರಿಸಿದ ಎಲ್ಲ ಮೊತ್ತಗಳನ್ನು

– ಜಮೆ ಮಾಡತಕ್ಕದ್ದು.

(2) ನಿಧಿಯನ್ನು,-

(i) ಅಧ್ಯಕ್ಷರಿಗೆ ಮತ್ತು ಇತರ ಸದಸ್ಯರಿಗೆ ಸಂದಾಯ ಮಾಡಬೇಕಾದ ಸಂಬಳಗಳನ್ನು ಮತ್ತು ಭತ್ಯೆಗಳನ್ನು ಹಾಗೂ ಮಂಡಳಿಯ ಅಧಿಕಾರಿಗಳಿಗೆ ಮತ್ತು ಸದಸ್ಯರಿಗೆ ಸಂದಾಯ ಮಾಡಬೇಕಾದ ಸಂಬಳಗಳು, ಭತ್ಯೆಗಳು ಮತ್ತು ಪಿಂಚಣಿಗಳೂ ಒಳಗೊಂಡಂತೆ ಆಡಳಿತಾತ್ಮಕ ವೆಚ್ಚಗಳನ್ನು;

(ii) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ವಹಿಸಿದ ಅಥವಾ ವಹಿಸಬೇಕಾದ ವೆಚ್ಚಗಳನ್ನು

– ಸಂದಾಯ ಮಾಡುವುದಕ್ಕೆ ಬಳಸತಕ್ಕದ್ದು.

(3) ಕೇಂದ್ರ ಸರ್ಕಾರವು,-

(i) ಸಂಬಳಗಳಿಗಾಗಿ, ಭತ್ಯೆಗಳಿಗಾಗಿ ಮತ್ತು ಇತರ ಎಲ್ಲ ವೆಚ್ಚಗಳಿಗಾಗಿ ಮಂಡಳಿಗೆ ಬೇಕಾಗುವ ಆಯವ್ಯಯ ಅಗತ್ಯಗಳನ್ನು ಆ ಸರ್ಕಾರಕ್ಕೆ ಶಿಫಾರಸು ಮಾಡಲು, ಸೂಕ್ತವೆಂದು ತಾನು ಭಾವಿಸಬಹುದಾದಂಥ ವ್ಯಕ್ತಿಗಳನ್ನು ಒಳಗೊಂಡ ಒಂದು ಸಮಿತಿಯನ್ನು ರಚಿಸತಕ್ಕದ್ದು; ಮತ್ತು

(ii) ಸಮಿತಿಯ ಶಿಫಾರಸುಗಳ ಆಧಾರದ ಮೇಲೆ ಮಂಡಳಿಯ ಆಯವ್ಯಯ ಮಿತಿಯನ್ನು ನಿಗದಿಪಡಿಸತಕ್ಕದ್ದು.

40. **ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.**- (1) ಮಂಡಳಿಯು, ಕೇಂದ್ರ ಸರ್ಕಾರವು ಭಾರತದ ಲೆಕ್ಕನಿಯಂತ್ರಕ-ಹಾಗೂ- ಮಹಾ ಲೆಕ್ಕಪರಿಶೋಧಕರ ಜೊತೆಗೆ ಸಮಾಲೋಚಿಸಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಸೂಕ್ತ ಲೆಕ್ಕಪತ್ರಗಳನ್ನು ಮತ್ತು ಇತರ ಸಂಬಂಧಪಟ್ಟ ದಾಖಲೆಗಳನ್ನು ನಿರ್ವಹಿಸತಕ್ಕದ್ದು ಹಾಗೂ ವಾರ್ಷಿಕ ಲೆಕ್ಕಪತ್ರಗಳ ವಿವರಣಾಪಟ್ಟಿಕೆಯನ್ನು ಸಿದ್ಧಪಡಿಸತಕ್ಕದ್ದು.

(2) ಮಂಡಳಿಯ ಲೆಕ್ಕಪತ್ರಗಳನ್ನು ಭಾರತದ ಲೆಕ್ಕನಿಯಂತ್ರಕ-ಹಾಗೂ-ಮಹಾ ಲೆಕ್ಕಪರಿಶೋಧಕರು ನಿರ್ದಿಷ್ಟಪಡಿಸಬಹುದಾದಂಥ ಮಧ್ಯಂತರಗಳಲ್ಲಿ ಅವರು ಲೆಕ್ಕಪರಿಶೋಧನೆ ಮಾಡತಕ್ಕದ್ದು ಹಾಗೂ ಅಂಥ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ವಹಿಸಿದ ಯಾವುದೇ ವೆಚ್ಚವನ್ನು ಭಾರತದ ಲೆಕ್ಕ ನಿಯಂತ್ರಕ-ಹಾಗೂ-ಮಹಾ ಲೆಕ್ಕಪರಿಶೋಧಕರಿಗೆ ಮಂಡಳಿಯು ಸಂದಾಯ ಮಾಡತಕ್ಕದ್ದು.

**ವಿವರಣೆ.**- ಸಂದೇಹಗಳ ನಿವಾರಣೆಗಾಗಿ ಈ ಅಧಿನಿಯಮದ ಮೇರೆಗೆ, ಮಂಡಳಿಯು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ, ತೆಗೆದುಕೊಂಡ ಯಾವ ತೀರ್ಮಾನಗಳು ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು ಸಲ್ಲಿಸಬಹುದಾದ ವಿಷಯಗಳಿಗೆ ಸಂಬಂಧಪಟ್ಟಿವೆಯೋ ಆ ತೀರ್ಮಾನಗಳು ಈ ಪ್ರಕರಣದ ಮೇರೆಗೆ ಲೆಕ್ಕ ಪರಿಶೋಧನೆಗೆ ಒಳಪಡತಕ್ಕದ್ದಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

(3) ಭಾರತದ ಲೆಕ್ಕನಿಯಂತ್ರಕ-ಹಾಗೂ-ಮಹಾ ಲೆಕ್ಕಪರಿಶೋಧಕರು ಅಥವಾ ಮಂಡಳಿಯ ಲೆಕ್ಕಪತ್ರಗಳ ಪರಿಶೋಧನೆಯ ಸಂಬಂಧದಲ್ಲಿ ಅವರು ನೇಮಕ ಮಾಡಿದ ಇತರ ಯಾರೇ ವ್ಯಕ್ತಿಯು, ಸರ್ಕಾರಿ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಇರಬಹುದಾದಂಥವೇ ಹಕ್ಕುಗಳನ್ನು ಮತ್ತು ವಿಶೇಷಾಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಹೊಂದಿರತಕ್ಕದ್ದು ಹಾಗೂ, ನಿರ್ದಿಷ್ಟವಾಗಿ, ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ಸಂಬಂಧಿಸಿದ ವೋಚರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ಕೇಳುವ ಹಾಗೂ ಮಂಡಳಿಯ ಕಚೇರಿಗಳನ್ನು ತಪಾಸಣೆ ಮಾಡುವ ಹಕ್ಕನ್ನು ಹೊಂದಿರತಕ್ಕದ್ದು.

(4) ಭಾರತದ ಲೆಕ್ಕನಿಯಂತ್ರಕ-ಹಾಗೂ-ಮಹಾಲೆಕ್ಕಪರಿಶೋಧಕರು ಅಥವಾ ಈ ಬಗ್ಗೆ ಅವರು ನೇಮಕ ಮಾಡಿದ ಯಾರೇ ಇತರ ವ್ಯಕ್ತಿಯು ಪ್ರಮಾಣೀಕರಿಸಿದ ಮಂಡಳಿಯ ವಾರ್ಷಿಕ ಲೆಕ್ಕಪತ್ರಗಳ ಜೊತೆಗೆ ಅವುಗಳ ಮೇಲಿನ ಲೆಕ್ಕಪರಿಶೋಧನಾ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು ಮತ್ತು ಆ ಸರ್ಕಾರವು ಅವುಗಳನ್ನು ಸಂಸತ್ತಿನ ಪ್ರತಿಯೊಂದು ಸದನಗಳ ಮುಂದೆ ಇಡಿಸತಕ್ಕದ್ದು.

41. **ವಾರ್ಷಿಕ ವರದಿ ಮತ್ತು ಅದನ್ನು ಸಂಸತ್ತಿನ ಮುಂದೆ ಮಂಡಿಸುವುದು.**- (1) ಮಂಡಳಿಯು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ ಪ್ರತಿ ವರ್ಷಕ್ಕೊಮ್ಮೆ ಹಿಂದಿನ ವರ್ಷಗಳ ಅವಧಿಯಲ್ಲಿ

ವ್ಯವಹರಣೆಗಳಿಗೆ ಮತ್ತು ನೀತಿಗಳಿಗೆ ಸಂಬಂಧಿಸಿದ ಮಾಹಿತಿಯನ್ನೊಳಗೊಂಡಂತೆ ತನ್ನ ಕಾರ್ಯಚಟುವಟಿಕೆಗಳನ್ನು ಸಂಕ್ಷಿಪ್ತವಾಗಿ ತಿಳಿಸಿರುವ ವಾರ್ಷಿಕ ವರದಿಯನ್ನು ತಯಾರಿಸತಕ್ಕದ್ದು ಮತ್ತು ಅಂಥ ವರದಿಯು ಮಂಡಳಿಯ ವಾರ್ಷಿಕ ಲೆಕ್ಕಪತ್ರಗಳ ವಿವರಣಾಪತ್ರಗಳನ್ನು ಸಹ ಒಳಗೊಂಡಿರತಕ್ಕದ್ದು.

(2) ವರದಿಯ ಒಂದು ಪ್ರತಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು ಮತ್ತು ಕೇಂದ್ರ ಸರ್ಕಾರವು, ಅಂಥ ವರದಿಯನ್ನು ಸ್ವೀಕರಿಸಿದ ಕೂಡಲೇ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನಗಳ ಮುಂದೆ ಅದನ್ನು ಇಡಿಸತಕ್ಕದ್ದು.

## ಅಧ್ಯಾಯ – VIII

## ಕೇಂದ್ರ ಸರ್ಕಾರದ ಅಧಿಕಾರ

**42. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು, ಭಾರತದ ಸಾರ್ವಭೌಮತೆಯ ಮತ್ತು ಅಖಂಡತೆಯ, ರಾಷ್ಟ್ರದ ಭದ್ರತೆಯ, ವಿದೇಶಗಳೊಂದಿಗೆ ಸ್ನೇಹಯುತ ಸಂಬಂಧಗಳ ಅಥವಾ ಸಾರ್ವಜನಿಕ ಸುವ್ಯವಸ್ಥೆಯ ಹಿತದೃಷ್ಟಿಯಿಂದ ಅದು ಅವಶ್ಯವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ಕಾಲಕಾಲಕ್ಕೆ ಲಿಖಿತದಲ್ಲಿ ಮಂಡಳಿಗೆ ನೀಡಬಹುದು.

(2) ಈ ಹಿಂದೆ ಹೇಳಿದ ಉಪಬಂಧಕ್ಕೆ ಬಾಧಕವಾಗದಂತೆ, ಕೇಂದ್ರ ಸರ್ಕಾರವು, ಸಾರ್ವಜನಿಕ ಹಿತದೃಷ್ಟಿಯಿಂದ ಅಥವಾ ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಅಥವಾ ನೈಸರ್ಗಿಕ ಅನಿಲದ ಅಥವಾ ಆ ಎಲ್ಲವುಗಳ ಅಥವಾ ಅವುಗಳಲ್ಲಿ ಯಾವುವಾದರೂ ಒಂದರ ಸರಬರಾಜನ್ನು ಕಾಪಾಡಿಕೊಂಡು ಬರುವುದಕ್ಕಾಗಿ ಅಥವಾ ಹೆಚ್ಚಿಸುವುದಕ್ಕಾಗಿ ಅಥವಾ ಅವುಗಳ ನ್ಯಾಯಸಮ್ಮತ ವಿತರಣೆಯನ್ನು ಸುನಿಶ್ಚಿತಪಡಿಸುವುದಕ್ಕಾಗಿ ಮತ್ತು ಅವು ಸಾಕಷ್ಟು ಪ್ರಮಾಣದಲ್ಲಿ ದೊರೆಯುವುದನ್ನು ಸುನಿಶ್ಚಿತಪಡಿಸುವುದಕ್ಕಾಗಿ ಮಂಡಳಿಗೆ ಲಿಖಿತದಲ್ಲಿ ನೀತಿ ನಿರ್ದೇಶನಗಳನ್ನು ನೀಡುವುದು ಅವಶ್ಯವೆಂದು ಅಥವಾ ವಿಹಿತವೆಂದು ಅದಕ್ಕೆ ಕಂಡುಬಂದರೆ, ಹಾಗೆ ನೀತಿ ನಿರ್ದೇಶನಗಳನ್ನು ನೀಡಬಹುದು ಮತ್ತು ಅಂಥ ನೀತಿ ನಿರ್ದೇಶನಗಳಿಗೆ ಮಂಡಳಿಯು ಬದ್ಧವಾಗಿರತಕ್ಕದ್ದು:

ಪರಂತು, ಅಂಥ ಯಾವುದೇ ನೀತಿ ನಿರ್ದೇಶನವು ಮಂಡಳಿಯ ದೈನಂದಿನ ವ್ಯವಹಾರಗಳಿಗೆ ಸಂಬಂಧಿಸಿರತಕ್ಕದ್ದಲ್ಲ:

ಮತ್ತು ಪರಂತು, ಈ ಉಪ-ಪ್ರಕರಣದ ಮೇರೆಗೆ ಯಾವುದೇ ನಿರ್ದೇಶನವನ್ನು ನೀಡುವುದಕ್ಕೆ ಮುಂಚೆ, ಸಾಧ್ಯವಾದಷ್ಟುಮಟ್ಟಿಗೆ ಮಂಡಳಿಗೆ ಅದರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶವನ್ನು ನೀಡತಕ್ಕದ್ದು.

(3) ಪ್ರಶ್ನೆಯು, ನೀತಿಗೆ ಸಂಬಂಧಿಸಿದ ಪ್ರಶ್ನೆಯೇ ಅಥವಾ ಅಲ್ಲವೇ ಎಂಬ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವೇ ಅಂತಿಮವಾದುದಾಗಿರತಕ್ಕದ್ದು.

**43. ಸಾರ್ವಜನಿಕ ಹಿತದೃಷ್ಟಿಯಿಂದ ಸೌಲಭ್ಯಗಳ ಮತ್ತು ಯಾವುದೇ ಸಂಸ್ಥೆಯ ವ್ಯಾಪಾರ ವ್ಯವಹಾರ ಆವರಣಗಳ ಮತ್ತು ಚಿಲ್ಲರೆ ವ್ಯಾಪಾರ ಮಳಿಗೆಗಳ ನಿಯಂತ್ರಣವನ್ನು ಮತ್ತು ನಿರ್ವಹಣೆಯನ್ನು ವಹಿಸಿಕೊಳ್ಳುವುದು.–** (1) ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಅಥವಾ ನೈಸರ್ಗಿಕ ಅನಿಲದ ಸರಬರಾಜನ್ನು ಅಸ್ತವ್ಯಸ್ತಗೊಳಿಸುವಂಥ ಯುದ್ಧದ ಅಥವಾ ನೈಸರ್ಗಿಕ ವಿಪತ್ತಿನ ಸಂದರ್ಭದಲ್ಲಿ ಅಥವಾ ಅದೇ ರೀತಿಯ ಇತರ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರವು, ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಅಥವಾ ನೈಸರ್ಗಿಕ ಅನಿಲದ ನಿರಂತರ ಸರಬರಾಜನ್ನು ಸುನಿಶ್ಚಿತಗೊಳಿಸುವುದಕ್ಕಾಗಿ ಯಾವುದೇ ದಾಸ್ತಾನು ಸ್ಥಳದ, ಸೌಲಭ್ಯಗಳ ಮತ್ತು ಯಾವುದೇ ಸಂಸ್ಥೆಯ ವ್ಯಾಪಾರ ವ್ಯವಹಾರ ಆವರಣಗಳ ಮತ್ತು ಚಿಲ್ಲರೆ ಮಾರಾಟ ಮಳಿಗೆಯ ನಿಯಂತ್ರಣವನ್ನು ಮತ್ತು ನಿರ್ವಹಣೆಯನ್ನು ಅಧಿಸೂಚನೆಯ ಮೂಲಕ, ವಹಿಸಿಕೊಳ್ಳಬಹುದು ಅಥವಾ ಅದರ ಕಾರ್ಯಾಚರಣೆಗಳನ್ನು ಸ್ಥಗಿತಗೊಳಿಸಬಹುದು ಅಥವಾ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದವರೆಗೆ ಮತ್ತು ಅಂಥ ರೀತಿಯಲ್ಲಿ ಅದನ್ನು ನಿರ್ವಹಿಸುವುದಕ್ಕಾಗಿ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯಾವುದೇ ಏಜೆನ್ಸಿಗೆ ಅದನ್ನು ವಹಿಸಿಕೊಡಬಹುದು:

ಪರಂತು, ಚಿಲ್ಲರೆ ವ್ಯಾಪಾರ ಮಳಿಗೆಗಳ ಮತ್ತು ಇತರ ವ್ಯಾಪಾರ ವ್ಯವಹಾರ ಆವರಣಗಳ ನಿಯಂತ್ರಣವನ್ನು ಮತ್ತು ನಿರ್ವಹಣೆಯನ್ನು ವಹಿಸಿಕೊಳ್ಳುವುದಕ್ಕೆ ಆದೇಶಗಳನ್ನು ಹೊರಡಿಸುವುದಕ್ಕೆ ಮುಂಚೆ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ಸಂಬಂಧಪಟ್ಟ ಸಂಸ್ಥೆಗಳಿಗೆ ನೀಡತಕ್ಕದ್ದು:

ಮತ್ತು ಪರಂತು, ಯಾವ ಸಂಸ್ಥೆಯ ವಿರುದ್ಧ ಆದೇಶವನ್ನು ನೀಡಲಾಗಿದೆಯೋ ಆ ಸಂಸ್ಥೆಗೆ ಯಾವುದೇ ತುರ್ತು ಸಂದರ್ಭದಲ್ಲಿ ಅಥವಾ ಯಾವ ಪ್ರಕರಣಗಳಲ್ಲಿ ಸಾಕಷ್ಟು ಸಮಯ ಇರದಿದ್ದುದರಿಂದ ಅಥವಾ ಅನ್ಯಥಾ, ಸಂದರ್ಭ ಸನ್ನಿವೇಶಗಳಿಂದಾಗಿ ನೋಟೀಸನ್ನು ನೀಡಲು ಆಗಲಿಲ್ಲವೋ ಅಂಥ ಪ್ರಕರಣಗಳಲ್ಲಿ, ನಿರ್ದಿಷ್ಟ ಅವಧಿಗೆ ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಅಥವಾ ನೈಸರ್ಗಿಕ ಅನಿಲದ ನಿರಂತರ ಸರಬರಾಜನ್ನು ನಿರ್ವಹಿಸುವ ಸಲುವಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ಅಹವಾಲನ್ನು ಹೇಳಿಕೊಳ್ಳುವ ಅವಕಾಶ ನೀಡುವುದನ್ನು ಕೊಡದೆ ಇರಬಹುದು.

(2) ಉಪ-ಪ್ರಕರಣ (1)ರ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ಉಲ್ಲೇಖಿಸಿರುವ ಸ್ವತ್ತು ಯಾವ ರೆವಿನ್ಯೂ ಜಿಲ್ಲೆಯಲ್ಲಿದೆಯೋ ಆ ರೆವಿನ್ಯೂ ಜಿಲ್ಲೆಯ ಕಲೆಕ್ಟರನು, ಆ ಸ್ವತ್ತನ್ನು ವಹಿಸಿಕೊಳ್ಳುವುದಕ್ಕಾಗಿ ಸಂದಾಯ ಮಾಡಬಹುದಾದ ಪರಿಹಾರದ ಮೊತ್ತವನ್ನು ನಿರ್ಧರಿಸತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಪರಿಹಾರವನ್ನು ಕ್ಲೇಮು ಮಾಡಲು ಸಲ್ಲಿಸಬೇಕಾದ ಅರ್ಜಿಯ ನಮೂನೆಯು ಮತ್ತು ರೀತಿಯು, ಪರಿಹಾರದ ಮೊತ್ತವನ್ನು ನಿರ್ಧರಿಸುವ ಕಾರ್ಯವಿಧಾನವು ಹಾಗೂ ಅಂಥ ಪರಿಹಾರವನ್ನು ಯಾವ ಕಾಲದೊಳಗೆ ಸಂದಾಯ ಮಾಡಬೇಕೋ ಆ ಕಾಲವು ನಿಯಮಿಸಬಹುದಾದಂತೆ ಇರತಕ್ಕದ್ದು.

## ಅಧ್ಯಾಯ – IX

## ಅಪರಾಧಗಳು ಮತ್ತು ಶಿಕ್ಷೆ

44. **ಮಂಡಳಿಯ ನಿರ್ದೇಶನಗಳ ಉಲ್ಲಂಘನೆಗಾಗಿ ಶಿಕ್ಷೆ.–** ಯಾರೇ ವ್ಯಕ್ತಿಯು ಮಂಡಳಿಯ ನಿರ್ದೇಶನಗಳನ್ನು ಉಲ್ಲಂಘಿಸಿದರೆ, ಅಂಥ ವ್ಯಕ್ತಿಯು ಇಪ್ಪತ್ತೈದು ಕೋಟಿ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂತಹ ಜುಲ್ಮಾನೆಯಿಂದ ಮತ್ತು ಉಲ್ಲಂಘನೆ ಮುಂದುವರಿದ ಸಂದರ್ಭದಲ್ಲಿ, ಉಲ್ಲಂಘನೆಯು ಮುಂದುವರಿದ ಅವಧಿಯಲ್ಲಿ ಪ್ರತಿಯೊಂದು ದಿನಕ್ಕೆ ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂತಹ ಹೆಚ್ಚುವರಿ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

45. **ಅಪೀಲು ನ್ಯಾಯಾಧಿಕರಣದ ಆದೇಶವನ್ನು ಪಾಲಿಸಲು ಉದ್ದೇಶಪೂರ್ವಕವಾಗಿ ತಪ್ಪಿದ್ದಕ್ಕೆ ಶಿಕ್ಷೆ.–** ಯಾರೇ ವ್ಯಕ್ತಿಯು, ಅಪೀಲು ನ್ಯಾಯಾಧಿಕರಣದ ಆದೇಶವನ್ನು ಪಾಲಿಸಲು ಉದ್ದೇಶಪೂರ್ವಕವಾಗಿ ತಪ್ಪಿದರೆ, ಅವನು ಒಂದು ಕೋಟಿ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಸಲ ಅಥವಾ ಆ ತರುವಾಯವೂ ಅಪರಾಧವನ್ನು ಮಾಡಿದ ಸಂದರ್ಭದಲ್ಲಿ ಎರಡು ಕೋಟಿ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ, ಅಂಥ ಉಲ್ಲಂಘನೆಯು ಮುಂದುವರಿದ ಪ್ರತಿಯೊಂದು ದಿನಕ್ಕೆ ಇಪ್ಪತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

46. **ಅನಧಿಕೃತ ಕಾರ್ಯ ಚಟುವಟಿಕೆಗಳಿಗೆ ಶಿಕ್ಷೆ.–** ಯಾರೇ ವ್ಯಕ್ತಿಯು ಒಂದು ಸಂಸ್ಥೆಯಾಗಿ ಕಾನೂನು ಮಾನ್ಯ ನೋಂದಣಿ ಮಾಡಿಸದೆ ಅಥವಾ ಅಧಿಕಾರ ಇಲ್ಲದೆ ಯಾವುದೇ ಅಧಿಸೂಚಿತ ಪೆಟ್ರೋಲಿಯಂ ಅನ್ನು, ಪೆಟ್ರೋಲಿಯಂ ಉತ್ಪನ್ನಗಳನ್ನು ಅಥವಾ ನೈಸರ್ಗಿಕ ಅನಿಲವನ್ನು ಕ್ರಯ–ವಿಕ್ರಯ ಮಾಡಿದರೆ, ಅಂಥ ವ್ಯಕ್ತಿಯು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಇಪ್ಪತ್ತೈದು ಕೋಟಿ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡರಿಂದಲೂ, ಹಾಗೂ ಉಲ್ಲಂಘನೆ ಮುಂದುವರಿದ ಸಂದರ್ಭದಲ್ಲಿ, ಉಲ್ಲಂಘನೆಯು ಮುಂದುವರೆದ ಅವಧಿಯಲ್ಲಿ ಪ್ರತಿದಿನಕ್ಕೆ ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

47. **ನೋಂದಣಿ ಮಾಡಿಸದೆ ದ್ರವೀಕೃತ ನೈಸರ್ಗಿಕ ಅನಿಲ ತೈಲಾಗಾರವನ್ನು ಸ್ಥಾಪಿಸಿದ್ದಕ್ಕೆ ಅಥವಾ ನಿರ್ವಹಿಸಿದ್ದಕ್ಕೆ ಶಿಕ್ಷೆ.–** ಯಾರೇ ವ್ಯಕ್ತಿಯು, 15ನೇ ಪ್ರಕರಣದ ಮೇರೆಗೆ ಅಗತ್ಯಪಡಿಸಿದಂತೆ ನೋಂದಣಿ ಮಾಡಿಸದೆ ದ್ರವೀಕೃತ ನೈಸರ್ಗಿಕ ಅನಿಲ ತೈಲಾಗಾರವನ್ನು ಸ್ಥಾಪಿಸಿದರೆ ಅಥವಾ ನಿರ್ವಹಿಸಿದರೆ, ಅಂಥ ವ್ಯಕ್ತಿಯು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಇಪ್ಪತ್ತೈದು ಕೋಟಿ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಹಾಗೂ ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ, ಉಲ್ಲಂಘನೆ ಮುಂದುವರೆದ ಅವಧಿಯಲ್ಲಿ ಪ್ರತಿ ದಿನಕ್ಕೆ ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

48. **ಅಧಿಕಾರ ಪಡೆಯದೆ ಸಾಮಾನ್ಯ ವಾಹಕವನ್ನು ಅಥವಾ ಕರಾರು ವಾಹಕವನ್ನು ವಿನ್ಯಾಸಗೊಳಿಸುವುದಕ್ಕೆ, ನಿರ್ಮಿಸುವುದಕ್ಕೆ, ನಿರ್ವಹಿಸುವುದಕ್ಕೆ ಅಥವಾ ವಿಸ್ತರಿಸುವುದಕ್ಕೆ ದಂಡನೆ.–** ಯಾರೇ ವ್ಯಕ್ತಿಯು, 19ನೇ ಪ್ರಕರಣದ ಮೇರೆಗೆ ಅಗತ್ಯಪಡಿಸಿದ ಅಧಿಕಾರವನ್ನು ಪಡೆಯದೆ ಸಾಮಾನ್ಯ ವಾಹಕವನ್ನು ಅಥವಾ ಕರಾರು ವಾಹಕವನ್ನು ಅಥವಾ ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲವನ್ನು ವಿನ್ಯಾಸಗೊಳಿಸಿದರೆ, ನಿರ್ಮಿಸಿದರೆ, ನಿರ್ವಹಿಸಿದರೆ ಅಂಥ ವ್ಯಕ್ತಿಯು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಇಪ್ಪತ್ತೈದು ಕೋಟಿ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ, ಉಲ್ಲಂಘನೆಯು ಮುಂದುವರಿಯುವ ಅವಧಿಯಲ್ಲಿ ಪ್ರತಿ ದಿನಕ್ಕೆ ಹತ್ತು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

49. **ಸಾಮಾನ್ಯ ವಾಹಕಕ್ಕೆ ಅಥವಾ ಕರಾರು ವಾಹಕಕ್ಕೆ ಉದ್ದೇಶಪೂರ್ವಕವಾಗಿ ಹಾನಿಯುಂಟು ಮಾಡಿದ್ದಕ್ಕೆ ದಂಡನೆ.–** ಯಾವುದೇ ಕೊಳವೆ ಮಾರ್ಗವನ್ನು ಅಥವಾ ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲವನ್ನು ಅಥವಾ ಪೆಟ್ರೋಲಿಯಂ ಅನ್ನು, ಪೆಟ್ರೋಲಿಯಂ ಉತ್ಪನ್ನಗಳನ್ನು ಅಥವಾ ನೈಸರ್ಗಿಕ ಅನಿಲವನ್ನು ಸರಬರಾಜು ಮಾಡುವುದಕ್ಕಾಗಿ ಇರುವ ಸಾಮಾನ್ಯ ವಾಹಕಕ್ಕೆ ಅಥವಾ ಕರಾರು ವಾಹಕಕ್ಕೆ ಸಂಬಂಧಿಸಿದ ಇತರ ಕಾಮಗಾರಿಯನ್ನು ಉದ್ದೇಶಪೂರ್ವಕವಾಗಿ ತೆಗೆದುಹಾಕುವ, ನಾಶಪಡಿಸುವ ಅಥವಾ ಹಾನಿ ಉಂಟು ಮಾಡುವ ಪ್ರತಿಯೊಬ್ಬ ವ್ಯಕ್ತಿಯು, ಅಂಥ ಪ್ರತಿಯೊಂದು ಅಪರಾಧಕ್ಕಾಗಿ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಇಪ್ಪತ್ತೈದು ಕೋಟಿ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ, ಅಂಥ ಉಲ್ಲಂಘನೆ ಮುಂದುವರಿದ ಅವಧಿಯಲ್ಲಿ ಪ್ರತಿ ದಿನಕ್ಕೆ ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

50. **ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಒಂದು ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಆ ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರಗಳನ್ನು ನಡೆಸುವುದಕ್ಕೆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಆ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ಅದು/ಅವನು ತನ್ನ ವಿರುದ್ಧ ವ್ಯವಹರಣೆಗೆ ಮತ್ತು ತದನುಸಾರವಾಗಿ ಶಿಕ್ಷೆಗೆ ಗುರಿಯಾಗತಕ್ಕದ್ದು:

ಪರಂತು, ಈ ಉಪ–ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ ಅಂಥ ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಯಥೋಚಿತವಾದ ಎಲ್ಲ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ಶಿಕ್ಷೆಗೆ ಅವನನ್ನು ಗುರಿಪಡಿಸತಕ್ಕದ್ದಲ್ಲ.

(2) ಉಪ-ಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆದಿದೆ ಎಂದು ರುಜುವಾತಾದರೆ ಅಥವಾ ಅವನ ನಿರ್ಲಕ್ಷ್ಯತೆಯಿಂದಾಗಿ, ನಡೆದಿದೆ ಎಂದು ಆರೋಪಿಸಿರುವುದು ರುಜುವಾತಾದರೆ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ತನ್ನ ವಿರುದ್ಧ ವ್ಯವಹರಣೆಗೆ ಅದು/ಅವನು ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ಶಿಕ್ಷೆಗೆ ಗುರಿಯಾಗತಕ್ಕದ್ದು.

**ವಿವರಣೆ.**- ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಅದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) "ನಿರ್ದೇಶಕ" ಎಂದರೆ ಒಂದು ಫರ್ಮಿನ ಸಂಬಂಧದಲ್ಲಿ ಆ ಫರ್ಮಿನ ಒಬ್ಬ ಪಾಲುದಾರ.

## ಅಧ್ಯಾಯ X

## ಸಂಕೀರ್ಣ

**51. ದತ್ತಾಂಶ ಕೋಶದ ಮತ್ತು ಮಾಹಿತಿಯ ನಿರ್ವಹಣೆ**- (1) ಮಂಡಳಿಯು, ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಮತ್ತು ನೈಸರ್ಗಿಕ ಅನಿಲದ ಬಗ್ಗೆ ವ್ಯವಹರಿಸುವ ಸಂಸ್ಥೆಗಳ ಕಾರ್ಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ದತ್ತಾಂಶ ಕೋಶವನ್ನು ಮತ್ತು ಮಾಹಿತಿ ವ್ಯವಸ್ಥೆಯನ್ನು ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ನಿರ್ವಹಿಸತಕ್ಕದ್ದು.

(2) ಮಂಡಳಿಯು, ಸಂಸ್ಥೆಗಳು ಒದಗಿಸಿದ ದತ್ತಾಂಶವನ್ನು ಪರಿಶೀಲಿಸಲು ಮತ್ತು ಈ ಉದ್ದೇಶಕ್ಕಾಗಿ ಯಾರೇ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು ನೇಮಕ ಮಾಡಲು ಹಾಗೂ ಅದು ಅವಶ್ಯವೆಂದು ಪರಿಗಣಿಸಬಹುದಾದಂಥ ಕ್ರಮಗಳನ್ನು ಕೈಗೊಳ್ಳಲು ಅಧಿಕಾರ ಹೊಂದಿರತಕ್ಕದ್ದು.

**52. ಸಂಸ್ಥೆಗಳ ಬಾಧ್ಯತೆಗಳು.**- ಪ್ರತಿಯೊಂದು ಸಂಸ್ಥೆಯು,-

(ಎ) ಮಂಡಳಿಯು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಸ್ತಾವೇಜೀಯ ದಾಖಲೆಗಳನ್ನು ನಿರ್ವಹಿಸತಕ್ಕದ್ದು;

(ಬಿ) ಮಂಡಳಿಯು ನಿರ್ದಿಷ್ಟಪಡಿಸಬಹುದಾದಂಥ ಸೌಲಭ್ಯಗಳನ್ನು ಮತ್ತು ದಸ್ತಾವೇಜು ದಾಖಲೆಗಳನ್ನು ತಪಾಸಣೆ ಮಾಡಲು ಮಂಡಳಿಯು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಗೆ ಅವಕಾಶ ನೀಡತಕ್ಕದ್ದು;

(ಸಿ) ಯಾವ ಯಾವ ಚಟುವಟಿಕೆಗಳ ನಿರ್ವಹಣೆಗೆ ಅಧಿಕಾರವನ್ನು ನೀಡಲಾಗಿದೆಯೋ ಆ ಕಾರ್ಯ ಚಟುವಟಿಕೆಗಳ ನಿರ್ವಹಣೆಯನ್ನು, ಯಾವ ದಸ್ತಾವೇಜಿನಲ್ಲಿ ಆ ಅಧಿಕಾರವನ್ನು ನೀಡಲಾಗಿದೆಯೋ ಆ ದಸ್ತಾವೇಜಿನಲ್ಲಿ ಮಂಡಳಿಯು ನಿರ್ದಿಷ್ಟಪಡಿಸಬಹುದಾದಂಥ ಅವಧಿಯೊಳಗೆ ಪ್ರಾರಂಭಿಸತಕ್ಕದ್ದು;

(ಡಿ) ಈ ಮುಂದಿನವುಗಳನ್ನು, ಎಂದರೆ,-

(i) ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಮತ್ತು ನೈಸರ್ಗಿಕ ಅನಿಲದ ಸರಬರಾಜಿಗಾಗಿ ಕೊಳವೆಮಾರ್ಗಗಳ ಬಳಕೆಗೆ ಸಂಬಂಧಿಸಿದಂತೆ ಮಂಡಳಿಯೊಂದಿಗೆ ಮಾಡಿಕೊಂಡ ಒಪ್ಪಂದಗಳನ್ನು; ಅಥವಾ

(ii) ಮಂಡಳಿಯು ವಿನಿಯಮಗಳ ಮೂಲಕ ನಿರ್ಧರಿಸಬಹುದಾಂಥ ಯಾವುದೇ ಇತರ ದಸ್ತಾವೇಜನ್ನು

-ನೋಂದಾಯಿಸತಕ್ಕದ್ದು;

(ಇ) ಕ್ರಯವಿಕ್ರಯ ಸೇವಾ ಬಾಧ್ಯತೆಗಳನ್ನು ಮತ್ತು ಚಿಲ್ಲರೆ ಮಾರಾಟ ಸೇವಾ ಬಾಧ್ಯತೆಗಳನ್ನು ಪಾಲಿಸತಕ್ಕದ್ದು.

(2) ಮಂಡಳಿಯು, ಪಾರದರ್ಶಕತೆಯನ್ನು ಖಾತ್ರಿಪಡಿಸಿಕೊಳ್ಳುವುದಕ್ಕಾಗಿ ಮತ್ತು ಸಂಸ್ಥೆಯ ಮಾಲೀಕತ್ವ ನಿಜವಾದುದೇ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಯಾವ ಮಾಹಿತಿಯು ಅವಶ್ಯವೆಂದು ಪರಿಗಣಿಸುತ್ತದೋ ಆ ಮಾಹಿತಿಯೂ ಸೇರಿದಂತೆ ಯಾವುದೇ ಸಂಸ್ಥೆಯಿಂದ ಯಾವುದೇ ಮಾಹಿತಿಯನ್ನು ತರಿಸಿಕೊಳ್ಳಬಹುದು.

(3) ಮಂಡಳಿಯು ಅಥವಾ ಮಂಡಳಿಯು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಅವಶ್ಯಕವೆನಿಸಿದಲೆಲ್ಲಾ ಸಂಸ್ಥೆಗಳನ್ನು ತಪಾಸಣೆ ಮಾಡಲು ಮತ್ತು ಅವುಗಳಿಂದ ಮಾಹಿತಿಯನ್ನು ಪಡೆಯಲು ಅಧಿಕಾರ ಹೊಂದಿರತಕ್ಕದ್ದು.

(4) ಅಧಿಕಾರ ನೀಡಿಕೆಯ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದಕ್ಕಾಗಿ ಮಂಡಲಿಯು ಅಥವಾ ಈ ಉದ್ದೇಶಕ್ಕಾಗಿ ಅದು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಕಂಪನಿಗಳ ಅಧಿನಿಯಮ, 1956ರ (1956ರ 1) 209ಎ ಪ್ರಕರಣದ ಮೇರೆಗೆ ಉಪಬಂಧಿಸಿರುವಂತೆ ಒಬ್ಬ ತಪಾಸಣಾ ಅಧಿಕಾರಿಯು ಹೊಂದಿರುವ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು.

(5) ಈ ಪ್ರಕರಣದ ಮೇರೆಗೆ ಮಂಡಳಿಯು ನೀಡಿದ ನಿರ್ದೇಶನಗಳನ್ನು ಪಾಲಿಸುವುದು ಪ್ರತಿಯೊಂದು ಸಂಸ್ಥೆಯ ಕರ್ತವ್ಯವಾಗಿರತಕ್ಕದ್ದು.

(6) ಮಂಡಳಿಯು, ಸಂಸ್ಥೆಗಳಿಂದ ಅದು ಸ್ವೀಕರಿಸಿದ ಯಾವುದೇ ಮಾಹಿತಿಯ ಮತ್ತು ದಾಖಲೆಗಳ ಸಂಬಂಧದಲ್ಲಿ ಗೌಪ್ಯತೆಯನ್ನು ಕಾಪಾಡಿಕೊಂಡು ಬರತಕ್ಕದ್ದು ಮತ್ತು ದಾಖಲೆಯಲ್ಲಿ ಒಳಗೊಂಡಿರುವ ಮಾಹಿತಿಯನ್ನು ಸಾರ್ವಜನಿಕ ಹಿತದೃಷ್ಟಿಯ ಕಾರಣಗಳ ಮೇಲೆ ಹೊರತು, ಯಾರೇ ವ್ಯಕ್ತಿಗೆ ಅಥವಾ ಪ್ರಾಧಿಕಾರಕ್ಕೆ ಬಹಿರಂಗಪಡಿಸತಕ್ಕದ್ದಲ್ಲ.

**53. ಕೇಂದ್ರ ಸರ್ಕಾರಕ್ಕೆ ವಿವರ ಪಟ್ಟಿಕೆಗಳು ಇತ್ಯಾದಿಗಳನ್ನು ಒದಗಿಸುವುದು.–** ಮಂಡಳಿಯು ಈ ಅಧಿನಿಯಮದ ಮೇರೆಗೆ ಉದ್ದೇಶಿಸಿದ ಅಥವಾ ಈಗ ಅಸ್ತಿತ್ವದಲ್ಲಿರುವ ಕಾರ್ಯ ಚಟುವಟಿಕೆಗಳಿಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ವಿವರಪಟ್ಟಿಕೆಗಳನ್ನು ಹಾಗೂ ವಿವರಣಾ ಪಟ್ಟಿಕೆಗಳನ್ನು ಮತ್ತು ಅಂಥ ವಿವರಗಳನ್ನು ನಿಯಮಿಸಬಹುದಾದಂಥ ಅಥವಾ ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂಥ ನಮೂನೆಯಲ್ಲಿ ಹಾಗೂ ರೀತಿಯಲ್ಲಿ ಮತ್ತು ಕಾಲದಲ್ಲಿ ಕೇಂದ್ರ ಸರ್ಕಾರಕ್ಕೆ ಒದಗಿಸತಕ್ಕದ್ದು.

**54. ಅಧ್ಯಕ್ಷನು, ಸದಸ್ಯರು, ಮುಂತಾದವರು ಲೋಕ ನೌಕರರಾಗಿರುವುದು.–** ಮಂಡಳಿಯ ಅಧ್ಯಕ್ಷನು, ಸದಸ್ಯರುಗಳು, ಅಧಿಕಾರಿಗಳು ಮತ್ತು ಇತರ ನೌಕರರು ಹಾಗೂ ಅಪೀಲು ನ್ಯಾಯಾಧಿಕರಣದ ತಾಂತ್ರಿಕ ಸದಸ್ಯರು (ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ) ಈ ಅಧಿನಿಯಮದ ಯಾವುವೇ ಉಪಬಂಧಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸುತ್ತಿರುವಾಗ ಅಥವಾ ಕಾರ್ಯನಿರ್ವಹಿಸುತ್ತಿರುವರೆಂದು ತಾತ್ಪರ್ಯವಾಗುವಾಗ ಅವರುಗಳನ್ನು ಭಾರತ ದಂಡ ಸಂಹಿತೆಯ (1860 ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರೆಂದು ಭಾವಿಸತಕ್ಕದ್ದು.

**55. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅಥವಾ ವಿನಿಯಮಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಕೇಂದ್ರ ಸರ್ಕಾರದ, ಮಂಡಳಿಯ, ತಾಂತ್ರಿಕ ಪ್ರಾಧಿಕಾರದ ಅಥವಾ ಅಪೀಲು ನ್ಯಾಯಾಧಿಕರಣದ ಅಥವಾ ಕೇಂದ್ರ ಸರ್ಕಾರದ ಯಾರೇ ಅಧಿಕಾರಿಯ ಅಥವಾ ಮಂಡಳಿಯ ಯಾರೇ ಅಧ್ಯಕ್ಷನ, ಸದಸ್ಯನ, ಅಧಿಕಾರಿಯ ಅಥವಾ ಇತರ ನೌಕರನ ಅಥವಾ ಅಪೀಲು ನ್ಯಾಯಾಧಿಕರಣದ ತಾಂತ್ರಿಕ ಸದಸ್ಯನ (ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ) ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನ್‌ನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**56. ಸಿವಿಲ್ ನ್ಯಾಯಾಲಯಗಳಿಗೆ ಅಧಿಕಾರವ್ಯಾಪ್ತಿ ಇರದಿರುವುದು.–** ಯಾವ ವಿಷಯವನ್ನು ನಿರ್ಧರಿಸಲು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಮಂಡಳಿಗೆ ಅಥವಾ ಅಪೀಲು ನ್ಯಾಯಧಿಕರಣಕ್ಕೆ ಅಧಿಕಾರ ನೀಡಲಾಗಿದೆಯೋ ಆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ದಾವೆಯನ್ನು ಅಥವಾ ವ್ಯವಹರಣೆಯನ್ನು ಪುರಸ್ಕರಿಸಲು ಯಾವುದೇ ಸಿವಿಲ್ ನ್ಯಾಯಾಲಯವು ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ; ಮತ್ತು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರಕ್ಕೆ ಅನುಸಾರವಾಗಿ ಕೈಗೊಂಡ ಅಥವಾ ಕೈಗೊಳ್ಳಲಿರುವ ಯಾವುದೇ ಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯವು ಅಥವಾ ಇತರ ಪ್ರಾಧಿಕಾರವು ಯಾವುದೇ ನಿರ್ಬಂಧಕಾಜ್ಞೆಯನ್ನು ನೀಡತಕ್ಕದ್ದಲ್ಲ.

**57. ಕೆಲವು ಅಪರಾಧಗಳ ಸಂಜ್ಞಾನ.–** (1) ಮಂಡಳಿಯು ಅಥವಾ ಕೇಂದ್ರ ಸರ್ಕಾರವು ಅಥವಾ ಕೇಂದ್ರ ಸರ್ಕಾರದಿಂದ ನಿರ್ದೇಶನ ಪಡೆದ ಯಾವುದೇ ತನಿಖಾ ಏಜೆನ್ಸಿಯು ನೀಡಿದ ದೂರಿನ ಮೇಲೆ ಹೊರತು, IXನೇ ಅಧ್ಯಾಯದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಯಾವುದೇ ನ್ಯಾಯಾಲಯವು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(2) ಚೀಫ್ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕಿಂತ ಅಥವಾ ಚೀಫ್ ಜ್ಯೂಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕಿಂತ ಕೆಳದರ್ಜೆಯ ಯಾವುದೇ ನ್ಯಾಯಾಲಯವು IXನೇ ಅಧ್ಯಾಯದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಅಧಿವಿಚಾರಣೆಯನ್ನು ಮಾಡತಕ್ಕದ್ದಲ್ಲ.

(3) 44ನೇ, 45ನೇ, 46ನೇ ಮತ್ತು 47ನೇ ಪ್ರಕರಣಗಳ ಮೇರೆಗೆ ದಂಡನೀಯವಾದ ಪ್ರತಿಯೊಂದು ಅಪರಾಧವು ಸಂಜ್ಞಾನಕ್ಕೆ ತೆಗೆದುಕೊಳ್ಳಬಹುದಾದುದು ಆಗಿರತಕ್ಕದ್ದು.

**58. ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ವಹಿಸಿಕೊಡುವುದು.–** ಮಂಡಳಿಯು, ಸಾಮಾನ್ಯ ಅಥವಾ ವಿಶೇಷ ಲಿಖಿತ ಆದೇಶದ ಮೂಲಕ, ಆ ಆದೇಶದಲ್ಲಿ ಯಾವುದಾದರೂ ಷರತ್ತುಗಳನ್ನು ನಿರ್ದಿಷ್ಟಪಡಿಸುವುದಿದ್ದರೆ, ಅವುಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗಿನ ತನ್ನ ಯಾವ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು (ಅಧ್ಯಾಯ VIರ ಮೇರೆಗೆ ವಿವಾದವನ್ನು ಇತ್ಯರ್ಥಪಡಿಸಲು ಮತ್ತು 61ನೇ ಪ್ರಕರಣದ ಮೇರೆಗೆ ವಿನಿಯಮಗಳನ್ನು ರಚಿಸಲು ಇರುವ ಅಧಿಕಾರವನ್ನು ಹೊರತುಪಡಿಸಿ) ಮಂಡಳಿಯ ಯಾರೇ ಸದಸ್ಯನಿಗೆ ಅಥವಾ ಅಧಿಕಾರಿಗೆ ವಹಿಸಿಕೊಡುವುದು ಅವಶ್ಯವೆಂದು ಭಾವಿಸುತ್ತದೋ ಅಂಥ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಅವರಿಗೆ ವಹಿಸಿಕೊಡಬಹುದು.

59. **ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಾಗ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು ಅಂಥ ತೊಂದರೆಯನ್ನು ನಿವಾರಿಸಲು ಅವಶ್ಯಕವೆಂದು ತಾನು ಭಾವಿಸುವಂಥ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂಥ ಉಪಬಂಧಗಳನ್ನು ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳು ಮುಗಿದ ತರುವಾಯ ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ನಂತರ ಆದಷ್ಟು ಬೇಗನೆ ಸಂಸತ್ತಿನ ಉಭಯ ಸದನಗಳ ಮುಂದೆ ಇಡತಕ್ಕದ್ದು.

60. **ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರಲು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಮುಂದಿನ ಎಲ್ಲಾ ವಿಷಯಗಳಿಗೆ ಅಥವಾ ಯಾವುದೇ ವಿಷಯಕ್ಕೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 5ನೇ ಪ್ರಕರಣದ (4)ನೇ ಉಪ ಪ್ರಕರಣದ ಮೇರೆಗೆ ಅಧ್ಯಕ್ಷರಿಗೆ ಮತ್ತು ಇತರ ಸದಸ್ಯರುಗಳಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು ಹಾಗೂ ಅವರ ಸೇವೆಯ ಇತರ ಷರತ್ತುಗಳು;

(ಬಿ) 7ನೇ ಪ್ರಕರಣದ ಮೇರೆಗೆ ವಿಚಾರಣೆಯನ್ನು ನಡೆಸುವುದಕ್ಕಾಗಿ ಯಾರೇ ವ್ಯಕ್ತಿಯ ನೇಮಕಕ್ಕೆ ಅಥವಾ ಯಾವುದೇ ಪ್ರಾಧಿಕಾರದ ರಚನೆಗೆ ಮತ್ತು ಅಂಥ ವಿಚಾರಣೆಗೆ ಸಂಬಂಧಿಸಿದ ಕಾರ್ಯವಿಧಾನ;

(ಸಿ) 10ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ಮಂಡಳಿಯ ಕಾರ್ಯದರ್ಶಿಗೆ, ಅಧಿಕಾರಿಗಳಿಗೆ ಮತ್ತು ಇತರ ನೌಕರರುಗಳಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು ಹಾಗೂ ಅವರ ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು;

(ಡಿ) ಮಂಡಳಿಯು ಯಾವ ವಿಷಯದ ಸಂಬಂಧದಲ್ಲಿ 13ನೇ ಪ್ರಕರಣದ (1)ನೇ ಉಪ ಪ್ರಕರಣದ (i)ನೇ ಖಂಡದ ಮೇರೆಗೆ ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸಬಹುದೋ ಆ ಯಾವುದೇ ಇತರ ವಿಷಯ;

(ಇ) 15ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ನೋಂದಣಿಗಾಗಿ ಸಂಸ್ಥೆಯು ಯಾವ ಅರ್ಹತಾ ಷರತ್ತುಗಳನ್ನು ಈಡೇರಿಸಬೇಕೋ ಆ ಅರ್ಹತಾ ಷರತ್ತುಗಳು;

(ಎಫ್) 33ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಅಪೀಲಿನ ನಮೂನೆ ಮತ್ತು ಅಂಥ ನಮೂನೆಯನ್ನು ಪರಿಶೀಲಿಸುವ ವಿಧಾನ ಮತ್ತು ಅಂಥ ನಮೂನೆಯೊಂದಿಗೆ ಇರಿಸಬೇಕಾದ ಫೀಜು;

(ಜಿ) 40ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಮಂಡಳಿಯು ಲೆಕ್ಕಪತ್ರಗಳನ್ನು ಯಾವ ರೀತಿಯಲ್ಲಿ ನಿರ್ವಹಿಸಬೇಕೋ ಆ ರೀತಿ;

(ಎಚ್) 41ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಮಂಡಳಿಯ ವಾರ್ಷಿಕ ವರದಿಯನ್ನು ಯಾವ ಕಾಲದಲ್ಲಿ ಮತ್ತು ರೀತಿಯಲ್ಲಿ ಸಿದ್ಧಪಡಿಸಬೇಕೋ ಆ ಕಾಲ ಮತ್ತು ರೀತಿ;

(ಐ) 43ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ, ಪರಿಹಾರವನ್ನು ಕ್ಲೇಮು ಮಾಡುವ ಅರ್ಜಿಗಳು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಇರಬೇಕೋ, ಆ ನಮೂನೆ ಮತ್ತು ರೀತಿ, ಪರಿಹಾರವನ್ನು ನಿರ್ಧರಿಸುವ ಕಾರ್ಯವಿಧಾನ ಹಾಗೂ ಪರಿಹಾರವನ್ನು ಯಾವ ಕಾಲದೊಳಗೆ ಸಂದಾಯ ಮಾಡಬೇಕೋ ಆ ಕಾಲ;

(ಜೆ) 53ನೇ ಪ್ರಕರಣದ ಮೇರೆಗೆ ಮಂಡಳಿಯು ಕೇಂದ್ರ ಸರ್ಕಾರಕ್ಕೆ ವಿವರ ಪಟ್ಟಿಕೆಗಳನ್ನು ಮತ್ತು ವಿವರಣಾ ಪತ್ರಗಳನ್ನು ಯಾವ ಕಾಲದಲ್ಲಿ ಮತ್ತು ರೀತಿಯಲ್ಲಿ ಒದಗಿಸಬೇಕೋ ಆ ಕಾಲ ಮತ್ತು ರೀತಿ;

(ಕೆ) ಯಾವ ವಿಷಯವನ್ನು ನಿಯಮಗಳ ಮೂಲಕ ನಿಯಮಿಸಬೇಕಾಗಿದೆಯೋ ಅಥವಾ ನಿಯಮಿಸಬಹುದೋ ಅಥವಾ ಯಾವುದೇ ಇತರ ವಿಷಯಕ್ಕೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸಬೇಕಾಗಿದೆಯೋ ಆ ಯಾವುದೇ ಇತರ ವಿಷಯ.

61. **ವಿನಿಯಮಗಳನ್ನು ರಚಿಸಲು ಮಂಡಳಿಯ ಅಧಿಕಾರ.–** (1) ಮಂಡಳಿಯು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರಲು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಸುಸಂಗತವಾದ ವಿನಿಯಮಗಳನ್ನು ಅಧಿಸೂಚನೆಯ ಮೂಲಕ ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ವಿನಿಯಮಗಳು ಈ ಮುಂದಿನ ಎಲ್ಲ ವಿಷಯಗಳಿಗೆ ಅಥವಾ ಯಾವುದೇ ವಿಷಯಕ್ಕೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 8ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಮಂಡಳಿಯ ಸಭೆಗಳನ್ನು ನಡೆಸುವ ಕಾಲ ಮತ್ತು ಸ್ಥಳಗಳು ಹಾಗೂ ಅಂಥ ಸಭೆಗಳಲ್ಲಿ (ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅಗತ್ಯವಾದ ಕೋರಂ ಒಳಗೊಂಡಂತೆ) ಅನುಸರಿಸಬೇಕಾದ ಕಾರ್ಯವಿಧಾನ;

(ಬಿ) 10ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಕಾರ್ಯದರ್ಶಿಯ ಅಧಿಕಾರಗಳು ಮತ್ತು ಕರ್ತವ್ಯಗಳು;

(ಸಿ) 10ನೇ ಪ್ರಕರಣದ (4)ನೇ ಉಪ ಪ್ರಕರಣದ ಮೇರೆಗೆ ಸಮಾಲೋಚಕರ ನೇಮಕಕ್ಕೆ ಸಂಬಂಧಿಸಿದ ನಿಬಂಧನೆ ಮತ್ತು ಷರತ್ತುಗಳು;

(ಡಿ) 11ನೇ ಪ್ರಕರಣದ (ಬಿ) ಖಂಡದ (iii)ನೇ ಉಪ ಖಂಡದ ಮೇರೆಗೆ ನೋಂದಣಿಯ ಅಗತ್ಯವಿರುವ ಪೆಟ್ರೋಲಿಯಂನ, ಪೆಟ್ರೋಲಿಯಂ ಉತ್ಪನ್ನಗಳ ಮತ್ತು ನೈಸರ್ಗಿಕ ಅನಿಲದ ದಾಸ್ತಾನು ಸೌಲಭ್ಯಗಳ ಸಂಗ್ರಹಣಾ ಸಾಮರ್ಥ್ಯ;

(ಇ) 11ನೇ ಪ್ರಕರಣದ (ಇ) ಖಂಡದಲ್ಲಿ ಉಲ್ಲೇಖಿಸಿದ ಸಾಮಾನ್ಯ ವಾಹಕಕ್ಕೆ ಅಥವಾ ಕರಾರು ವಾಹಕಕ್ಕೆ ಅಥವಾ ನಗರ ಅಥವಾ ಸ್ಥಳೀಯ ಅನಿಲ ವಿತರಣಾ ಜಾಲಕ್ಕೆ ಮುಕ್ತ ಪ್ರವೇಶಾವಕಾಶವನ್ನು ಮತ್ತು ಸಾಗಣೆ ದರವನ್ನು ಮತ್ತು ಇತರ ವಿಷಯಗಳನ್ನು ವಿನಿಯಮಿಸುವುದು;

(ಎಫ್) 11ನೇ ಪ್ರಕರಣದ (ಎಫ್) ಖಂಡದ (v)ನೇ ಉಪ ಖಂಡದ ಮೇರೆಗೆ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಕ್ರಯ-ವಿಕ್ರಯ ಸೇವಾ ಬಾಧ್ಯತೆಗಳು ಮತ್ತು ಚಿಲ್ಲರೆ ಮಾರಾಟ ಮಳಿಗೆಗಳಿಗೆ ಸಂಬಂಧಿಸಿದ ಚಿಲ್ಲರೆ ಮಾರಾಟ ಸೇವಾ ಬಾಧ್ಯತೆಗಳು;

(ಜಿ) 11ನೇ ಪ್ರಕರಣದ (ಜಿ) ಖಂಡದ ಮೇರೆಗೆ ಫೀಜುಗಳನ್ನು ಮತ್ತು ಇತರ ಚಾರ್ಜುಗಳನ್ನು ವಿಧಿಸುವುದು;

(ಎಚ್) 11ನೇ ಪ್ರಕರಣದ (i)ನೇ ಖಂಡದ ಮೇರೆಗೆ ಪೆಟ್ರೋಲಿಯಂಗೆ, ಪೆಟ್ರೋಲಿಯಂ ಉತ್ಪನ್ನಗಳಿಗೆ ಮತ್ತು ನೈಸರ್ಗಿಕ ಅನಿಲಕ್ಕೆ ಸಂಬಂಧಿಸಿದ ಕಾರ್ಯ ಚಟುವಟಿಕೆಗಳಲ್ಲಿ ಸುರಕ್ಷಾ ಗುಣಮಟ್ಟಗಳೂ ಒಳಗೊಂಡಂತೆ ತಾಂತ್ರಿಕ ಗುಣಮಟ್ಟಗಳು ಮತ್ತು ತಪಶೀಲುಗಳು;

(ಐ) 13ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ಮಂಡಳಿಯು ತನ್ನ ಕಾರ್ಯಕಲಾಪಗಳನ್ನು ಯಾವ ಸ್ಥಳಗಳಲ್ಲಿ ನಡೆಸಬೇಕೋ ಆ ಸ್ಥಳಗಳೂ ಸೇರಿದಂತೆ ಅದು ಅನುಸರಿಸಬೇಕಾದ ಕಾರ್ಯವಿಧಾನ;

(ಜೆ) 14ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ರಿಜಿಸ್ಟರನ್ನು ನಿರ್ವಹಿಸುವ ರೀತಿ;

(ಕೆ) 14ನೇ ಪ್ರಕರಣದ (4)ನೇ ಉಪ ಪ್ರಕರಣದ ಮೇರೆಗೆ ರಿಜಿಸ್ಟರಿನಲ್ಲಿನ ಯಾವುದೇ ನಮೂದಿನ ಪ್ರಮಾಣಿತ ಪ್ರತಿಯನ್ನು ಪಡೆಯುವುದಕ್ಕಾಗಿ ಸಲ್ಲಿಸಬೇಕಾದ ಅರ್ಜಿಯ ನಮೂನೆ ಮತ್ತು ಅದನ್ನು ಸಲ್ಲಿಸುವ ರೀತಿ ಮತ್ತು ಅಂಥ ಅರ್ಜಿಯ ಜೊತೆಗೆ ಇರಿಸಬೇಕಾದ ಫೀಜು;

(ಎಲ್) 15ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಅರ್ಜಿಯನ್ನು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಸಲ್ಲಿಸಬೇಕೋ ಆ ನಮೂನೆ ಮತ್ತು ರೀತಿ ಹಾಗೂ 15ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಅಂಥ ಅರ್ಜಿಯ ಜೊತೆಗೆ ಇರಿಸಬೇಕಾದ ಫೀಜು;

(ಎಂ) 15ನೇ ಪ್ರಕರಣದ (3) ನೇ ಉಪ-ಪ್ರಕರಣದ ಮೇರೆಗೆ ಮಂಜೂರು ಮಾಡಿದ ನೋಂದಣಿ ಪ್ರಮಾಣಪತ್ರವನ್ನು 15ನೇ ಪ್ರಕರಣದ (4)ನೇ ಉಪ ಪ್ರಕರಣದ ಮೇರೆಗೆ ಯಾವ ರೀತಿಯಲ್ಲಿ ಅಮಾನತ್ತಿನಲ್ಲಿಡಬಹುದೋ ಅಥವಾ ರದ್ದು ಮಾಡಬಹುದೋ ಆ ರೀತಿ:

(ಎನ್) 17ನೇ ಪ್ರಕರಣದ (1)ನೇ ಉಪ ಪ್ರಕರಣದ ಅಥವಾ (2)ನೇ ಉಪ ಪ್ರಕರಣದ ಮೇರೆಗೆ ಅರ್ಜಿಯನ್ನು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಸಲ್ಲಿಸಬೇಕೋ ಆ ನಮೂನೆ ಮತ್ತು ರೀತಿ ಮತ್ತು 17ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ಅಂಥ ಅರ್ಜಿಯೊಂದಿಗೆ ಸಲ್ಲಿಸಬೇಕಾದ ಫೀಜು;

(ಒ) 18ನೇ ಪ್ರಕರಣದ ಮೇರೆಗೆ ನೋಂದಣಿಗಾಗಿ ಸಲ್ಲಿಸುವ ಅರ್ಜಿಗಳನ್ನು ಅಂಗೀಕರಿಸಿರುವುದನ್ನು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಪ್ರಚುರಪಡಿಸಬೇಕೋ ಆ ನಮೂನೆ ಮತ್ತು ರೀತಿ;

(ಪಿ) 19ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಸಂಸ್ಥೆಯನ್ನು ಆಯ್ಕೆ ಮಾಡುವ ರೀತಿ;

(ಕ್ಯೂ) 20ನೇ ಪ್ರಕರಣದ (4)ನೇ ಉಪ ಪ್ರಕರಣದ ಮೇರೆಗೆ ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲವನ್ನು ಸಾಮಾನ್ಯ ವಾಹಕದ ವ್ಯಾಪ್ತಿಯಿಂದ ಅಥವಾ ಕರಾರು ವಾಹಕದ ವ್ಯಾಪ್ತಿಯಿಂದ ಹೊರತುಪಡಿಸುವುದಕ್ಕೆ ಎಷ್ಟು ವರ್ಷಗಳು ಬೇಕಾಗುತ್ತದೊ ಆ ಅವಧಿಯನ್ನು ನಿರ್ಧರಿಸುವುದಕ್ಕೆ ಸಂಬಂಧಿಸಿದ ತತ್ವಗಳು;

(ಆರ್) 20ನೇ ಪ್ರಕರಣದ (5)ನೇ ಉಪ ಪ್ರಕರಣದ ಮೇರೆಗೆ ಸಾಮಾನ್ಯ ವಾಹಕವನ್ನು ಅಥವಾ ಕರಾರು ವಾಹಕವನ್ನು ವಿನ್ಯಾಸಗೊಳಿಸುವುದಕ್ಕಾಗಿ, ನಿರ್ಮಿಸುವುದಕ್ಕಾಗಿ, ನಿರ್ವಹಿಸುವುದಕ್ಕಾಗಿ ಅಥವಾ ವಿಸ್ತರಿಸುವುದಕ್ಕಾಗಿ ಘೋಷಣೆ ನೀಡಲು ಅಥವಾ ಅಧಿಕಾರ ನೀಡಲು ಅಥವಾ ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲವನ್ನು ವಿನ್ಯಾಸಗೊಳಿಸುವುದಕ್ಕಾಗಿ, ನಿರ್ಮಿಸುವುದಕ್ಕಾಗಿ, ನಿರ್ವಹಿಸುವುದಕ್ಕಾಗಿ ಅಥವಾ ವಿಸ್ತರಿಸುವುದಕ್ಕಾಗಿ ಘೋಷಣೆ ಮಾಡಲು ಅಥವಾ ಅಧಿಕಾರ ನೀಡಲು ಮಂಡಳಿಯು ಅನುಸರಿಸಬೇಕಾದ ಮಾರ್ಗದರ್ಶಿ ಸೂತ್ರಗಳು ಮತ್ತು ಅದಕ್ಕೆ ಸಂಬಂಧಿಸಿದ ಉದ್ದೇಶಗಳು;

(ಎಸ್) 21ನೇ ಪ್ರಕರಣದ (1)ನೇ ಉಪ ಪ್ರಕರಣದ ಪರಂತುಕದ ಮೇರೆಗೆ ಸಂಸ್ಥೆಗಳು ಯಾವ ಅಂಗ ಸಂಸ್ಥೆ ನೀತಿ ಸಂಹಿತೆಯನ್ನು ಪಾಲಿಸಬೇಕೆಂದು ಸಂಸ್ಥೆಗಳನ್ನು ಅಗತ್ಯಪಡಿಸಲಾಗಿದೆಯೋ ಆ ನೀತಿ ಸಂಹಿತೆ;

(ಟಿ) 22ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಸಾಮಾನ್ಯ ವಾಹಕಗಳಿಗೆ ಅಥವಾ ಕರಾರು ವಾಹಕಗಳಿಗೆ ಅಥವಾ ನಗರ ಅಥವಾ ಸ್ಥಳೀಯ ನೈಸರ್ಗಿಕ ಅನಿಲ ವಿತರಣಾ ಜಾಲಕ್ಕೆ ಅನ್ವಯವಾಗುವ ಸಾಗಣೆ ದರಗಳು ಮತ್ತು ಅಂಥ ಸಾಗಣೆ ದರಗಳನ್ನು ನಿರ್ಧರಿಸುವ ರೀತಿ;

(ಯು) 25ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ದೂರನ್ನು ಯಾವ ನಮೂನೆಯಲ್ಲಿ ಸಲ್ಲಿಸಬಹುದೋ ಆ ನಮೂನೆ ಮತ್ತು ಅಂಥ ದೂರಿನ ಜೊತೆಗೆ ಇರಿಸಬೇಕಾದ ಫೀಜು;

(ವಿ) 26ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ತನಿಖಾಧಿಕಾರಿಯು ತನಿಖೆಯನ್ನು ನಡೆಸುವ ರೀತಿ;

(ಡಬ್ಲ್ಯು) 26ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ, ಯಾರೇ ವ್ಯಕ್ತಿಯು ತನಿಖಾಧಿಕಾರಿಯಾಗಿ ನೇಮಕಗೊಳ್ಳುವುದಕ್ಕಾಗಿ ಯಾವ ಅರ್ಹತೆಗಳನ್ನು ಮತ್ತು ಅನುಭವಗಳನ್ನು ಹೊಂದಿರಬೇಕೋ ಆ ಅರ್ಹತೆಗಳು ಮತ್ತು ಅನುಭವ;

(ಎಕ್ಸ್) 51ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಮಂಡಳಿಯು ನಿರ್ವಹಿಸಬೇಕಾದ ದತ್ತಾಂಶ ಕೋಶವನ್ನು ಮತ್ತು ಮಾಹಿತಿ ವ್ಯವಸ್ಥೆಯನ್ನು ನಿರ್ವಹಿಸಬೇಕಾದ ನಮೂನೆ ಮತ್ತು ರೀತಿ;

(ವೈ) 52ನೇ ಪ್ರಕರಣದ (1)ನೇ ಉಪ ಪ್ರಕರಣದ (ಎ) ಖಂಡದ ಮೇರೆಗೆ ಸಂಸ್ಥೆಯಿಂದ ದಸ್ತಾವೇಜು ದಾಖಲೆಗಳ ನಿರ್ವಹಣೆ;

(ಜಡ್) 52ನೇ ಪ್ರಕರಣದ (1)ನೇ ಉಪ ಪ್ರಕರಣದ (ಡಿ) ಖಂಡದ (ii)ನೇ ಉಪಖಂಡದ ಮೇರೆಗೆ ಯಾವ ಇತರ ಬಗೆಯ ದಸ್ತಾವೇಜುಗಳನ್ನು ಮಂಡಳಿಯಲ್ಲಿ ನೋಂದಾಯಿಸಬೇಕಾಗಿದೆಯೋ ಆ ಯಾವುದೇ ಇತರ ಬಗೆಯ ದಸ್ತಾವೇಜುಗಳು;

(ಜಡ್ಎ) ವಿನಿಯಮಗಳ ಮೂಲಕ ಯಾವ ವಿಷಯವನ್ನು ನಿರ್ದಿಷ್ಟಪಡಿಸಬೇಕಾದ ಅಥವಾ ನಿರ್ದಿಷ್ಟಪಡಿಸಬಹುದಾದ ಅಗತ್ಯವಿದೆಯೋ ಅಥವಾ ಯಾವ ವಿಷಯಕ್ಕೆ ಸಂಬಂಧಿಸಿದಂತೆ ಉಪಬಂಧಗಳನ್ನು ಕಲ್ಪಿಸಬೇಕಾಗಿದೆಯೋ ಅಥವಾ ಉಪಬಂಧ ಕಲ್ಪಿಸಬಹುದೋ ಆ ಯಾವುದೇ ಇತರ ವಿಷಯ.

**62. ನಿಯಮಗಳನ್ನು ಮತ್ತು ವಿನಿಯಮಗಳನ್ನು ಸಂಸತ್ತಿನ ಮುಂದೆ ಇಡುವುದು.**– ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ಮಂಡಳಿಯು ರಚಿಸಿದ ಪ್ರತಿಯೊಂದು ವಿನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ ವಿನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ನಿಯಮವು ಅಥವಾ ವಿನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಅಥವಾ ವಿನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**63. ಮಧ್ಯಕಾಲೀನ ಏರ್ಪಾಡುಗಳು.**– (1) ಈ ಅಧಿನಿಯಮವು ಜಾರಿಗೆ ಬರುವುದಕ್ಕೆ ಮುಂಚೆ, ತೈಲ ಕಂಪನಿಗಳ ನಡುವೆ ಪೆಟ್ರೋಲಿಯಂ ಉತ್ಪನ್ನಗಳನ್ನು ಹಂಚಿಕೊಳ್ಳುವ ಅಥವಾ ಮೂಲಸೌಕರ್ಯಗಳನ್ನು ಹಂಚಿಕೊಳ್ಳುವ ಉದ್ದೇಶಕ್ಕಾಗಿ ಒಂದು ತೈಲ ಕಂಪನಿಯ ಮತ್ತು ಇನ್ನೊಂದು ತೈಲ ಕಂಪನಿಯ ಮಧ್ಯೆ ಒಪ್ಪಂದವನ್ನು ಅಥವಾ ಒಪ್ಪಂದಗಳನ್ನು ಮಾಡಿಕೊಂಡಿರುವಲ್ಲಿ ಮತ್ತು ಅಂಥ ಒಪ್ಪಂದಗಳನ್ನು ಕೇಂದ್ರ ಸರ್ಕಾರವು ಅನುಮೋದಿಸಿರುವಲ್ಲಿ, ಮಂಡಳಿಯು ಮಧ್ಯಕಾಲೀನ ಅವಧಿಯಲ್ಲಿ ಅಂಥ ಒಪ್ಪಂದಗಳ ಅನುಷ್ಠಾನದ ಮೇಲ್ವಿಚಾರಣೆ ಮಾಡಬಹುದು.

(2) ಮಧ್ಯಕಾಲೀನ ಅವಧಿಯಲ್ಲಿ ಹಾಲಿ ಇರುವ ಸಂಸ್ಥೆಗಳ ಚಿಲ್ಲರೆ ಮಾರಾಟ ಜಾಲವನ್ನು ಅತಿಕ್ರಮಿಸದೆ ಸಂಸ್ಥೆಗಳಿಂದ ಮೋಟಾರು ಸ್ಪಿರಿಟ್‌ನ, ಹೈ ಸ್ಪೀಡ್, ಡೀಸೆಲ್‌ನ, ಉತ್ತಮ ಗುಣಮಟ್ಟದ ಸೀಮೆಎಣ್ಣೆಗಾಗಿ, ದ್ರವೀಕೃತ ಪೆಟ್ರೋಲಿಯಂ ಅನಿಲ ಮತ್ತು ಸಿಎನ್‌ಜಿ ಕೇಂದ್ರ ನೈಸರ್ಗಿಕ ಅನಿಲದ ಡೀಲರ್‌ಶಿಪ್‌ಗಳ ಅಥವಾ ಡಿಸ್ಟ್ರಿಬ್ಯೂಟರ್‌ಗಳ ಅಥವಾ ವಿತರಣೆ ನೀಡಿಕೆಯನ್ನು ಮಂಡಳಿಯು ಮೇಲ್ವಿಚಾರಣೆ ಮಾಡತಕ್ಕದ್ದು.

**ವಿವರಣೆ I.**– ಈ ಪ್ರಕರಣದ ಉದ್ದೇಶಗಳಿಗಾಗಿ, "ಮಧ್ಯಕಾಲೀನ ಅವಧಿ" ಎಂದರೆ ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಮೂರು ವರ್ಷಗಳ ಅವಧಿ.

**ವಿವರಣೆ II.**– ಈ ಪ್ರಕರಣದ ಉದ್ದೇಶಗಳಿಗಾಗಿ, "ಮೂಲಸೌಕರ್ಯಗಳು" ಎಂದರೆ ನೀರು ಸರಬರಾಜು ಕೊಳವೆ ಮಾರ್ಗಗಳು ಸೇರಿದಂತೆ ಬಂದರುಗಳಲ್ಲಿ, ತೈಲ ಸಂಸ್ಕರಣಾ ಕೇಂದ್ರಗಳಲ್ಲಿ, ತೈಲಾಗಾರಗಳಲ್ಲಿ, ಡಿಪೋಗಳಲ್ಲಿ ಮತ್ತು ವಿಮಾನದ ಇಂಧನವನ್ನು ತುಂಬುವ ಕೇಂದ್ರಗಳಲ್ಲಿ ಇರುವ ಸೌಲಭ್ಯಗಳು.

**ವಿವರಣೆ III.**– ಈ ಪ್ರಕರಣದ ಉದ್ದೇಶಗಳಿಗಾಗಿ, "ಅತಿಕ್ರಮಿಸುವುದು" ಎಂಬುದರಲ್ಲಿ ಒಂದು ಸಂಸ್ಥೆಯ ಚಿಲ್ಲರೆ ಮಾರಾಟ ಮಳಿಗೆಯನ್ನು ಮತ್ತೊಂದು ಸಂಸ್ಥೆಯು ವಹಿಸಿಕೊಳ್ಳುವುದು ಒಳಗೊಳ್ಳುತ್ತದೆ.

* * * * *